# ಮರಳಿ ಭಗವಂತನೆಡೆಗೆ

ಹರೇಕೃಷ್ಣ ಆಂದೋಲನದ ಪತ್ರಿಕೆ

ಸಂಪುಟ – 17
ಸಂಚಿಕೆ – 1
ಮೇ / ಜೂನ್ 2019


## ಒಳಗೆ .......





ಸಂಸ್ಥಾಪಕರ ಉಪನ್ಯಾಸ
ಬೇರೆಲ್ಲವನ್ನು ಬಿಟ್ಟು ಭಕ್ತಿಯನ್ನು ಮಾತ್ರ ಆಶಿಸಿ 3



ವೈಷ್ಣವ ಕ್ಯಾಲೆಂಡರ್ 7



ಸೌರಾಷ್ಟ್ರದ ವೈಭವ 10



ಶ್ರೀ ಕೃಷ್ಣನ ಲೀಲೆಗಳು 8




ಅನಂತ ಪರಮಾನಂದ ಮತ್ತು ನಾನು 17




ಶ್ರೀಲ ಪ್ರಭುಪಾದ ಲೀಲಾಮೃತ 26




ಮಂತ್ರ ದಂಡ 22



ಶ್ರೀಮದ್ಭಾಗವತಮ್ 31



ಶ್ರೀಲ ಪ್ರಭುಪಾದ ಉವಾಚ
ಒಬ್ಬ ನಾಯಕನ ಅರ್ಹತೆಗಳು 28



ವೇದ ವಿಚಾರಗಳು 32


ಕೃಷ್ಣಕೃಪಾ ಶ್ರೀಮೂರ್ತಿ ಭಕ್ತಿಸಿದ್ಧಾಂತ ಸರಸ್ವತೀ ಪ್ರಭುಪಾದರ ಮಾರ್ಗದರ್ಶನದಲ್ಲಿ ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಸ್ಥೆಯ ಸಂಸ್ಥಾಪಕಾಚಾರ್ಯರಾದ ಕೃಷ್ಣಕೃಪಾ ಶ್ರೀ ಮೂರ್ತಿ ಎ.ಸಿ.ಭಕ್ತಿವೇದಾಂತ ಸ್ವಾಮಿ ಪ್ರಭುಪಾದರು ಆಂಗ್ಲ ಭಾಷೆಯಲ್ಲಿ ''ಬ್ಯಾಕ್ ಟು ಗಾಡ್ ಹೆಡ್'' ಪತ್ರಿಕೆಯನ್ನು 1944ರಲ್ಲಿ ಪ್ರಾರಂಭಿಸಿದರು.

''ಮರಳಿ ಭಗವಂತನೆಡೆಗೆ'' ಪತ್ರಿಕೆಯು ಮಾನವ ಸಮಾಜದಲ್ಲಿ ಮನುಷ್ಯನ ಬದುಕನ್ನು ಸ್ವಚ್ಛಗೊಳಿಸಲು ಆಧ್ಯಾತ್ಮಿಕ ಸಾಧನ.ಇವು ನಮ್ಮ ಉದ್ದೇಶಗಳು :

1.ಜನರಿಗೆ ಮಾಯೆಯಿಂದ ವಾಸ್ತವಿಕತೆಯೆಡೆಗೆ, ಜಡವಸ್ತುವಿನಿಂದ ಚೇತನದೆಡೆಗೆ, ತಾತ್ಕಾಲಿಕದಿಂದ ಶಾಶ್ವತದೆಡೆಗೆ ಗಮನ ಹರಿಸುವುದಕ್ಕೆ ಸಹಾಯ ಮಾಡುವುದು. 2.ಭೌತಿಕ ವಾದದಲ್ಲಿರುವ ಲೋಪದೋಷಗಳನ್ನು ಬೆಳಕಿಗೆ ತರುವುದು. 3.ಆಧ್ಯಾತ್ಮಿಕ ಜೀವನಕ್ಕೆ ವೈದಿಕ ಕಲಾಕೌಶಲದ ಮಾರ್ಗದರ್ಶನ ನೀಡುವುದು. 4.ವೈದಿಕ ಸಂಸ್ಕೃತಿಯನ್ನು ಸಂರಕ್ಷಿಸುವುದು ಮತ್ತು ಪ್ರಚಾರ ಮಾಡುವುದು. 5.ಶ್ರೀಚೈತನ್ಯ ಮಹಾಪ್ರಭುಗಳು ಉಪದೇಶಿಸಿರುವಂತೆ ಭಗವಂತನ ದಿವ್ಯನಾಮಗಳ ಜಪವನ್ನು ಪ್ರಖ್ಯಾತ ಗೊಳಿಸುವುದು. 6.ಎಲ್ಲಾ ಜೀವಿಗಳಿಗೆ ದೇವೋತ್ತಮ ಪುರುಷನಾದ ಶ್ರೀಕೃಷ್ಣನು,ನೆನಪಿನಲ್ಲಿಟ್ಟುಕೊಳ್ಳಲು, ಸೇವೆ ಮಾಡಲು ಸಹಾಯ ಮಾಡುವುದು.


ಬಿ.ಬಿ.ಟಿ.ಟ್ರಸ್ಟಿಗಳು : ಪ.ಪೂ.ಜಯದ್ವೈತ ಸ್ವಾಮಿ ಮಹಾರಾಜ್
ಸಂಪಾದಕರು : ಮಥುರ ಶ್ಯಾಮ ದಾಸ (ಮಧೂಕರ್.ಆರ್)
ಸಹ ಸಂಪಾದಕರು : ತ್ರಿವಿಕ್ರಮ ಕೃಷ್ಣ ದಾಸ
ಪ್ರಕಾಶಕರು : ನರಹರಿ ಚೈತನ್ಯ ದಾಸ
ಮುದ್ರಕರು : ಬಿ.ಜಿ.ಸದಾನಂದ್ ಸಿಂಗ್,
ಪ್ರಿಂಟ್ ಪಾಯಿಂಟ್ ಇಂಡಿಯಾ ಪ್ರೈ.ಲಿ.,
ನಂ.42, ಎಲೆಕ್ಟ್ರಾನಿಕ್ ಸಿಟಿ, 2ನೇ ಹಂತ,
ಬೆಂಗಳೂರು - 560 100.



© ಭಕ್ತಿವೇದಾಂತ ಬುಕ್ ಟ್ರಸ್ಟ್ ಇಂಟರ್ನೇಷನಲ್



**ಕಾರ್ಯಾಲಯ** : ಮರಳಿ ಭಗವಂತನೆಡೆಗೆ, ಇಸ್ಕಾನ್ ಶ್ರೀ ಜಗನ್ನಾಥ ಮಂದಿರ,
ಸಂವೃದ್ಧಿ ಎನ್ಕ್ಲೇವ್, 3ನೇ ಮುಖ್ಯ ರಸ್ತೆ,
ಕುಮಾರಸ್ವಾಮಿ ಲೇಔಟ್ 2ನೇ ಹಂತ, ಬೆಂಗಳೂರು-61.

**ಸಂಪಾದಕೀಯ ಕಾರ್ಯಾಲಯ :**
ಮರಳಿ ಭಗವಂತನೆಡೆಗೆ, c/o ಮಥುರ ಶ್ಯಾಮ ದಾಸ,
31, 60 ಅಡಿ ರಸ್ತೆ, ಶಿವನಗರ, ರಾಜಾಜಿನಗರ, ಬೆಂಗಳೂರು - 10.
**ದೂ :** 080–23355014, 98440 33066
mathurashyam@gmail.com

# ಹೆಸರುಗಳಲ್ಲಿ ಯಾವ ಹೆಸರು ಮುಖ್ಯ?

ಹರೇ ಕೃಷ್ಣ. ಎಲ್ಲಾ ಓದುಗರಿಗೆ ಶ್ರೀ ನರಸಿಂಹ ಚತುರ್ದಶಿಯ ಶುಭಾಶಯಗಳು. ಈ ಭೌತಿಕ ಲೋಕದಲ್ಲಿರುವ ಪ್ರತಿ ಒಂದು ಪದಾರ್ಥಕ್ಕೆ, ವ್ಯಕ್ತಿಗೆ ಮತ್ತು ಗಿಡ ಮರಗಳಿಗೆ, ಪಶು ಪ್ರಾಣಿಗಳಿಗೆ ಕಾಣುತ್ತಿರುವ ಪ್ರತಿ ಒಂದಕ್ಕೂ ಒಂದು ಹೆಸರಿದೆ. ಹೆಸರು ಆಯಾ ಪದಾರ್ಥ ಅಥವಾ ಪ್ರಾಣಿ ಇತ್ಯಾದಿಗಳ ಪರಿಚಯವನ್ನು ನಮಗೆ ನೀಡುತ್ತದೆ. ಹೆಸರಿಲ್ಲದ ವಸ್ತು, ವ್ಯಕ್ತಿ, ವಿಷಯವು ಯಾವುದೂ ಇಲ್ಲ. ನಾವು ಮಾಡುತ್ತಿರುವ ಪ್ರತಿ ಒಂದುಚಟುವಟಿಕೆಗೂ ಸಹ ಒಂದು ಹೆಸರಿದೆ. ನಾವು ನಿರ್ಮಿಸಿದ ಭವಂತಿಗಳಿಗೂ ನಾವು ಹೆಸರನ್ನು ನೀಡುತ್ತೇವೆ. ಪ್ರತಿ ಒಂದು ವ್ಯಾಪಾರ ವಹಿವಾಟಿಗೂ ಸಹ ಹೆಸರಿದೆ. ಚಲನ ಚಿತ್ರಗಳು, ರಾಜಕೀಯರಂಗ, ಕ್ರೀಡಾರಂಗ ಅಥವಾ ಸಾಮಾಜಿಕ ಸೇವೆಗಳನ್ನು ಸಲ್ಲಿಸುತ್ತಿರುವ ಸಂಸ್ಥೆಗಳಿಗೂ ಸಹ ಹೆಸರನ್ನುವುದು ಇದೆ. ಒಂದೇ ಮಾತಲ್ಲಿ ಹೇಳಬೇಕಾದರೆ ಹೆಸರಿಲ್ಲದೆ ನಾವೂ ಯಾವುದನ್ನೂ ಗುರುತಿಸಲು ಆಗುವುದಿಲ್ಲ. ಹೆಸರೆನ್ನುವುದು ನಮ್ಮ ಜೀವನದ ಒಂದು ಅಂಗ. ಹೆಸರಿನಿಂದಲೇ ನಾವು ಪ್ರತಿಒಂದು ವ್ಯಕ್ತಿಯ ಜೊತೆಯಲ್ಲಿ ಸಂಪರ್ಕಿಸಲು ಯತ್ನಿಸುತ್ತೇವೆ. ಪ್ರತಿ ಒಂದು ಹಳ್ಳಿಗೂ, ನಗರಗಳಿಗೂ, ಪ್ರತಿ ಒಂದು ಪ್ರದೇಶಕ್ಕೂ ನಾವು ಹೆಸರನ್ನು ಇಟ್ಟುಕೊಂಡಿದ್ದೇವೆ. ಕೆಲವರು ಅವರ ಜೊತೆಯಲ್ಲಿ ವಾಸಿಸುತ್ತಿರುವ ಪ್ರಾಣಿಗಳಿಗೂ [ಬೆಕ್ಕು, ನಾಯಿ ಇತ್ಯಾದಿ] ಹೆಸರನ್ನುಇಟ್ಟುಕೊಂಡಿರುತ್ತಾರೆ. ಹೆಸರಿಲ್ಲದಿದ್ದರೆ ಅದರ ಅಸ್ತಿತ್ವವೇ ಇಲ್ಲ.

ಭಗವಂತನು ಸೃಷ್ಟಿಸಿರುವ ಈ ಪ್ರಪಂಚಕ್ಕೂಅಥವಾ ವಿಧ ವಿಧವಾದ ಲೋಕಗಳಿಗೂ ಹೆಸರುಗಳಿವೆ. ನಮ್ಮತಂತ್ರಜ್ಞರು ತಯಾರು ಮಾಡುತ್ತಿರುವ ವಿಧ ವಿಧವಾದ ಯಂತ್ರಗಳಿಗೂ ಅವರು ಹೆಸರುಗಳನ್ನೂ ನೀಡುತ್ತಿರುವುದು ನಮಗೆ ತಿಳಿದಿದೆ. ಬೆಳಗ್ಗೆ ಏಳುವುದರಿಂದ ಆರಂಭಿಸಿ ರಾತ್ರಿ ಮಲಗುವವರೆಗೂ ನಾವು ವಿಧ ವಿಧವಾದ ಹೆಸರುಗಳನ್ನು ಪಡೆದಿರುವ ವಸ್ತುಗಳನ್ನು ಬಳಸುತ್ತಿದ್ದೇವೆ [ಉದಾ: ಟೂತ್ ಬ್ರಷ್, ಗೀಸರ್, ವಾಷಿಂಗ್ ಮೆಷೀನ್, ಸ್ಟೌವ್, ವಾಟೆರ್ ಫಿಲ್ಟರ್, ಸ್ಕೋಟರ್, ಕಾರುಗಳು... ಇತ್ಯಾದಿ] ಹೆಜ್ಜೆ ಹೆಜ್ಜೆಗೂ ಹೆಸರುಗಳನ್ನು ಹೇಳುತ್ತಾ ವಿಧ ವಿಧವಾದ ಚಟುವಟಿಕೆಗಳನ್ನು ನಾವು ದಿನ ನಿತ್ಯದ ಜೀವನವನ್ನು ನಡೆಸುತ್ತಿದ್ದೇವೆ. ನಮ್ಮಜೀವನಕ್ಕೆ ಅಗತ್ಯವಾದ ಪದಾರ್ಥಗಳನ್ನು ತಯಾರುಮಾಡುತ್ತಿರುವ ವಿಧ ವಿಧವಾದ ಸಂಸ್ಥೆಗಳು ಅವರ ಉತ್ಪಾದನೆಗಳಿಗೆ ಒಂದು ಹೆಸರು [ಬ್ರಾಂಡ್] ನೀಡುತ್ತಿರುವುದು ನಮಗೆ ಗೊತ್ತಿದೆ. ಈ ಬ್ರಾಂಡ್‌ಗಳು ನಮ್ಮಜೀವನದಲ್ಲಿತುಂಬಾ ಮುಖ್ಯವಾಗಿವೆ. ನಮ್ಮ ಮೆದಳುನಲ್ಲಿ ನೆನಪು ಇಟ್ಟುಕೊಳ್ಳಲು ಕಷ್ಟವಾಗಬಹುದೆಂದು ನಮಗೆ ಅವುಗಳ ವಿವರಣೆಗಳನ್ನು ಗೂಗುಲ್ ನವರು ಸ್ಟೋರ್ ಮಾಡಿಟ್ಟಿದ್ದಾರೆ. ಈ ರೀತಿ ನಾನಾರೀತಿಯ ಹೆಸರುಗಳು ನಮ್ಮ ಹೃದಯದಲ್ಲಿ ಅಥವಾ ಪ್ರಜ್ಞೆಯಲ್ಲಿ ತುಂಬಿ ಹೋಗುತ್ತಿವೆ. ಹೀಗಾಗಿ ಕೆಲವೊಮ್ಮೆ ನಮ್ಮ ಸ್ನೇಹಿತರು, ಹಿತೈಶಿಗಳ ಹೆಸರುಗಳನ್ನು ನಾವು ಮರೆತು ಬಿಡುತ್ತೇವೆ.

ಆದರೆ ಒಂದು ವಿಷಯವನ್ನು ನಾವು ಇಲ್ಲಿ ಗ್ರಹಿಸಬಹುದಾಗಿದೆ. ಈ ಲೋಕದಲ್ಲಿರುವ ವ್ಯಕ್ತಿಗೂ ಮತ್ತು ವಿಧ ವಿಧವಾದ ಪದಾರ್ಥಗಳಿಗೂ ಅವುಗಳ ನಾಮಗಳಿಗೆ ಸಂಬಂಧವಿರುವುದಿಲ್ಲ. ಒಬ್ಬ ವ್ಯಕ್ತಿಯ ಹೆಸರು ಸಂತೋಷ್ಎಂದುಇರಬಹುದು, ಆದರೆ ಅವನು ಜೀವನದಲ್ಲಿ ಸಂತೋಷವನ್ನು ಕಾಣದಿರಬಹುದು. ಹಿಂದಿಯಲ್ಲಿ ಒಂದು ವಾಕ್ಯವಿದೆ... ನಾಮ್ ಹೈ ಗಂಗಾ ಬಾಯ್ ಪೀನೇಕೋ ಪಾನಿ ನಾಯ್... ಎಂದರೆಅವರ ಹೆಸರು ಗಂಗಾಬಾಯಿ ಆದರೆಅವರಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಅರ್ಥವೇನೆಂದರೆ ನಾವು ಇಟ್ಟುಕೊಂಡಿರುವ ಹೆಸರುಗಳಿಗೂ ನಮ್ಮ ವ್ಯಕ್ತಿತ್ವಕ್ಕೂ ಭೇದಗಳಿವೆ. ಆದರೆ ಭಗವಂತನಇನ್ನೊಂದು ಸೃಷ್ಟಿಯಾದ ಆಧ್ಯಾತ್ಮಿಕ ಲೋಕಗಳಲ್ಲಿ [ವೈಕುಂಠ, ಗೋಲೋಕ ಇತ್ಯಾದಿ] ವ್ಯಕ್ತಿಗೆ ಮತ್ತು ವಸ್ತುವಿಗೆ ಭೇದವಿಲ್ಲ [ಉದಾ: ನದಿಗಳು.. ನಮಗೆ ನೀರಿನರೂಪದಲ್ಲಿಕಾಣುತ್ತಿದ್ದರೂ ಅವರಿಗೆ ರೂಪವಿದೆ ಮತ್ತು ಹೆಸರಿದೆ... ಗಂಗಾನದಿ, ಕಾವೇರಿ ಮಾತೆ..] ಹಾಗಾಗಿಯೇ ನಮ್ಮ ಶಾಸ್ತ್ರಗಳು, ಆಚಾರ್ಯರು, ಗುರುಗಳು ಭಗವಂತನರೂಪಕ್ಕೂ ಅವನ ಹೆಸರಿಗೂ ವ್ಯತ್ಯಾಸವಿಲ್ಲವೆಂದು ಹೇಳುತ್ತಾರೆ. ಅಷ್ಟೆ ಅಲ್ಲ, ಅವನ ನಾಮವನ್ನುಉಚ್ಚರಿಸದರೆ ಅವನ ವ್ಯಕ್ತಿತ್ವವನ್ನು, ನಿಜವಾದರೂಪವನ್ನು ಮತ್ತು ಅವನ ವಿಧ ವಿಧವಾದ ಲೀಲೆಗಳನ್ನೂ ನಾವು ಅರ್ಥ ಮಾಡಿಕೊಳ್ಳಬಹುದು. ಅವನ ಲೀಲೆಗಳು ಮತ್ತು ಅವನ ಗುಣಗಳು ಅವನಿಗೆ ನಾಮಗಳಾಗಿವೆ. ಕೃಷ್ಣ..ಎಂದರೆ ಸರ್ವಾಕರ್ಷಕ ವೆಂದು ಒಂದು ಅರ್ಥ.ಎಲ್ಲರನ್ನೂಆಕರ್ಷಿಸಬಲ್ಲವನು.ರಾಮಎಂದರೆಆನಂದವನ್ನು ನೀಡುವನು. ಅವನು ತನ್ನ ನಾಮಗಳಲ್ಲಿ ತನ್ನಎಲ್ಲಾ ಶಕ್ತಿಗಳನ್ನೂ ಇಟ್ಟಿದ್ದಾನೆಂದು ಅಚಾರ್ಯರು, ದಾಸರು ಹೇಳುತ್ತಾರೆ. ಹರಿನಾಮ ನಮಗೆ, ನಾವು ಹುಡುಕುತ್ತಿರುವ ನಿಜವಾದ ಆನಂದವನ್ನು ನೀಡುತ್ತದೆ. ಭಗವಂತನೆಡೆಗೆ ಹೋಗಲು ನಮಗೆ ಅರ್ಹತೆಯನ್ನು ಕೊಡುತ್ತದೆ.

ಭೌತಿಕ ನಾಮಗಳನ್ನೇ ಉಚ್ಚರಿಸುತ್ತಿದ್ದರೆ ನಮಗೆ ಅಂತ್ಯದಲ್ಲಿ ಅವುಗಳೇ [ವಸ್ತು/ ವ್ಯಕ್ತಿ] ಜ್ಞಾಪಕಕ್ಕೆ ಬರುತ್ತವೆ, ಹಾಗಾಗಿ ನಾವು ಮತ್ತೆ ಈ ಲೋಕದಲ್ಲೆ ಹುಟ್ಟಬೇಕಾಗುತ್ತದೆ.ಭಗವಂತನ ನಾಮಗಳನ್ನು ಉಚ್ಚರಿಸಲು ದಿನ ನಿತ್ಯ ನಾವು ಪ್ರಯತ್ನ ಮಾಡಿದರೆ ನಮಗೆ ಭಗವಂತನಧಾಮದಲ್ಲಿ ಹುಟ್ಟುವಅವಕಾಶವಿರುತ್ತದೆ. ಬನ್ನಿ, ಹರೇ ಕೃಷ್ಣ ಮಹಾ ಮಂತ್ರವನ್ನುಆದಷ್ಟು ಬಾರಿ ದಿನ ನಿತ್ಯ ಜಪಿಸೋಣ, ಮರಳಿ ಭಗವಂತನೆಡೆಗೆ ಹೋಗೋಣ... ಹರೇ ಕೃಷ್ಣ.

- ಮಧುರ ಶ್ಯಾಮ ದಾಸ

# ಬೇರೆಲ್ಲವನ್ನು ಬಿಟ್ಟು ಭಕ್ತಿಯನ್ನು ಮಾತ್ರ ಆಶಿಸಿ

**ಒಬ್ಬಾತನು ಪ್ರಭುವಿಗೆ ಶುದ್ಧ ಭಕ್ತಿ ಅಥವಾ ಭಕ್ತಿ ಪೂರ್ವಕ ಸೇವೆಯನ್ನು ಪಡೆಯಲು, ಏನನ್ನೂ ಆಶಿಸಿದ ಸ್ಥಿತಿಯನ್ನು ಆತ ತಲುಪಬೇಕು.**

**( ಇಸ್ಕಾನ್ ಸಂಸ್ಥಾಪಕಾಚಾರ್ಯರಾದ ಶ್ರೀಮದ್ ಎ.ಸಿ. ಭಕ್ತಿವೇದಾಂತ ಸ್ವಾಮಿ ಪ್ರಭುಪಾದ )**

**ಮತ್ತೊ ಅಪ್ಯ ಅನಂತಾತ್ ಪರತಃ ಪರಸ್ ಮಾತ್**
**ಸ್ವರ್ಗ ಅಪವರ್ಗಾಧಿಪತೇರ್ ನ ಕಿಂಚಿತ್**
**ಯೆಶಾಮ್ ಕಿಮ್ ಉಸ್ಯಾದ್ ಇತರೇಣ ತೇಶಾಮ್**
**ಅಕಿಂಚನಾನಾಮ್ ಮಯಿ ಭಕ್ತಿ –ಭಾಜಾಮ್**

ಪ್ರಭು ಋಷಭದೇವ ಹೀಗೆ ಹೇಳಿದರು, "ನಾನು ಸಂಪೂರ್ಣವಾಗಿ ಸಂಪತ್ಭರಿತನು, ಸರ್ವಶಕ್ತನು ಹಾಗು ಬ್ರಹ್ಮ ಮತ್ತು ಸ್ವರ್ಗಾಧಿಪತಿಯಾದ ಇಂದ್ರನಿಗಿಂತಲೂ ಮೇಲಿನವನು. ಮುಕ್ತಿ ಹಾಗು ಸ್ವರ್ಗ ಲೋಕಗಳಲ್ಲಿ ಸಿಗುವಂತ ಎಲ್ಲ ಸಂತೋಷಗಳನ್ನು ಅನುಗ್ರಹಿಸುವವನು ನಾನೆ. ಈಗಿದ್ದರೂ ಬ್ರಾಹ್ಮಣರು ನನ್ನಿಂದ ಭೌತಿಕ ಸೌಲಭ್ಯಗಳನ್ನು ಬಯಸುವುದಿಲ್ಲ. ಅವರು ಬಹಳ ಶುದ್ಧರು ಹಾಗು ಏನನ್ನೂ ತಮ್ಮ ಸ್ವಾಧೀನದಲ್ಲಿ ಇರಿಸಲು ಬಯಸುವುದಿಲ್ಲ. ಕೇವಲ ನನ್ನ ಭಕ್ತಿ ಸೇವೆಯಲ್ಲಿ ಮಾತ್ರ ನಿರತರಾಗಿರುತ್ತಾರೆ. ಭೌತಿಕ ಸೌಲಭ್ಯಗಳಿಗಾಗಿ ಬೇರೆ ಯಾರನ್ನಾದರು ಕೇಳುವ ಅಗತ್ಯ ಅವರಿಗೇನಿದೆ? "ಶ್ರೀ.ಮ.ಭಾ.5.5.25

ಪ್ರಭು ಋಷಭದೇವನು ಕೃಷ್ಣನ ಅವತಾರ. ಭಕ್ತಿ ಯೋಗ ಅಥವಾ ಭಕ್ತಿಪೂರ್ವಕ ಜೀವನ ಎಷ್ಟು ಉನ್ನತವಾದದ್ದು ಎಂದರೆ ಅದರಲ್ಲಿ ತೊಡಗಿದವರು ಈ ಭೌತಿಕ ಲೋಕದ



ಭಾಗವಾದ ಸ್ವರ್ಗಲೋಕಗಳನ್ನಾಗಲಿ ಅಥವ ಮುಕ್ತಿಯನ್ನಾಗಲಿ ಅವರು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಆ ವರಮಾನಗಳನ್ನು ಕ್ಷುಲ್ಲಕ ಎಂದು ಅವರು ಭಾವಿಸುತ್ತಾರೆ. ಶ್ರೀ ಚೈತನ್ಯ ಮಹಾಪ್ರಭುಗಳ ಅನುಯಾಯಿಯಾದ ಪ್ರಭೋದಾನಂದ ಸರಸ್ವತಿಯವರು ಹೀಗೆ ಬರೆದಿದ್ದಾರೆ, "ಕೈವಲ್ಯಮ್ ನರಕಾಯತೆ": "ಪರಮನೊಂದಿಗೆ ಲೀನವಾಗುವ ಮುಕ್ತಿಯು ನರಕಕ್ಕೆ ಹೋಗುವುದಕ್ಕೆ ಸಮ". ಮತ್ತು ಸ್ವರ್ಗೀಯ ಲೋಕಗಳಾದ ಸ್ವರ್ಗಲೋಕ, ಜನೋಲೋಕ, ಮಹರ್ ಲೋಕ, ತಪೋಲೋಕದ ಬಗ್ಗೆ ಅವರು ಏನು ಹೇಳಿದ್ದಾರೆ? **"ತ್ರಿದಸ–ಪುರಾಕಾಶ–ಪುಷ್ಪಾಯತೆ"** "ಅವುಗಳು ಆಕಾಶದಲ್ಲಿರುವ ಭ್ರಮೆಯ ಪುಷ್ಪದಂತೆ ಅಮುಖ್ಯ".

ನೀವು ಸ್ವರ್ಗಲೋಕಕ್ಕೆ ಹೋಗಿ ದೇವಲೋಕದ ರಾಜನಾದ ಇಂದ್ರನಾಗುವಿರಿ ಎಂದುಕೊಳ್ಳೋಣ. ಆ ಸ್ಥಾನವು ಶಾಶ್ವತವಾದುದಲ್ಲ. ಪುಣ್ಯಕಾರ್ಯಗಳಿಂದ ನೀವು ಬ್ರಹ್ಮ, ಇಂದ್ರ ಹೀಗೆ ಹಲವಾರು ದೇವತೆಗಳಾಗಬಹುದು. ನೀವು ಅಂತಹ ಸ್ಥಾನವನ್ನು ಪಡೆಯಬಹುದು. ಆದರೆ ಬ್ರಹ್ಮನ ಗ್ರಹವಾದ ಬ್ರಹ್ಮಲೋಕಕ್ಕೆ ಹೋದರೂ ಕೂಡ ಏನು ಪ್ರಯೋಜನ? ನೀನು ಹಿಂತಿರುಗಲೇ ಬೇಕು. ಹಾಗೆಯೇ ಕೃಷ್ಣನಿಂದ ಹೊಮ್ಮುತ್ತಿರುವ ಆಧ್ಯಾತ್ಮಿಕ ನಿರಾಕಾರ ಶಕ್ತಿಯಾದ ಬ್ರಹ್ಮನ್ ಪ್ರಭೆಯನ್ನು ಪ್ರವೇಶಿಸಿದರೂ ಕೂಡ ಕ್ರಮೇಣ ಭೌತಿಕ ಜಗತ್ತಿಗೆ ಮತ್ತೆ ಬೀಳುತ್ತೇವೆ. ಆದ್ದರಿಂದ ಭಕ್ತರು ಅಕಿಂಚನ. ಈ ಎಲ್ಲವನ್ನು ಅವರು ನಿರ್ಲಕ್ಷಿಸುತ್ತಾರೆ. ಅವುಗಳ ಬಗ್ಗೆ ಕಾಳಜಿ ತೋರಿಸುವುದಿಲ್ಲ.

ಭೌತಿಕ ಸುಖವನ್ನು ಬಯಸುವ ಕರ್ಮಿಗಳು ದೇವಲೋಕಗಳಾದ ಸ್ವರ್ಗ ಲೋಕಕ್ಕೆ ಹೋಗಲು ಪ್ರಯತ್ನಿಸುತ್ತಾರೆ; ಯೋಗಿಗಳು ಅಥವ ಜ್ಞಾನಿಗಳು ಅಥವ ನಿರಾಕಾರವಾದಿ ತತ್ವಜ್ಞಾನಿಗಳು ದೇವರ ಪ್ರಭೆಯಾದ ಬ್ರಹ್ಮಜ್ಯೋತಿಯನ್ನು ಪ್ರವೇಶಿಸಲು ಬಯಸುತ್ತಾರೆ. ಆದರೆ ಒಬ್ಬ ಭಕ್ತನು ಯಾವ ತರಹದ ಉಪಶಮನವನ್ನು ಬಯಸುವುದಿಲ್ಲ ಏಕೆಂದರೆ ಒಬ್ಬ ಭಕ್ತನು ಭೌತಿಕ ಜಗತ್ತಿನಲ್ಲಿ ಅಹಿತಕರವಾಗಿರುವುದಿಲ್ಲ. ಏಕೆ? ಏಕೆಂದರೆ ಒಬ್ಬ ಭಕ್ತನು ದೇವರನ್ನು, ಕೃಷ್ಣನನ್ನು ಎಲ್ಲೆಡೆ ಕಾಣುತ್ತಾನೆ ಹಾಗು ಎಲ್ಲಿ

ಕೃಷ್ಣನು ನೆಲೆಸಿರುತ್ತಾನೋ ಅಲ್ಲಿ ಎಲ್ಲವೂ ಸರಿಯಾಗಿರುತ್ತದೆ. ಅದು ಪ್ರಭುವಿನ ಭಕ್ತಿ ಸೇವೆಯಲ್ಲಿ ನಿರತನಾದವನ ಅಭಿಪ್ರಾಯ.

*ನಾರಾಯಣ ಪರಾಃ ಸರ್ವೆ*

*ನ ಕುತಶ್ಚನ ಬಿಭ್ಯತಿ*

*ಸ್ವರ್ಗಾಪವರ್ಗ ನರಕೇಶ್ವ*

*ಅಪಿ ತುಲ್ಯಾರ್ಥ ದರ್ಶಿನಃ*

"ದೇವೋತ್ತಮ ಪರಮ ಪುರುಷನಾದ ನಾರಾಯಣನ ಭಕ್ತಿಪೂರ್ವಕ ಸೇವೆಯಲ್ಲಿ ತೊಡಗಿರುವ ಭಕ್ತರು ಜೀವನದ ಯಾವುದೇ ಸ್ಥಿತಿಗೆ ಹೆದರುವುದಿಲ್ಲ. ಅವರಿಗೆ ದೇವಲೋಕಗಳು, ಮುಕ್ತಿ ಹಾಗು ನರಕ ಲೋಕಗಳು ಇವೆಲ್ಲವೂ ಒಂದೇ, ಏಕೆಂದರೆ ಅವರು ಪ್ರಭುವಿನ ಸೇವೆಯಲ್ಲಿ ಮಾತ್ರ ಆಸಕ್ತರು". (ಶ್ರೀಮದ್ ಭಾಗವತಮ್ – 6.17.28) ಭಕ್ತರು ಸ್ವರ್ಗಲೋಕಕ್ಕೆ ಹೋಗುವುದಕ್ಕಾಗಲಿ ಅಥವ ಹೋಗದಿರುವುದಕ್ಕಾಗಲಿ ಆತಂಕ ಪಡುವುದಿಲ್ಲ. ಅವರು ತೃಪ್ತರು: "ಕೃಷ್ಣನು ನನ್ನನ್ನು ಎಲ್ಲಿಟ್ಟರೂ ಅದು ನನಗೆ ಒಪ್ಪುತ್ತದೆ. ಅದು ಸ್ವರ್ಗವೇ ಆಗಲಿ ಅಥವ ನರಕವೇ ಆಗಲಿ". ಅವರು ಹಾಗೆ ಭಾವಿಸುವುದು ಏಕೆಂದರೆ ತಮ್ಮೊಳಗೆ ಕೃಷ್ಣನನ್ನು ಗ್ರಹಿಸುತ್ತಾರೆ ಹಾಗು ಅವನೊಂದಿಗೆ ಮಾತ್ರ ಸಂಬಂಧಿಸಿರುತ್ತಾರೆ.


ದೇವೋತ್ತಮ ಪರಮ ಪುರುಷನು ಎಲ್ಲಿ ನೆಲೆಸಿರುತ್ತನೋ ಅದೇ ಆಧ್ಯಾತ್ಮಿಕ ಜಗತ್ತಾದ ವೈಕುಂಠ. ಪ್ರತಿಯೊಂದು ಜೀವಿಯ ಹೃದಯದಲ್ಲಿ ಪರಮ ಪ್ರಭು ನೆಲೆಸಿದ್ದಾನೆ. ನಾಯಿ ಹಾಗು ಹಂದಿಗಳಿಗೆ ಹೃದಯ ಇದೆ ಹಾಗು ಕೃಷ್ಣ ಅಲ್ಲಿ ನೆಲೆಸಿದ್ದಾನೆ. ಹಾಗೆಂದ ಮಾತ್ರಕ್ಕೆ ಕೃಷ್ಣನು ನಾಯಿ ಹಾಗು ಹಂದಿಗಳೊಡನೆ ವಾಸಿಸುತ್ತನೆಯೇ? ಇಲ್ಲ. ಆತ ವೈಕುಂಠದಲ್ಲಿ ವಾಸಿಸುತ್ತಿದ್ದಾನೆ. ಆತ ಎಲ್ಲೇ ಇದ್ದರೂ, ವೈಕುಂಠದಲ್ಲಿಯೇ ವಾಸಮಾಡುತ್ತಾನೆ. ಹಾಗೆಯೆ ಭಕ್ತರು ನಾರಾಯಣ ಅಥವ ಕೃಷ್ಣನೊಂದಿಗೆ ವಾಸಿಸುತ್ತಾರೆ, ಆಗಿದ್ದಲ್ಲಿ ಭಕ್ತನಿಗೆ ದೇವಲೋಕ ಅಥವ ನರಕ ಲೋಕ ಎಂಬ ಪ್ರಶ್ನೆಯೇ ಇಲ್ಲ. ಆತ ವೈಕುಂಠದಲ್ಲಿದ್ದಾನೆ. ಕೃಷ್ಣನು ವೈಕುಂಠದಲ್ಲಿದ್ದರೆ, ಭಕ್ತನು ಕೂಡ ವೈಕುಂಠದಲ್ಲಿರುತ್ತಾನೆ.

ಭಕ್ತರು ಕೃಷ್ಣ ಅಥವ ನಾರಾಯಣನೊಂದಿಗ ಸಂಬಂಧಪಟ್ಟಿರುತ್ತಾರೆ. ಆದ್ದರಿಂದ ಅವರಿಗೆ ಹೆದರಿಕೆ ಇರುವುದಿಲ್ಲ. ಮಹಾನ್ ಋಷಿಗಳಾದ ನಾರದರು ಎಲ್ಲೆಡೆ ಪ್ರವಾಸ ಮಾಡುತ್ತಾರೆ. ಅವರು ನಾರಾಯಣನನ್ನು ನೋಡಲು ನರಕಕ್ಕೆ, ದೇವಲೋಕಕ್ಕೆ ಹಾಗು ವೈಕುಂಠಕ್ಕೂ ಹೋಗುತ್ತಾರೆ. ಹಾಗು ಅವರು ಪ್ರಯಾಣಿಸುವಾಗ ಪ್ರಭುವಿನ ಪುಣ್ಯ ನಾಮಗಳನ್ನು ಜಪಿಸುತ್ತಾರೆ ಹಾಗು ಸ್ತುತಿಸುತ್ತಾರೆ. ಅವರ ಕಾರ್ಯವು ಪರರಿಗೆ ಜ್ಞಾನೋದಯವನ್ನು ಮೂಡಿಸುವುದಾಗಿದೆ. ಅವರು ನರಕಕ್ಕೆ ಹೋದರೆ, ಅಲ್ಲಿನ ಜೀವಾತ್ಮರಿಗೆ "ಹರೇ ಕೃಷ್ಣ ಎಂದು ಜಪಿಸಿ" ಎಂದು ಸಲಹೆ ನೀಡುತಾರೆ. ಹಾಗು ದೇವಲೋಕವಾದ ಇಂದ್ರಲೋಕಕ್ಕೆ ಹೋದರೆ ಅದೇ ಸಲಹೆಯನ್ನು ನೀಡುತ್ತಾರೆ. ಅದು ಅವರ ವ್ಯವಹಾರ. ಹಾಗೆಯೆ ಯಾರು ಕೃಷ್ಣ ಪ್ರಜ್ಞೆಯನ್ನು ಪ್ರಚಾರ ಮಾಡುವುದರಲ್ಲಿ ತೊಡಗಿರುತ್ತಾರೋ ಅವರು ದೇವಲೋಕ ಅಥವ ನರಕ ಲೋಕಕ್ಕೆ ಹೆದರ ಬೇಕಾಗಿಲ್ಲ. ಅವರು ಎಲ್ಲೇ ಹೋದರೂ "ಹರೇ ಕೃಷ್ಣ ಮಂತ್ರವನ್ನು ಜಪಿಸಿ" ಎಂದು ಸರಳವಾಗಿ ಪ್ರಚಾರ ಮಾಡುತ್ತಾರೆ. ಅದೇ ಅವರ ವ್ಯವಹಾರ.

### *ಭೌತಿಕ ಆಸೆಗಳನ್ನು ತಿರಸ್ಕರಿಸುವುದು*

ಒಬ್ಬಾತನು ಅಕಿಂಚನ ಆಗಬೇಕು, ಕೇವಲ ಪ್ರಭುವಿನ ಚರಣ ಕಮಲವನ್ನು ಬಯಸ ಬೇಕು, ಯಾವುದೇ ಭೌತಿಕತೆಯನ್ನಲ್ಲ. ನಮ್ಮ ಪೂರ್ವಜ ಆಚಾರ್ಯ್ಯರಾದ ನರೋತ್ತಮ ದಾಸ ಠಾಕುರರು ಹೀಗೆ ಬರೆದಿದ್ದಾರೆ, ***"ಹಾ ಪ್ರಭು ನಂದ ಸುತ, ವೃಷಭಾನು ಸುತಜುತ, ಕರುಣಕರೊಹೊಎ–ಬರೊ":*** "ಓ ಕೃಷ್ಣ, ರಾಧಾರಣಿಯೊಡನೆ, ನನ್ನ ಮೇಲೆ ಕರುಣೆಯನ್ನು ಇಡು". ***"ನರೋತ್ತಮದಾಸ ಕೋಯ್ ನಥೆಲಿ ಹೊ ರಂಗಪಾಯ್":*** "ನಾನು ಸಂಪೂರ್ಣವಾಗಿ ನಿನಗೆ ಶರಣಾಗಿದ್ದೇನೆ. ನನ್ನನ್ನು ತಿರಸ್ಕರಿಸ ಬೇಡ". ***"ತೊಮ ಬಿನೆ ಕೆ ಆಚೆ ಆಮಾರ":*** " ನಿನ್ನ ಪಾದ ಕಮಲಗಳನ್ನು ಹೊರತು ಪಡಿಸಿ ನನ್ನಲ್ಲಿ ಏನೂ ಇಲ್ಲ". ಇದು ಅಕಿಂಚನ ಎಂಬುದರ ಮನಸ್ಸಿನ ಸ್ಥಿತಿ: " ನಿನ್ನನ್ನು ಹೊರತು ಪಡಿಸಿ ನನ್ನಲ್ಲಿ ಏನೂ ಇಲ್ಲ. ಆಗಿದ್ದರೆ ಏಗೆ ತಾನೆ ನೀನು ನನ್ನನ್ನು ತಿರಸ್ಕರಿಸುವೆ? ನನಗೆ ಆಶ್ರಯವನ್ನು ನೀಡು".

ಕೃಷ್ಣನ ಚರಣ ಕಮಲಗಳನ್ನು ಬಿಟ್ಟು ಬೇರೊಂದು ಆಶ್ರಯ ನನಗಿದೆ ಎಂದು ಯೋಚಿಸಿದರೆ, ಆಗ ನಾನು ಅಕಿಂಚನ ಅಲ್ಲ. ನಾನು ಕಿಂಚನ: ಕೃಷ್ಣನ ಹೊರತಾಗಿ ನನಗೆ ಬೇರೊಂದು ಭರವಸೆ ಇದೆ. ಅಕಿಂಚನ ಎಂದರೆ ಕೃಷ್ಣನೇ ನನ್ನ ಭರವಸೆ. ಕುಂತಿ ದೇವಿಯು ತನ್ನ ಪ್ರಾರ್ಥನೆಯಲ್ಲಿ ಕೃಷ್ಣನನ್ನು ಅಕಿಂಚನ ಗೋಚರ ಎಂದು ಸಂಭೋದಿಸಿದ್ದಾರೆ: "ಬೇರೆ ಏನನ್ನೂ ಪಡೆಯುವ ಆಸೆ ಇಲ್ಲದವನಿಗೆ ನಿನ್ನ ಸಾಕ್ಷಾತ್ಕಾರವಾಗುತ್ತದೆ". ಹಾಗು ಚೈತನ್ಯ ಮಹಾಪ್ರಭುಗಳು ಹೇಳಿದ್ದಾರೆ: ***ನಿಷ್ಕಿಂಚನಸ್ಯ ಭಗವದ್–ಭಜನೊನ್ ಮುಖಸ್ಯ. ಭಗವದ್–ಭಜನ,*** ಪ್ರಭುವಿನ ಅರ್ಚನೆ ಮಾಡಲು ಒಬ್ಬಾತನು ನಿಸ್ಕಿಂಚನ ಆಗಿರ ಬೇಕು, ಅದು ಅಕಿಂಚನದ ಅರ್ಥವನ್ನೇ ಹೊಂದಿದೆ. ನೀನು ಭೌತಿಕವಾದುದನ್ನು



ಸುಲಭ. ಅದು ಒಂದು ಕ್ಷಣದ ಕೆಲಸ. ಆದರೆ ನಾವು ಸಿದ್ಧರಿರಬೇಕು. ಕೃಷ್ಣನು ಹೇಳುತ್ತಾನೆ, "ನನಗೆ ಶರಣಾಗು". ಅದನ್ನು ನಾವು ಮಾಡಿದರೆ ತಕ್ಷಣವೇ ನಾವು ಭಕ್ತಿಯ ಹಂತದಲ್ಲಿರುತ್ತೇವೆ. ಆದರೆ ನಾವು ಸಿದ್ಧರಿಲ್ಲ. ಕೃಷ್ಣನು ನೇರವಾಗಿ ಹೇಳುತ್ತಾನೆ, "ನನಗೆ ಶರಣಾಗು", ಆದರೆ ಜನರು ಹೇಳುತ್ತಾರೆ, "ಯಾವಾಗ ಕೃಷ್ಣನು ನನಗೆ ದಯೆ ತೋರುತ್ತಾನೋ ಆಗ ನಾನು ಶರಣಾಗುತ್ತೇನೆ". ಏನಿದು ಅಸಂಬದ್ಧತೆ? ಕೃಷ್ಣನು ನೇರವಾಗಿ ನಿನ್ನನ್ನು ಕೇಳುತ್ತಿದ್ದಾನೆ. ಆತ ಮತ್ತೆ ದಯಾಮಯನಾಗ ಬೇಕೆ? ಯಾವ ತರಹದ ದಯೆ? ಇವೆಲ್ಲ ಬರೀ ನೆಪಗಳು. ನಿಜವಾಗಿ ಆ ವ್ಯಕ್ತಿ ಶರಣಾಗಲು ಸಿದ್ಧನಿಲ್ಲ. "ನಾನು ನಿನಗೆ ಶರಣಾಗುವುದಿಲ್ಲ, ಸ್ವಾಮಿ. ನಾನು ನೆಪಗಳನ್ನು ಕೊಡುತ್ತೇನೆ. ಕಾರಣಗಳನ್ನು ನೀಡುತ್ತೇನೆ. ಅಷ್ಟೆ".

ಲಕ್ಷಾಂತರ ವರ್ಷಗಳಲ್ಲಿ ನಾವು ಎಷ್ಟು ಸಲ ಹುಟ್ಟಿ ಸತ್ತಿದ್ದೇವೆ ಎಂಬುದು ನಮಗೆ ತಿಳಿದಿಲ್ಲ. ಆದರೂ ನಾವು ಎಷ್ಟು ನಾಚಿಕೆ ಇಲ್ಲದವರೆಂದರೆ ಅದನ್ನು ಮತ್ತೆ ಮತ್ತೆ ಮಾಡಲು ಬಯಸುತ್ತಿದ್ದೇವೆ. ಆಹಾರ, ನಿದ್ರೆ, ಮೈಥುನ ಹಾಗು ಭಯಗಳಿಂದ ಕೂಡಿದ ಭೌತಿಕ ಜೀವನವನ್ನು ಅನುಭವಿಸುವುದನ್ನು ಮುಂದುವರೆಸಲು ಬಯಸುತ್ತೇವೆ. ಇದು ಸಣ್ಣ ಕೀಟದಿಂದ ಇಡಿದು ಬ್ರಹ್ಮ ಹಾಗು ಇಂದ್ರನನ್ನು ಸೇರಿ ಎಲ್ಲಾ ಜೀವಿಗಳ ವ್ಯವಹಾರವಾಗಿದೆ. ಜನರು ಈ ವ್ಯವಹಾರವನ್ನು ನಿಲ್ಲಿಸಲು ಸಿದ್ಧರಿಲ್ಲ. ಇದನ್ನು ಉತ್ತಮಗೊಳಿಸಲು ಬಯಸುತ್ತಾರೆ. " ಈಗ ನಾನು ತಟ್ಟೆ ಇಲ್ಲದೆ ಊಟಮಾಡುತ್ತಿದ್ದೇನೆ, ಆದರೆ ಚಿನ್ನದ ತಟ್ಟೆಯಲ್ಲಿ ಊಟ ಮಾಡಿದರೆ ಅದು ಪ್ರಗತಿಪರತೆ". ಒಬ್ಬ ಸಂಭಾವಿತನು ರುಚಿಕರವಾದ ಭಕ್ಷ್ಯಗಳನ್ನು ತಿನ್ನುತ್ತಿದ್ದಾನೆ ಹಾಗು ಒಂದು ಹಂದಿಯು ಮಲವನ್ನು

ಅನುಭವಿಸಲು ಇಚ್ಛಿಸಿದರೆ, ಭಗವದ್–ಭಜನೆಯ ಮಾತೆ ಇಲ್ಲ, ಏಕೆಂದರೆ ಭೌತಿಕ ಐಶಾರಾಮಿಯನ್ನು ಅನುಭವಿಸುವ ಆಸೆ ಅತಿ ಅಲ್ಪ ಪ್ರಮಾಣದಲ್ಲಿದ್ದರೂ ಪ್ರಭುವಿನ ಶುದ್ಧ ಸೇವೆಯೊಳಗೆ ನಿನಗೆ ಪ್ರವೇಶ ದೊರೆಯುವುದಿಲ್ಲ. ಆದ್ದರಿಂದ ಕೃಷ್ಣನು ಭಗವದ್–ಗೀತೆಯಲ್ಲಿ ಹೇಳಿದ್ದಾನೆ: ಸರ್ವ ಧರ್ಮಾನ್ ಪರಿತ್ಯಜ್ಯ ಮಾಮ್ ಏಕಂ ಶರಣಂ ವ್ರಜ(ಭಗವದ್–ಗೀತೆ 18.66).

ಆತನಿಗೆ ಸಂಪೂರ್ಣವಾಗಿ ಶರಣಾಗುವಂತೆ ನಮಗೆ ಬೋಧಿಸಿದ್ದಾನೆ. ಭಕ್ತಿ ಯೋಗವು ಆರಂಭಗೊಳ್ಳುವುದು ನಾವು "ಸಾಕಪ್ಪ ಸಾಕು. ಈ ಭೌತಿಕ ಸುಖವು ಸಾಕೋ ಸಾಕು" ಎಂಬ ವಿಚಾರ ನಮ್ಮಲ್ಲಿದ್ದಾಗ ಮಾತ್ರ. ಬ್ರಹ್ಮಭೂತ, "ನಾನು ಬ್ರಹ್ಮಜ್ಯೋತಿ. ನಾನು ಮುಖ್ಯಸ್ತನಾಗಿದ್ದೇನೆ" ಎಂಬ ವಿಚಾರವುಳ್ಳ ಬ್ರಹ್ಮನ್ ಸಾಕ್ಷಾತ್ಕಾರದ ಅಂತವನ್ನು ಕೂಡ ಒಬ್ಬಾತನು ತಿರಸ್ಕರಿಸ ಬೇಕು. ಭಕ್ತರು ಬ್ರಹ್ಮಜ್ಯೋತಿಯನ್ನು ಕೂಡ ತಿರಸ್ಕರಿಸುತ್ತಾರೆ. ಪ್ರಬೋಧಾನಂದ ಸರಸ್ವತಿಯವರು ಹೇಳುತ್ತಾರೆ, **ಕೈವಲ್ಯಮ್ ನರಕಾ–ಯತೆ**: "ಬ್ರಹ್ಮಜ್ಯೋತಿಯಲ್ಲಿ ಇರುವುದು ನರಕದಲ್ಲಿ ಇದ್ದಂತೆ". ಇದು ಭಕ್ತನ ಸ್ಥಾನ.

### ನಾವು ಸಿದ್ಧರಿರಬೇಕು

ಭಕ್ತಿ, ಭಕ್ತಿಪೂರ್ವಕ ಸೇವೆ ಸುಲಭವಲ್ಲ ಆದರೆ ಅದೇ ಸಮಯದಲ್ಲಿ ಅದು ಬಹು

ತಿನ್ನುತ್ತಿದೆ. ತಿನ್ನುವ ಪ್ರಕ್ರಿಯೆ ಒಂದೆ; ವ್ಯತ್ಯಾಸ ಎಂದರೆ ರುಚಿಯಲ್ಲಿ ಮಾತ್ರ.

ವಿಮಾನದಲ್ಲಿ ಭಕ್ತರಾದ ನಮಗೆ ಆಹಾರವನ್ನು ನೀಡಿದಾಗ, ನಾವು ಅದನ್ನು ತಿರಸ್ಕರಿಸುತ್ತೇವೆ. ವಿಮಾನದಲ್ಲಿವುದನ್ನು, ಅದು ಏನೇ ಇರಲಿ ನಾವು ಅದನ್ನು ಮುಟ್ಟುವುದಿಲ್ಲ ಏಕೆಂದರೆ ನಮಗೆ ತಿಳಿದಿದೆ ಅದು ಏನು ಎಂದು. ಆದರೆ ನಮ್ಮ ಪಕ್ಕದಲ್ಲಿರುವ ಮನುಷ್ಯ ಸಂತೋಷವಾಗಿ ಹಂದಿಯ ಕರುಳನ್ನು ತಿನ್ನುತ್ತಿದ್ದಾನೆ. ಆತ ಆನಂದ ಭರಿತವಾಗಿ ಮುಳ್ಳು ಚಮಚ ಹಾಗು ಚಮಚದಿಂದ ತಿನ್ನುತ್ತಿದ್ದಾನೆ ಹಾಗು ನಾವು ಯೋಚಿಸುತ್ತಿದ್ದೇವೆ, “ಓ, ಎಂತಹ ಅಸಹ್ಯವಾದ ವಸ್ತುವನ್ನು ತಿನ್ನುತ್ತಿದ್ದಾನೆ!”.

ಭೌತಿಕವಾದ ಎಲ್ಲವನ್ನೂ ನಾವು ಸಂಪೂರ್ಣವಾಗಿ ತ್ಯಜಿಸ ಬೇಕು. ಅದು ನಿಷ್ಕಿಂಚನ. ಭೌತಿಕವಾದದ್ದರೊಂದಿಗೆ ನಮಗೆ ಯಾವ ಸಂಬಂಧವೂ ಇಲ್ಲ, ಅದು ಚಿನ್ನದ ತಟ್ಟೆಯೇ ಆಗಿರಲಿ ಅಥವಾ ಬೀದಿಯಲ್ಲಿರಲಿ ಅಥವಾ ನೆಲದಮೇಲಿರಲಿ. ಅದು ಯಾವುದೇ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ವ್ಯವಹಾರವೆಂದರೆ ಪ್ರಸಾದವನ್ನು, ಕೃಷ್ಣನು ತಿಂದಂತಹುದನ್ನು, ಸ್ವೀಕರಿಸುವುದು. ಹಂದಿಗಳ ಕರುಳಿನಲ್ಲಾಗಲಿ ಅಥವ ಕೃಷ್ಣನಿಗೆ ಅರ್ಪಿಸದ ರುಚಿಕರವಾದ ತಿನಿಸುಗಳಾದ ಹಲ್ವಾ ಹಾಗು ಪೂರಿಗಳಲ್ಲಾಗಲಿ ನಮಗೆ ಯಾವ ಆಸಕ್ತಿಯೂ ಇಲ್ಲ. ನಮಗೆ ಕೃಷ್ಣನು ಆಗಲೆ ಸ್ವೀಕರಿಸಿರುವುದನ್ನು ತಿನ್ನುವುದರಲ್ಲಿ ಮಾತ್ರ ಆಸಕ್ತಿ.

ಕೃಷ್ಣ ಪ್ರಸಾದವನ್ನು ತಿನ್ನುವವರು ಸಾವಿರಾರು ಒಳ್ಳೆಯ ಅಡುಗೆಯ ತಯಾರಿಕೆಗಳನ್ನು ಸವಿಯುತ್ತಾರೆ. ರೆಸ್ಟೋರೆಂಟ್‌ಗೆ ನಾವು ಏಕೆ ಹೋಗಬೇಕು? ಎಷ್ಟೋ ಒಳ್ಳೆ ಅಡುಗೆಯ ತಯಾರಿಕೆಗಳನ್ನು ಕೃಷ್ಣನಿಗೆ ಅರ್ಪಿಸಲಾಗುತ್ತದೆ. ಭಕ್ತನು ತನ್ನ ಮಿತಿಯೊಳಗೆ ಏನನ್ನಾದರು ಅರ್ಪಿಸಿದರೆ, ಕೃಷ್ಣನು ಅದನ್ನು ಸ್ವೀಕರಿಸಲು ಸಿದ್ಧನಿದ್ದಾನೆ. ಹೀಗೆ ಹೇಳುವ ಜನರಿದ್ದಾರೆ, “ನಾನು ಏನೆ ತಿಂದರು ಅದನ್ನು ಅರ್ಪಿಸಬಹುದು”. ಆದರೆ ಅದು ಸರಿಯಾದ ಕಾರ್ಯ ವಿಧಾನ ಅಲ್ಲ. ಕಾರ್ಯ ವಿಧಾನ ಎಂದರೆ ಕೃಷ್ಣನು ಏನನ್ನು ಬಯಸುತ್ತಾನೋ ಅದನ್ನು ನಾವು ಆತನಿಗೆ ಅರ್ಪಿಸ ಬೇಕು. ನಿಮ್ಮ ಮನೆಗೆ ಯಾರನ್ನೋ ಆಹ್ವಾನಿಸಿದಾಗ ನೀವು ಅವರನ್ನು ಹೀಗೆ ಕೇಳುತ್ತೀರಿ, “ ನಿಮಗೆ ಏನನ್ನು ಅರ್ಪಿಸಲಿ”? ಅದುವೆ ಶಿಷ್ಟಾಚಾರ. ನೀವು ಎಂತಹ ಭಯಾನಕವಾದುದನ್ನು ನೀಡಿದರೂ ಅಥಿತಿಗಳು ಅದನ್ನು ತಿನ್ನಬೇಕು ಎಂಬುದು ಶಿಷ್ಟಾಚಾರವಲ್ಲ.

ತನ್ನ ಭಕ್ತರು ಅರ್ಪಿಸುವುದನ್ನು ತಾನು ಸ್ವೀಕರಿಸುತ್ತೇನೆ ಎಂದು ಕೃಷ್ಣನು ಹೇಳುತ್ತಾನೆ. ಆದರೆ ನಾಸ್ತಿಕರು ಹೇಳುತ್ತಾರೆ,” ಓ ನೀವು ಎಷ್ಟೊಂದು ಒಳ್ಳೆಯ ತಿನಿಸುಗಳನ್ನು ಅರ್ಪಿಸುತ್ತೀರಿ, ಆದರೆ ಅವೆಲ್ಲ ನಿಮ್ಮ ವಿಗ್ರಹದ ಮುಂದೆಯೆ ಇನ್ನೂ ಇದೆ. ಅವನು ತಿಂದಿಲ್ಲ”. ಇಂತಹ ಮನುಷ್ಯನಿಗೆ ತಿಳಿದಿಲ್ಲ ಕೃಷ್ಣನು ಹೇಗೆ ತಿನ್ನುತ್ತಾನೆ ಎಂದು. ಕೃಷ್ಣನು ತನ್ನ ಕಣ್ಣುಗಳಿಂದ ತಿನ್ನಬಹುದು. ಮುಟ್ಟುವುದರಿಂದಲೇ ಆತ ತಿನ್ನಬಹುದು. ಹಾಗು ಅಲ್ಲಿರುವುದನ್ನೆಲ್ಲಾ ತಿಂದರೂ, ಅವಷ್ಟನ್ನೂ ಆತ ಹಾಗೆಯೇ ಇರಿಸಬಲ್ಲನು. ನಾಸ್ತಿಕರು ಇದನ್ನು ಕಾಣಲಾರರು, ಆದರೆ ಭಕ್ತನಿಗೆ ತಿಳಿದಿದೆ,” ಕೃಷ್ಣನು ತಿನ್ನುತ್ತಿದ್ದಾನೆ, ಹಾಗು ನಾವು ಪ್ರಸಾದವನ್ನು ತೆಗೆದುಕೊಳ್ಳಬಹುದು”.

**ಯಶಸ್ವಿ ಜೀವನ**

ಭಕ್ತಿ ಎಂದರೇನು ಎಂಬುದನ್ನು ನಾವು ಕಲಿಯ ಬೇಕು. ಭಕ್ತಿ ಪೂರ್ವಕ ಸೇವೆಯಲ್ಲಿ ನಾವು ಮುಂದುವರೆದರೆ, ಆಗ ಸ್ವಾಭಾವಿಕವಾಗಿ ಭೌತಿಕ ಜಗತ್ತಿನೆಡೆಗೆ ನಮಗಿರುವ ರುಚಿಯನ್ನು ಕಳೆದುಕೊಳ್ಳುತ್ತೇವೆ. ಭಕ್ತಿ ಪೂರ್ವಕ ಸೇವೆಯನ್ನು ನಾವು ಕೈಗೆತ್ತಿಕೊಳ್ಳುವುದರಿಂದ ಭೌತಿಕ ಜಗತ್ತನ್ನು ಬಿಡಬಹುದು ಎಂಬುದನ್ನು ನಾವು ತಿಳಿದಿರ ಬೇಕು. ಈ ಭೌತಿಕ ಜಗತ್ತಿನಲ್ಲಿ ಪ್ರತಿಯೊಂದು ಹೆಜ್ಜೆಯಲ್ಲಿಯೂ ಅಪಾಯಗಳಿರುತ್ತದೆ. ಎಲ್ಲರೂ ಸಾಯಲೇ ಬೇಕು. ಆಗಾಗಿ ಸಾಯುವ ಮುನ್ನ ನಾವು ಸಂಪೂರ್ಣ ಕೃಷ್ಣ ಪ್ರಜ್ಞಾವಂತರಾಗ ಬೇಕು. ಅಂತ್ಯವು ಇವತ್ತು ಅಥವ ನಾಳೆ ಅಥವ ಆಚೆನಾಳೆದ್ದು ಬರಬಹುದು. ಯಾರೂ ಇಲ್ಲಿ ಉಳಿದುಕೊಳ್ಳವುದಿಲ್ಲ. ಆದರೆ ಯಶಸ್ಸೆಂದರೆ ಜೀವನದ ಅಂತ್ಯದಲ್ಲಿ ನಾರಾಯಣ ಅಥವ ಕೃಷ್ಣನನ್ನು ನೆನೆಯುವುದು. ಅದನ್ನು ನಾವು ಅಭ್ಯಾಸ ಮಾಡಬೇಕು. ಹೀಗೆ ಯೋಚಿಸ ಬೇಡಿ, “ನಾನು ನಾಳೆ ಸಾಯುತ್ತೇನೆ, ಆದರೆ ನೀನು ಇಂದೇ ಸಾಯುತ್ತಿರುವೆ, ಅಗಾಗಿ ನಾನೇ ನಿನಗಿಂತ ಉತ್ತಮ”. ಯಾರೂ ಇಲ್ಲಿ ಶಾಶ್ವತವಾಗಿ ಜೀವಿಸುವುದಿಲ್ಲ. ಎಲ್ಲರೂ ಸಾಯುತ್ತಾರೆ ಹಾಗು ಆ ಸಾವಿಗಾಗಿ ನಾವು ಸಿದ್ದರಿರಬೇಕು. ಭಕ್ತನಿಗೆ ಸಾವಿನ ಭಯವಿರುವುದಿಲ್ಲ, ಏಕೆಂದರೆ ಆತ ಕೃಷ್ಣನಿಗೆ ಸಂಪೂರ್ಣವಾಗಿ ಶರಣಾಗಿದ್ದರೆ ಆಗ ಆತ ಕೃಷ್ಣನೆಡೆಗೆ ಮರಳಿ ಹಿಂತಿರುಗುತ್ತಾನೆ, ಸರಳವಾಗಿ ಕೃಷ್ಣನಿಗೆ ಶರಣಾಗುವ ಮಾತ್ರದಿಂದಲೆ. ಮತ್ತೆ ಹೇಗೆ ಒಬ್ಬಾತನು ಶರಣಾಗುತ್ತಾನೆ? ಕೃಷ್ಣನು ಹೀಗೆ ಹೇಳುತ್ತಾನೆ,


**ಮನ್–ಮನಾ ಭವ ಮದ್–ಭಕ್ತೊ**

**ಮದ್–ಯಾಜಿ ಮಾಮ್ ನಮಸ್ಕುರು**

**ಮಾಮ್ ಎವೈಶ್ಯಸಿ ಸತ್ಯಮ್ ತೆ**

**ಪ್ರತಿಜಾನೆ ಪ್ರಿಯೊ ಅಸಿ ಮೆ**

“ಸದಾ ನನ್ನ ಬಗ್ಗೆ ಯೋಚಿಸು, ನನ್ನ ಭಕ್ತನಾಗು, ನನ್ನನ್ನು ಅರ್ಚಿಸು ಹಾಗು ನನಗೆ ನಿನ್ನ ಗೌರವಾರ್ಪಣೆಯನ್ನು ಸಲ್ಲಿಸು. ಹೀಗೆ ನೀನು ನನ್ನ ಬಳಿ ಬರಲು ಯಾವ ವಿಫಲತೆಯು ಇರುವುದಿಲ್ಲ. ಇದನ್ನು ನಾನು



ನಿನಗೆ ವಾಗ್ದಾನ ನೀಡುವೆ ಏಕೆಂದರೆ ನೀನು ನನ್ನ ಆಪ್ತ ಮಿತ್ರ" (ಭಗವದ್‌ಗೀತ 18.65). ಕೃಷ್ಣನು ಭರವಸೆಯನ್ನು ನೀಡುತ್ತಿದ್ದಾನೆ. ನಾವು ಈ ನಾಲ್ಕನ್ನು ಮಾಡಿದರೆ, ಆತನ ಬಳಿ ಸಾರಬಹುದು. ಮೊದಲನೆಯದು ಕೃಷ್ಣನನ್ನು ಕುರಿತು ಸದಾ ಯೋಚಿಸುವುದು. ಯಾರಾದರೂ ಕೂಡ ಇದನ್ನು ಮಾಡಬಹುದು. ಹಾಗು ಎಲ್ಲರೂ ಕೃಷ್ಣನಿಗೆ ಅರ್ಪಿಸಬಹುದು, ***ಪತ್ರಮ್ ಪುಷ್ಪಮ್ ಫಲಮ್ ತೋಯಮ್:*** ಹಣ್ಣು, ಒಂದು ಹೂ, ಒಂದು ಎಲೆ ಅಥವ ನೀರು (ಭಗವ್–ಗೀತ 9.26). ಎಲ್ಲರೂ ಕೃಷ್ಣನಿಂದ ಆತನ ಬಗ್ಗೆ ಕಲಿಯಬಹುದು. ಕಷ್ಟ ಏನಿದೆ ಇದರಲ್ಲಿ?

ಕಷ್ಟ ಏನೆಂದರೆ ನಾವು ಈ ಭೌತಿಕ ಜಗತ್ತನ್ನು ಅನುಭವಿಸಲು ಇಚ್ಚಿಸುತ್ತೇವೆ. ಆದರೆ ಭಕ್ತನು ಭೌತಿಕ ಜಗತ್ತಿಗೆ, ದೇವಲೋಕಗಳನ್ನು ಒಳಗೊಂಡು, ಆಕರ್ಷಿತನಾಗುವುದಿಲ್ಲ. ಹಾಗು ಭಕ್ತನು ಮುಕ್ತಿಯಿಂದಾಗಲಿ ಅಥವ ಯೋಗ ಸಿದ್ಧಿಯಿಂದಾಗಲಿ ಆಕರ್ಷಿತನಾಗುವುದಿಲ್ಲ. ಈ ಎಲ್ಲವನ್ನು ಬಯಸುವ ವ್ಯಕ್ತಿಗಳು ಎಂದಿಗೂ ಶಾಂತರಾಗಿರುವುದಿಲ್ಲ. ಭೌತಿಕ ಭೋಗದಾಸೆ ಇರುವವರು, ಭೌತಿಕ ಲಾಭಕ್ಕಾಗಿ ಅಥವ ದೇವಲೋಕಗಳಿಗೆ ಏರುವ ಸಲುವಾಗಿ ಕಷ್ಟಪಟ್ಟು ಕೆಲಸ ಮಾಡುತ್ತಾರೆ. ಮುಕ್ತಿಯ ಹಿಂದೆ ಬಿದ್ದವರು ಆಧ್ಯಾತ್ಮಿಕ ನಿರಾಕಾರ ಶಕ್ತಿಯನ್ನು ಪ್ರವೇಶಿಸಲು ಕಠೋರ ತಪಸ್ಸುಗಳನ್ನು ಹಾಗು ಸಂಯಮವನ್ನು ಕೈಗೊಳ್ಳುತ್ತಾರೆ. ಮತ್ತು ಯೋಗಿಗಳು ಬಹಳ ಕಷ್ಟ ಪಡುತ್ತಾರೆ. ಯೋಗಾಭ್ಯಾಸ ಸುಲಭವೇನಲ್ಲ, ವಿಶೇಷವಾಗಿ ಈ ಕಲಿಯುಗದಲ್ಲಿ.

ನಮ್ಮ ಭಕ್ತಿ–ಯೋಗ ಎಷ್ಟು ಸುಲಭ. ಕೃಷ್ಣನು ಕೇಳಿರುವ ನಾಲ್ಕು ವಿಷಯಗಳನ್ನು ಮಾಡಿದರೆ ಸಾಕು. ಭಕ್ತಿ, ಭಕ್ತಿ ಪೂರ್ವಕ ಸೇವೆಯನ್ನು ಕೈಗೊಳ್ಳಿ ಹಾಗು ಬೇರೆಲ್ಲವನ್ನು ತಿರಸ್ಕರಿಸಿ. ಅದು ನಿಮ್ಮ ಜೀವನವನ್ನು ಯಶಸ್ವಿಗೊಳಿಸುತ್ತದೆ.

ಬಹಳ ಧನ್ಯವಾದಗಳು.

# ವೈಷ್ಣವ ಕ್ಯಾಲೆಂಡರ್

## ಮೇ 2019

| | | |
|---|---|---|
| 4 | ಶನಿವಾರ | ಶ್ರೀ ಗದಾಧರ ಪಂಡಿತ ಆವಿರ್ಭಾವ |
| 7 | ಮಂಗಳವಾರ | ಅಕ್ಷಯ ತೃತೀಯ |
| 11 | ಶನಿವಾರ | ಜಾಹ್ನು ಸಪ್ತಮಿ |
| 13 | ಸೋಮವಾರ | ಶ್ರೀಮತಿ ಸೀತಾದೇವಿ ಆವಿರ್ಭಾವ |
| | | ಶ್ರೀಲ ಮಧು ಪಂಡಿತರ ತಿರೋಭಾವ |
| | | ಶ್ರೀಮತಿ ಜಾಹ್ನವ ದೇವಿ ಆವಿರ್ಭಾವ |
| 14 | ಮಂಗಳವಾರ | ತುಲಸಿ ಮತ್ತು ಸಾಲಗ್ರಾಮರ ಜಲ ದಾನದ ಕೊನೆಯ ದಿವಸ |
| 15 | ಬುಧವಾರ | ಮೋಹಿನಿ ಏಕಾದಶಿ |
| 16 | ಗುರುವಾರ | ದ್ವಾದಶಿ ಪಾರಣ: 5.54 ರಿಂದ 8.17 ರವರಿಗೆ |
| 17 | ಶುಕ್ರವಾರ | ಶ್ರೀ ಜಯಾನಂದ ಪ್ರಭುರವರ ತಿರೋಭಾವ |
| 18 | ಶನಿವಾರ | ಶ್ರೀ ನರಸಿಂಹ ದೇವರ ಅವತರಣೆ [ಸಂಜೆಯವರೆಗೂ ಉಪವಾಸ] |
| | | ಶ್ರೀ ಪರಮೇಶ್ವರಿ ದಸ ಠಾಕೂರರ ತಿರೋಭಾವ |
| | | ಶ್ರೀ ಶ್ರೀ ರಾಧಾ ರಮಣ್ ದೇವರ ಅವತರಣೆ |
| | | ಶ್ರೀಲ ಮಾಧವೇಂದ್ರ ಪುರಿಯವರ ಆವಿರ್ಭಾವ |
| | | ಶ್ರೀ ಶ್ರೀನಿವಾಸ ಆದಾರ್ಯರ ಆವಿರ್ಭಾವ |
| 23 | ಗುರುವಾರ | ಶ್ರೀಲ ರಾಮಾನಂದ ರಾಯರ ತಿರೋಭಾವ |
| 30 | ಗುರುವಾರ | ಅಪರ ಏಕಾದಶಿ |
| 31 | ಶುಕ್ರವಾರ | ದ್ವಾದಶಿ ಪಾರಣ: 5.52 ರಿಂದ 10.08 ರವರೆಗೆ |
| | | ಶ್ರೀಲ ವೃಂದಾವನ ದಾಸ ಠಾಕೂರರ ಆವಿರ್ಭಾವ |

## ಜೂನ್ 2019

| | | |
|---|---|---|
| 12 | ಬುಧವಾರ | ಶ್ರೀಲ ಬಲದೇವ ವಿದ್ಯಾಭೂಷಣ ತಿರೋಭಾವ |
| | | ಶ್ರೀ ಗಂಗ ಪೂಜೆ |
| | | ಶ್ರೀಮತಿ ಗಂಗಾಮಾತ ಗೋಸ್ವಾಮಿಣಿ ಆವಿರ್ಭಾವ |
| 13 | ಗುರುವಾರ | ಪಾಂಡವ ನಿರ್ಜಲ ಏಕಾದಶಿ |
| 14 | ಶುಕ್ರವಾರ | ದ್ವಾದಶಿ ಪಾರಣ: 5.53 ರಿಂದ 10.10 ರವರೆಗೆ |
| 15 | ಶನಿವಾರ | ಪಾನಿಹಟಿ ಚಿದಾ ದಹೀ ಹಬ್ಬ |
| | | ಮಿಥುನ ಸಂಕ್ರಾಂತಿ |
| 17 | ಸೋಮವಾರ | ಸ್ನಾನ ಪೂರ್ಣಿಮೆ |
| | | ಶ್ರೀಲ ಮುಕುಂದ ದತ್ತರ ತಿರೋಭಾವ |
| | | ಶ್ರೀಲ ಶ್ರೀಧರ ಪಂಡಿತರವರ ತಿರೋಭಾವ |
| 18 | ಮಂಗಳವಾರ | ಶ್ರೀಲ ಶ್ಯಾಮಾನಂದ ಪ್ರಭುರವರ ತಿರೊಭಾವ |
| 22 | ಶನಿವಾರ | ಶ್ರೀಲ ವಕ್ರೇಶ್ವರ ಪಂಡಿತರ ಆವಿರ್ಭಾವ |
| 27 | ಗುರುವಾರ | ಶ್ರೀ ಶ್ರೀವಾಸ ಪಂಡಿತರ ತಿರೋಭಾವ |
| 29 | ಶನಿವಾರ | ಯೋಗಿನಿ ಏಕಾದಶಿ |
| 30 | ಭಾನುವಾರ | ದ್ವಾದಶಿ ಪಾರಣ: 5.56 ಇಂದ 6.13 ರವರೆಗೆ |

# ವೇದಗಳ ಪ್ರಾರ್ಥನೆ

**ಹಿಂದಿನ ಸಂಚಿಕೆಯಿಂದ.....**

ಹೀಗೆಯೇ ಮೊದಲು ಅಷ್ಟಾವಕ್ರನ ನಾಯಕತ್ವದ, ಅನಂತರ ಶಂಕರಾಚಾರ್ಯರ ನಾಯಕತ್ವದ ನಿರಾಕಾರವಾದಿಗಳು ನಿರಾಕಾರ ಬ್ರಹ್ಮಜ್ಯೋತಿಯು ಎಲ್ಲದರ ಕಾರಣ ಎಂದು ಒಪ್ಪುತ್ತಾರೆ. ಈ ವಾದದ ಪ್ರಕಾರ ಭೌತಿಕ ಅಭಿವ್ಯಕ್ತಿಯು ಅಲ್ಪಕಾಲದ್ದು ಮತ್ತು ಮಿಥ್ಯೆ. ಆದರೆ ನಿರಾಕಾರ ಬ್ರಹ್ಮಜ್ಯೋತಿಯು ಸತ್ಯ. ಆದರೆ ಈ ವಾದವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಬ್ರಹ್ಮಜ್ಯೋತಿಗೆ ತಾನು ಆಧಾರ ಎಂದು ಪ್ರಭುವೇ ಭಗವದ್ಗೀತೆಯಲ್ಲಿ ಹೇಳುತ್ತಾನೆ. ಬ್ರಹ್ಮಜ್ಯೋತಿಯು ಕೃಷ್ಣನ ದೇಹದ ಕಿರಣಗಳು ಎಂದು ಬ್ರಹ್ಮಸೂತ್ರದಲ್ಲಿ ದೃಢಪಡಿಸಿದೆ. ಹೀಗಿರುವಾಗ ನಿರಾಕಾರ ಬ್ರಹ್ಮನು ಬ್ರಹ್ಮಾಂಡದ ಮೂಲ ಕಾರಣನಾಗುವುದಕ್ಕೆ ಸಾಧ್ಯವಿಲ್ಲ. ಮೂಲ ಕಾರಣವು ಸರ್ವಪರಿಪೂರ್ಣನಾಗಿರುವ ಇಂದ್ರಿಯ ಗ್ರಹಣ ಶಕ್ತಿಯಿರುವ ದೇವೋತ್ತಮ ಪರಮ ಪುರುಷ ಗೋವಿಂದ.

ನಿರಾಕಾರವಾದಿಗಳ ಅತ್ಯಂತ ಅಪಾಯಕರ ವಾದವೆಂದರೆ ದೇವರು ಅವತಾರವನ್ನು ತಳೆದು ಬಂದಾಗ ಭೌತಿಕ ಪ್ರಕೃತಿಯ ಗುಣತ್ರಯಗಳು ಸೃಷ್ಟಿಸಿದ ಭೌತಿಕ ದೇಹವನ್ನು ಅವನು ಸ್ವೀಕರಿಸುತ್ತಾನೆ ಎನ್ನುವುದು. ಮಾಯಾವಾದವು ಅತ್ಯಂತ ಹೇಸಿಗೆಯ ವಾದವೆಂದು ಚೈತನ್ಯ ಮಹಾಪ್ರಭುಗಳು ಖಂಡಿಸಿದ್ದಾರೆ. ದೇವೋತ್ತಮ ಪರಮ ಪುರುಷನ ದಿವ್ಯದೇಹವು ಈ ಭೌತಿಕ ಪ್ರಕೃತಿಯಿಂದ ಆದದ್ದು ಎಂದು ಒಪ್ಪಿಕೊಳ್ಳುವ ಯಾರೇ ಆಗಲಿ ವಿಷ್ಣುವಿನ ಚರಣ ಕಮಲಗಳಲ್ಲಿ ಅತ್ಯಂತ ಘೋರವಾದ ಅಪರಾಧವನ್ನು ಮಾಡುತ್ತಾನೆ ಎಂದು ಹೇಳುತ್ತಾರೆ. ದೇವೋತ್ತಮ ಪರಮಪುರುಷನು ಮಾನವ ರೂಪದಲ್ಲಿ ಬಂದಾಗ ಮೂರ್ಖರು ಮತ್ತು ನೀಚರು ಮಾತ್ರ ಅವನಿಗೆ ಅಪಮಾನ ಮಾಡುತ್ತಾರೆ ಎಂದು ಭಗವದ್ಗೀತೆಯು ಹೇಳುತ್ತದೆ. ಕೃಷ್ಣ, ರಾಮ ಮತ್ತು ಚೈತನ್ಯರು ಮಾನವ ಸಮುದಾಯದಲ್ಲಿ ಮಾನವರಂತೆ ನಡೆದುಕೊಳ್ಳುತ್ತಾರೆ.

ವೇದಗಳ ಸಾಕಾರ ರೂಪಗಳು ನಿರಾಕಾರ ಕಲ್ಪನೆಯನ್ನು ತೀರ ತೀವ್ರವಾದ ತಪ್ಪು ನಿರೂಪಣೆ ಎಂದು ಅಲ್ಲಗಳೆಯುತ್ತವೆ. ಬ್ರಹ್ಮ ಸಂಹಿತೆಯಲ್ಲಿ ದೇವೋತ್ತಮ ಪರಮ ಪುರುಷನ ದೇಹವನ್ನು ಆನಂದ ಚಿನ್ಮಯರಸ ಎಂದು ವರ್ಣಿಸಿದೆ. ದೇವೋತ್ತಮ ಪರಮ ಪುರುಷನಿಗಿರುವುದು ಆಧ್ಯಾತ್ಮಿಕ ಶರೀರ, ಭೌತಿಕ ಶರೀರವಲ್ಲ. ಅವನು ಸರ್ವಶಕ್ತ, ಭೌತಿಕ ದೇಹದ ಅಂಗಾಂಗಗಳು ಒಂದು ನಿರ್ದಿಷ್ಟ ಕಾರ್ಯವನ್ನು ಮಾಡಬಲ್ಲದು; ಉದಾಹರಣೆಗೆ ಕೈಗಳು ಹಿಡಿದುಕೊಳ್ಳುತ್ತವೆ, ಆದರೆ ಅವು ನೋಡಲಾರವು, ಕೇಳಲಾರವು. ದೇವೋತ್ತಮ ಪರಮ ಪುರುಷನ ದೇಹವು ಆನಂದ ಚಿನ್ಮಯ ರಸ ಅಥವಾ ಸಚ್ಚಿದಾನಂದ ವಿಗ್ರಹವಾದದ್ದರಿಂದ ಅವನು ತನ್ನ ದೇಹದ ಯಾವುದೇ ಅಂಗಾಂಗದಿಂದ ಏನನ್ನಾದರೂ ಸವಿಯಬಲ್ಲ ಅಥವಾ ಮಾಡಬಲ್ಲ. ಪ್ರಭುವಿನ ಆಧ್ಯಾತ್ಮಿಕ ಶರೀರವನ್ನು ಭೌತಿಕ ಎಂದು ಒಪ್ಪುವುದಕ್ಕೆ ಕಾರಣ ದೇವೋತ್ತಮ ಪರಮ ಪುರುಷನು ಬದ್ಧಾತ್ಮಕ್ಕೆ ಸಮ ಎಂದು ಕಾಣುವ ಪ್ರವೃತ್ತಿ. ಬದ್ಧಾತ್ಮಕ್ಕೆ ಭೌತಿಕ ದೇಹವಿರುತ್ತದೆ. ಆದುದರಿಂದ ದೇವರಿಗೂ ಭೌತಿಕ ದೇಹವಿದ್ದರೆ ದೇವೋತ್ತಮ ಪರಮ ಪುರುಷನು ಹಾಗೂ ಜೀವಿಗಳು ಒಂದೇ ಎನ್ನುವ ನಿರಾಕಾರ ವಾದವನ್ನು ಬಹು ಸುಲಭವಾಗಿ ಪ್ರಚಾರ ಮಾಡಬಹುದು.

ದೇವೋತ್ತಮ ಪರಮ ಪುರುಷನು



ಆಗಮಿಸಿದಾಗ ಅವನು ವಿವಿಧ ಲೀಲೆಗಳನ್ನು ತೋರುತ್ತಾನೆ. ಆದರೂ ತಾಯಿ ಯಶೋದೆಯ ತೊಡೆಯಲ್ಲಿ ಮಲಗಿರುವಾಗಿನ ಅವನ ಶಿಶುದೇಹಕ್ಕೂ, ರಾಕ್ಷಸರೊಡನೆ ಹೋರಾಡುವಾಗ ಇರುವ ದೇಹಕ್ಕೂ ವ್ಯತ್ಯಾಸವಿಲ್ಲ. ಅವನ ಬಾಲ್ಯದ ಶರೀರದಲ್ಲಿಯೇ ಅವನು ಪೂತನಿ, ತೃಣಾವರ್ತ, ಅಘಾಸುರ ಮೊದಲಾದ ರಾಕ್ಷಸರೊಡನೆ ಹೋರಾಡಿದಾಗ ಅವನಿಗೆ ಯೌವನದಲ್ಲಿ ದಂತವಕ್ರ, ಶಿಶುಪಾಲ ಮತ್ತು ಇತರರೊಂದಿಗೆ ಹೋರಾಡಿದಾಗ ಇದ್ದಷ್ಟೇ ಶಕ್ತಿಯು ಇದ್ದಿತು. ಭೌತಿಕ ಜೀವನದಲ್ಲಿ ಬದ್ಧಾತ್ಮನು ತನ್ನ ದೇಹವನ್ನು ಬದಲಾಯಿಸುತ್ತಲೇ ತನ್ನ ಹಿಂದಿನ ದೇಹದ ವಿಷಯವನ್ನೆಲ್ಲ ಮರೆತುಬಿಡುತ್ತಾನೆ. ಆದರೆ ಕೃಷ್ಣನಿಗೆ ಸಚ್ಚಿದಾನಂದ ದೇಹವಿರುವುದರಿಂದ ಲಕ್ಷಾಂತರ ವರ್ಷಗಳ ಹಿಂದೆ ಭಗವದ್ಗೀತೆಯನ್ನು ಸೂರ್ಯದೇವನಿಗೆ ಉಪದೇಶ ಮಾಡಿದುದನ್ನು ಅವನು ಮರೆಯಲಿಲ್ಲ ಎಂದು ಭಗವದ್ಗೀತೆಯಿಂದ ತಿಳಿಯುತ್ತದೆ. ಭಗವಂತನು ಭೌತಿಕ

ಮತ್ತು ಆಧ್ಯಾತ್ಮಿಕ ಅಸ್ತಿತ್ವಗಳೆರಡನ್ನೂ ಮೀರಿದವನಾದ್ದರಿಂದ ಅವನನ್ನು ಪುರುಷೋತ್ತಮ ಎಂದು ಕರೆಯುತ್ತಾರೆ. ಅವನು ಎಲ್ಲ ಕಾರಣಗಳ ಕಾರಣನು ಎಂದಾಗ ಅವನು ಆಧ್ಯಾತ್ಮಿಕ ಜಗತ್ತಿನ ಕಾರಣನು ಎಂದು ಅರ್ಥ. ದೇವೋತ್ತಮ ಪರಮ ಪುರುಷನು ಸರ್ವಶಕ್ತ ಮತ್ತು ಸರ್ವಾಂತರ್ಯಾಮಿ. ಭೌತಿಕ ದೇಹವು ಸರ್ವಾಂತರ್ಯಾಮಿಯಾಗಿ ಆಗಲಿ ಸರ್ವಶಕ್ತನಾಗಿ ಆಗಲಿ ಇರಲು ಸಾಧ್ಯವಿಲ್ಲವಾದುದರಿಂದ ಪ್ರಭುವಿನ ದೇಹವು ನಿಶ್ಚಯವಾಗಿಯೂ ಭೌತಿಕವಲ್ಲ. ದೇವೋತ್ತಮ ಪುರುಷನು ಭೌತಿಕ ದೇಹವನ್ನು ಧರಿಸಿ ಈ ಭೌತಿಕ ಪ್ರಪಂಚಕ್ಕೆ ಬರುತ್ತಾನೆ ಎನ್ನುವ ಮಾಯಾವಾದಕ್ಕೆ ಯಾವುದೇ ಸಮರ್ಥನೆಯೂ ಇಲ್ಲ.

ಭೌತಿಕ ತತ್ವಜ್ಞಾನಿಗಳ ಎಲ್ಲ ವಾದಗಳೂ ಕನಸಿನಲ್ಲಿಯ ನಿರ್ಣಯಗಳಂತೆ ಅಲ್ಪಕಾಲದ ಮಾಯಾ ಅಸ್ತಿತ್ವದಿಂದ ಮೂಡಿದವು ಎಂದು ನಾವು ನಿರ್ಣಯಿಸಬಹುದು. ಇಂತಹ ನಿರ್ಣಯಗಳಿಂದ ನಾವು ಪೂರ್ಣ ಸತ್ಯವನ್ನು ಖಂಡಿತವಾಗಿಯೂ ಮುಟ್ಟಲಾರೆವು. ಪೂರ್ಣಸತ್ಯವನ್ನು ಭಕ್ತಿಪೂರ್ವಕ ಸೇವೆಯಿಂದ ಮಾತ್ರವೇ ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯ. ಭಗವದ್ಗೀತೆಯಲ್ಲಿ ಪ್ರಭುವು ಹೇಳುವಂತೆ, ಭಕ್ತ್ಯಾ ಮಾಂ ಅಭಿಜಾನಾತಿ, "ಭಕ್ತಿಪೂರ್ವಕ ಸೇವೆಯಿಂದ ಮಾತ್ರವೇ ನನ್ನನ್ನು ಅರಿಯಲು ಸಾಧ್ಯ." ಈ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀಲ ಶ್ರೀಧರ ಸ್ವಾಮಿಗಳು ಒಂದು ಒಳ್ಳೆಯ ಕವನವನ್ನು ರಚಿಸಿದ್ದಾರೆ. ಅದರಲ್ಲಿ ಹೀಗೆ ಹೇಳಿದೆ– "ಪ್ರಿಯ ಪ್ರಭು, ಇತರರು ತಮ್ಮ ತತ್ವಶಾಸ್ತ್ರದ ಊಹೆಗಳನ್ನು ಕುರಿತು ವಿವರಿಸುತ್ತ ಮಿಥ್ಯ ವಾದದಲ್ಲಿ ಮತ್ತು ಒಣ ಊಹೆಯಲ್ಲಿ ತೊಡಗಿರಲಿ. ಅವರಿಗೆ ದೇವೋತ್ತಮ ಪರಮ ಪುರುಷನ ಅರಿವಿಲ್ಲದಿದ್ದರೂ ಅವರು ಮಹಾನ್ ಪಂಡಿತರಂತೆ ಸುಳ್ಳು ಸಂತೋಷವನ್ನು ಸವಿಯುತ್ತ ಅಜ್ಞಾನ ಮತ್ತು ಮಾಯೆಗಳ ಅಂಧಕಾರದಲ್ಲಿ ಅಲೆದಾಡುತ್ತಿರಲಿ. ನನ್ನ ಮಟ್ಟಿಗೆ ಹೇಳುವುದಾದರೆ ಮಾಧವ, ವಾಮನ, ತ್ರಿನಯನ, ಸಂಕರ್ಷಣ, ಶ್ರೀಪತಿ ಮತ್ತು ಗೋವಿಂದ – ಸರ್ವ ಸುಂದರನಾದ ದೇವೋತ್ತಮ ಪರಮ ಪುರುಷನ ಪವಿತ್ರ ನಾಮಸಂಕೀರ್ತನೆಯಿಂದಷ್ಟೇ ಮುಕ್ತಿಯನ್ನು ಪಡೆಯಲು ಬಯಸುತ್ತೇನೆ. ಅವನ ದಿವ್ಯನಾಮಗಳ ಸಂಕೀರ್ತನೆಯಿಂದಲೇ ನನಗೆ ಈ ಭೌತಿಕ ಅಸ್ತಿತ್ವದ ಮೈಲಿಗೆಯಿಂದ ಬಿಡುಗಡೆ ದೊರೆಯಲಿ".

ಹೀಗೆ ವೇದಗಳ ಸಾಕಾರ ರೂಪಗಳು ಈ ರೀತಿ ಹೇಳಿದವು– "ಪ್ರಿಯ ಪ್ರಭು, ನಿನ್ನ ಕೃಪೆಯಿಂದ ಮಾತ್ರವೇ ಜೀವಿಯು ನಿನ್ನ ಮಹೋನ್ನತ ದಿವ್ಯಸ್ಥಾನವನ್ನು ಸರಿಯಾಗಿ ಅರ್ಥಮಾಡಿಕೊಂಡಾಗ ತತ್ವಜ್ಞಾನಿಗಳು ಎನಿಸಿಕೊಂಡವರ ಅಥವಾ ಮಾನಸಿಕ ಊಹಾಪೋಹಗಳಲ್ಲಿ ತೊಡಗುವವರ ಬೇರೆ ಬೇರೆ ಅನಿಸಿಕೆಗಳು ಬೇಕೆನ್ನಿಸುವುದಿಲ್ಲ." ಇದು ಗೌತಮ, ಕಣಾದ, ಪತಂಜಲಿ ಮತ್ತು ಕಪಿಲ (ನಿರೀಶ್ವರ) ರ ಊಹಾಪೋಹದ ಅನಿಸಿಕೆಗಳಿಗೆ ಸಂಬಂಧಿಸಿದ್ದು. ವಾಸ್ತವವಾಗಿ ಕಪಿಲರು ಇಬ್ಬರು; ಒಬ್ಬನು ಕರ್ದಮ ಮುನಿಯ ಮಗ. ಅವನು ದೇವರ ಅವತಾರ.ಇನ್ನೊಬ್ಬನು ಆಧುನಿಕ ಯುಗದ ನಾಸ್ತಿಕ. ಸ್ವಯಂಭುವ ಮನುವಿನ ಕಾಲದಲ್ಲಿ ದೇವೋತ್ತಮ ಪರಮ ಪುರುಷನು ಕರ್ದಮ ಮುನಿಯ ಮಗನಾಗಿ ಕಾಣಿಸಿಕೊಂಡನು. ಇವನೇ ನಾಸ್ತಿಕ ಕಪಿಲನು ಎಂದು ಹಲವೊಮ್ಮೆ ತಪ್ಪಾಗಿ ಹೇಳುವುದುಂಟು. ದೇವಪುರುಷನ ಅವತಾರನಾದ ಕಪಿಲನು ಬಹು ಪ್ರಾಚೀನ ಕಾಲದಲ್ಲಿ ಕಾಣಿಸಿಕೊಂಡನು; ಆಧುನಿಕ ಯುಗವು ವೈವಸ್ವತ ಮನುವಿನ ಯುಗ, ಆದರೆ ಆ ಕಪಿಲನು ಕಾಣಿಸಿಕೊಂಡದು ಸ್ವಯಂಭುವ ಮನುವಿನ ಕಾಲದಲ್ಲಿ.

ಮಾಯಾವಾದಿ ಸಿದ್ಧಾಂತದಂತೆ ಅಭಿವ್ಯಕ್ತಿ ಪಡೆದ ಈ ಜಗತ್ತು ಅಥವಾ ಭೌತಿಕ ಜಗತ್ತು ಮಿಥ್ಯೆ ಅಥವಾ ಮಾಯೆ. ಅವರ ಉಪದೇಶದ ತತ್ವ , ಬ್ರಹ್ಮ ಸತ್ಯ, ಜಗತ್ ಮಿಥ್ಯ. ಅವರು ಹೇಳುವ ಪ್ರಕಾರ ಬ್ರಹ್ಮಜ್ಯೋತಿಯೊಂದೇ ಸತ್ಯ. ಬ್ರಹ್ಮಾಂಡವು ಮಾಯೆ ಅಥವಾ ಮಿಥ್ಯ. ಆದರೆ ವೈಷ್ಣವ ಸಿದ್ಧಾಂತದ ಪ್ರಕಾರ ಬ್ರಹ್ಮಾಂಡಕ್ಕೆ ದೇವೋತ್ತಮ ಪರಮಪುರುಷನೇ ಕಾರಣನು. ಭಗವದ್ಗೀತೆಯಲ್ಲಿ ಪ್ರಭುವು ತನ್ನ ಒಂದು ಸ್ವಾಂಶ ಭಾಗದಿಂದ ಈ ಭೌತಿಕ ಜಗತ್ತನ್ನು ಪ್ರವೇಶಿಸುತ್ತಾನೆ, ಸೃಷ್ಟಿಯು ಆಗುವುದು ಹೀಗೆ ಎಂದು ಹೇಳುತ್ತಾನೆ. ಅಸತ್ ಅಥವಾ ಅಲ್ಪಕಾಲದ ಬ್ರಹ್ಮಾಂಡವು ಪರಮ ಸತ್ಯದಿಂದ ಮಾಡಿದ್ದು ಎಂದು ವೇದಗಳು ತಿಳಿಸುತ್ತವೆ. ಎಲ್ಲವೂ ಪರಬ್ರಹ್ಮದಿಂದ ಮೂಡಿಬಂದಿದೆ ಎಂದು ವೇದಾಂತಸೂತ್ರವು ಹೇಳುತ್ತದೆ.ಆದುದರಿಂದ ವೈಷ್ಣವರು ಬ್ರಹ್ಮಾಂಡವು ಮಿಥ್ಯ ಎಂದು ಭಾವಿಸುವುದಿಲ್ಲ. ವೈಷ್ಣವ ತತ್ವಜ್ಞಾನಿಯು ಭೌತಿಕ ಜಗತ್ತಿನಲ್ಲಿರುವುದೆಲ್ಲವನ್ನೂ ಪರಮ ಪ್ರಭುವಿಗೆ ಸಂಬಂಧಿಸಿದಂತೆ ನೋಡುತ್ತಾನೆ. ಭೌತಿಕ ಜಗತ್ತಿನ ಈ ಕಲ್ಪನೆಯನ್ನು ಶ್ರೀಲ ರೂಪಗೋಸ್ವಾಮಿಯವರು ಬಹು ಚೆನ್ನಾಗಿ ವಿವರಿಸಿದ್ದಾರೆ. ಭೌತಿಕ ಜಗತ್ತು ಸಹ ಪರಮ ಪ್ರಭುವಿನ ಅಭಿವ್ಯಕ್ತಿ ಎನ್ನುವ ತಿಳಿವಳಿಕೆಯಿಲ್ಲದೆ ಅದನ್ನು ಮಾಯೆ ಅಥವಾ ಮಿಥ್ಯೆ ಎಂದು ತ್ಯಜಿಸುವುದು ನಿಷ್ಪ್ರಯೋಜಕವಾದದ್ದು. ಆದರೆ ವೈಷ್ಣವರಿಗೆ ಈ ಜಗತ್ತಿನಲ್ಲಿ ಮೋಹವಿಲ್ಲ. ಏಕೆಂದರೆ ಅವರು ಸಾಮಾನ್ಯವಾಗಿ ಭೌತಿಕ ಜಗತ್ತನ್ನು ಇಂದ್ರಿಯ ತೃಪ್ತಿಯ ವಸ್ತುವನ್ನಾಗಿ ಕಾಣುತ್ತಾರೆ. ವೈಷ್ಣವರಿಗೆ ಇಂದ್ರಿಯ ತೃಪ್ತಿಯು ಬೇಕಿಲ್ಲ; ಆದುದರಿಂದ ಅವರಿಗೆ ಭೌತಿಕ ಆಗುಹೋಗುಗಳಲ್ಲಿ ಮೋಹವಿಲ್ಲ. ವೈಷ್ಣವನು ಈ ಭೌತಿಕ ಜಗತ್ತನ್ನು ವೈದಿಕ ಆದೇಶಗಳ ನಿಯಂತ್ರಕ ತತ್ವಗಳಿಗೆ ಅನುಗುಣವಾಗಿ ಸ್ವೀಕರಿಸುತ್ತಾನೆ.

**ಮುಂದುವರೆಯುವುದು.........**

# ಸೌರಾಷ್ಟ್ರದ ವೈಭವ

–ಕಾಲಚಕ್ರ ಕೃಷ್ಣ ದಾಸ



ರಾಜ್ಕೋಟ್ನಲ್ಲಿ ಇಸ್ಕಾನ್ ದೇವಸ್ಥಾನದ ಉದ್ಘಾಟನಾ ಸಮಾರಂಭ **"ಸೌರಾಷ್ಟ್ರದ ವೈಭವ"**ವನ್ನು ಶ್ರೀ ರಾಮ ನವಮಿಯ (14 ನೇ ಎಪ್ರಿಲ್) ಮಂಗಳಕರ ದಿನದಂದು ತುಂಬಾ ಉತ್ಸಾಹದಿಂದ ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಉದಾತ್ತ ಸನ್ಯಾಸಿಗಳು, ಪ್ರಭುಪಾದರ ಹಿರಿಯ ಶಿಷ್ಯರು ಮತ್ತು ವಿಶ್ವದಾದ್ಯಂತದ ಹಿರಿಯ ವೈಷ್ಣವರು, ಇಸ್ಕಾನ್ ಇಂಡಿಯಾ ಚೇರ್ಮನ್ ಮತ್ತು ಜಿಬಿಸಿ ಪರಮಪೂಜ್ಯ ಗೋಪಾಲ್ ಕೃಷ್ಣ ಗೋಸ್ವಾಮಿ ಮಹಾರಾಜ್ ಮತ್ತು ಇಸ್ಕಾನ್ ಗುಜರಾತ್ ಕಾರ್ಯದರ್ಶಿ ಮತ್ತು ಶ್ರೀಲ ಪ್ರಭುಪಾದರ ಹಿರಿಯ ಅನುಯಾಯಿ ಯಶೋಮತಿನಂದನ್ ಪ್ರಭು ಅವರು ಉಪಸ್ಥಿತರಿದ್ದರು. ಪ್ರಪಂಚದಾದ್ಯಂತದ ಸಾವಿರಾರು ಭಕ್ತರು 3 ದಿನಗಳ ಉತ್ಸವಗಳಲ್ಲಿ ಭಾಗವಹಿಸಿದರು ಮತ್ತು 50,000 ಕ್ಕೂ ಹೆಚ್ಚಿನ ಪ್ರವಾಸಿಗರು ದೇವಾಲಯಕ್ಕೆ ಭೇಟಿ ಕೊಟ್ಟು ದೇವರ ದರ್ಶನ ಪಡೆದರು.

ಸೌರಾಷ್ಟ್ರವು ಗುಜರಾತಿನ ವಾಯುವ್ಯ ಭಾಗದಲ್ಲಿದ್ದು ಐತಿಹಾಸಿಕ ಕಾಲದಿಂದಲೂ ಅದರ ಪವಿತ್ರತೆಗೆ ಹೆಸರುವಾಸಿಯಾಗಿದೆ. ಭಗವಾನ್ ಶ್ರೀ ಕೃಷ್ಣನು ದ್ವಾರಕಾ ಧಾಮವನ್ನು ನಿರ್ಮಿಸಿದನು, ಸೌರಾಷ್ಟ್ರದ ಈ ರಾಜ್ಯದಲ್ಲಿ 100ಕ್ಕೂ ಹೆಚ್ಚು ವರ್ಷಗಳ ಕಾಲ ಅವನ ರಾಣಿಯರೊಂದಿಗೆ ವಾಸವಾಗಿದ್ದನು ಮತ್ತು ಈ ಸ್ಥಳವನ್ನು ಆಳಿದನು. ಸೌರಾಷ್ಟ್ರವು ಪ್ರಾಚೀನ ಸೋಮನಾಥ ದೇವಸ್ಥಾನಕ್ಕೆ ಪ್ರಸಿದ್ಧವಾಗಿದೆ. ಇದನ್ನು ಇನ್ನೂ ಹೆಚ್ಚು ವೈಭವೀಕರಿಸಿ ಪ್ರಖ್ಯಾತಿ ಗೊಳಿಸಲು ಕರುಣಾಮಯಿಯಾದ ಶ್ರೀಕೃಷ್ಣನು ಈಗ ಕೈಗಾರಿಕಾ ಮತ್ತು ಸಾಂಸ್ಕೃತಿಕ ನಗರವಾದ ರಾಜ್ಕೋಟ್ ಅನ್ನು ವೈಕುಂಠ ಧಾಮವನ್ನಾಗಿ ಪರಿವರ್ತಿಸಿದ್ದಾನೆ.

***ಮೂಲ ದೇವಾಲಯದ ಪ್ರವರ್ತಕರು ಮತ್ತು ದಾರ್ಶನಿಕರು :*** ಶ್ರೀ ಶ್ರೀ ರಾಧಾ ನೀಲ್ ಮಾಧವ್ ದೇವಾಲಯದ ಪ್ರವರ್ತಕರು ಮತ್ತು ದಾರ್ಶನಿಕರಾದ ಪರಮಪೂಜ್ಯ ಮಹಾವಿಷ್ಣು ಗೋಸ್ವಾಮಿ ಮಹಾರಾಜ್‌ರವರು ಇಸ್ಕಾನ್ ನ ಪ್ರಸಿದ್ಧ ಹಿರಿಯ ಸನ್ಯಾಸಿ. ಮಹಾರಾಜ್‌ರವರು ಮಹಾರಾಷ್ಟ್ರದ ಗ್ರಾಮದಲ್ಲಿ 1919ರಲ್ಲಿ ಗುಜರಾತಿನ ವೈಷ್ಣವ ಕುಟುಂಬದಲ್ಲಿ ಜನಿಸಿದರು. ಅವರು 1970ರ ದಶಕದ ಆರಂಭದಲ್ಲಿ ಶ್ರೀಲ ಪ್ರಭುಪಾದರನ್ನು ಭೇಟಿಯಾದ ನಂತರ ಲಂಡನ್ನಲ್ಲಿ ಕೃಷ್ಣಪ್ರಜ್ಞೆಯನ್ನು ಆರಂಭಿಸಿದರು ಮತ್ತು 40 ವರ್ಷಗಳ ಕಾಲ ಕೃಷ್ಣಪ್ರಜ್ಞೆಯನ್ನು ಅಭ್ಯಾಸ ಮಾಡುತ್ತಾ ಮತ್ತು ಪ್ರಪಂಚದಾದ್ಯಂತ ಉಪದೇಶ ನೀಡುತ್ತ ತಮ್ಮ ಜೀವನವನ್ನು ಕಳೆದರು. ಅವರ ಪ್ರೀತಿಯ ಭಾಗವತದಿಂದ ಅವರು ಪ್ರಸಿದ್ಧರಾಗಿದ್ದಾರೆ ಮತ್ತು ಭಾಗವತವನ್ನು ಎಲ್ಲರು ತಮ್ಮ ಜೀವ ಮತ್ತು ಆತ್ಮ ಎಂದು ಸ್ವೀಕರಿಸಲು ಎಲ್ಲರಿಗೂ ಸ್ಫೂರ್ತಿಯಾಗಿದ್ದಾರೆ. ಅವರ ಪ್ರೀತಿಯ ಮಾರ್ಗದರ್ಶನದ ಮೂಲಕ, ಭಕ್ತಿ ಸೇವೆಯ ಸರಳ ವಿಧಾನದಿಂದ ಮತ್ತು ದಿನನಿತ್ಯ ಬದುಕಿನಲ್ಲೂ ಶಾಸ್ತ್ರಗಳ ಅಳವಡಿಸುವಿಕೆಯಿಂದ ಅನೇಕ ಹೊಸಬರು ಕೃಷ್ಣಪ್ರಜ್ಞೆಗೆ ಆಕರ್ಷಿತರಾದುದಲ್ಲದೆ, ಕೃಷ್ಣಪ್ರಜ್ಞೆಯನ್ನು ಅಭ್ಯಾಸ ಮಾಡುವ ಭಕ್ತರು ಭಕ್ತಿ ಪಥದಲ್ಲಿ ಹೆಚ್ಚಿನ ನಂಬಿಕೆಯನ್ನು ಹೊಂದಿದರು. ಅವರು 2003ರಲ್ಲಿ ದ್ವಾರಕಾ ಧಾಮದಲ್ಲಿ ಶ್ರೀ ಶ್ರೀ ರುಕ್ಮಿಣಿ ದ್ವಾರಕಾಧೀಶ್ ಎಂಬ ಸುಂದರ ಕಲ್ಲಿನ ದೇವಸ್ಥಾನವನ್ನು ನಿರ್ಮಿಸಿದರು ಮತ್ತು 2010ರಲ್ಲಿ ಅವರು ಕೃಷ್ಣ ಪರಮಾವಧಿಯ ಗತಕಾಲದಲ್ಲಿ ಪ್ರವೇಶಿಸಿದ 9 ವರ್ಷಗಳ ನಂತರ, ಈಗ 2019 ರಲ್ಲಿ, ಈ ಭವ್ಯವಾದ ಅಮೃತಶಿಲೆಯ ದೇವಸ್ಥಾನವು ಅವರ ಶುದ್ಧ ಭಕ್ತಿ, ಸರಳತೆ, ಶ್ರೀಲ ಪ್ರಭುಪಾದರ ಮೇಲಿನ ನಂಬಿಕೆ ಮತ್ತು ಶ್ರೀಮದ್ ಭಾಗವತಂನಲ್ಲಿರುವ ದೃಢವಾದ ನಂಬಿಕೆಯಿಂದ ಸ್ಥಾಪಿತವಾಗಿದೆ.

***ವಿನಮ್ರ ಆರಂಭ :*** ಪರಮಪೂಜ್ಯ

ಮಹಾವಿಷ್ಣು ಗೋಸ್ವಾಮಿ ಮಹಾರಾಜ್ ಮತ್ತು ಯಶೋಮತಿನಂದನ್ ಪ್ರಭು ಅವರು 2002 ರಲ್ಲಿ ಒಮ್ಮೆ ರಾಜ್ಕೋಟ್ನ ಹೊರವಲಯದಲ್ಲಿರುವ ಕಳವಾದ್ ರಸ್ತೆಯ ಮೂಲಕ ಪ್ರಯಾಣಿಸುತ್ತಿರುವಾಗ ಪ್ರಭುರವರು ಮಹಾರಾಜ್‌ರವರಿಗೆ ಈ ಭೂಮಿಯನ್ನು ತಾವು 1986ರಲ್ಲಿ ಕೊಂಡುಕೊಂಡಿರುವುದಾಗಿ ಆದರೆ ಇದು ಬಂಜರು ಭೂಮಿ ಹಾಗೂ ಇದರಿಂದ ಏನು ಪ್ರಯೋಜನವಿಲ್ಲ ಎಂದು ತಿಳಿಸಿದರು. ಮಹಾರಾಜ್‌ರವರು ಭೂಮಿಯ ಹತ್ತಿರ ನಿಂತು ಈ ಭೂಮಿಯನ್ನು ಶ್ರೀಲ ಪ್ರಭುಪಾದರವರು ಏನಾದರೂ ಮಾಡಬಹುದೆಂದು ಯಶೋಮತಿನಂದನ್ ಪ್ರಭು ಅವರಿಗೆ ಮನವಿ ಮಾಡಿದರು. ಶ್ರೀಲ ಪ್ರಭುಪಾದರವರ ಸೇವೆಗೆ ಯಶೋಮತಿನಂದನ್ ಪ್ರಭು ಅವರು, ಭೂಮಿಯನ್ನು ಉತ್ತಮರಾದ ಮಹಾರಾಜ್ ರವರ ಮೂಲಕ ಸಮರ್ಪಿಸಿದರು.

***ಎದೆಗುಂದಿಸುವ ಸವಾಲುಗಳು ಮತ್ತು ಅದಮ್ಯ ಆತ್ಮ:*** ಮಹಾರಾಜ್‌ರವರು 2002ರಲ್ಲಿ ರಾಜ್ಕೋಟ್ನಲ್ಲಿ ಈ ತುಂಡು ಭೂಮಿಗೆ ಬಂದಾಗ, ಅವರು 84 ವರ್ಷ ವಯಸ್ಸಿನವರಾಗಿದ್ದರು ಮತ್ತು ಭೂಮಿಯು ನೀರಿಲ್ಲದೇ ಬಂಜರಾಗಿತ್ತು. ಆರಂಭದ ದಿನಗಳಲ್ಲಿ ನೀರಿನ ಯಾವುದೇ ಮೂಲವಿಲ್ಲದೆ ಹಾಗೂ ಬಹಳ ಕಡಿಮೆ ಮಾನವ–ಶಕ್ತಿಯಿಂದ ತುಂಬಾ ಸವಾಲನ್ನು ಎದುರಿಸಿದರು. ಆದರೆ ಶ್ರೀ ಕೃಷ್ಣನ ಮೇಲೆ ಸಂಪೂರ್ಣ ಅವಲಂಬಿತರಾಗಿ ಮಹಾರಾಜ್ ರವರು ತೀವ್ರವಾಗಿ ಪ್ರಾರ್ಥನೆ ಸಲ್ಲಿಸಿದರು ಮತ್ತು ದೃಢ ಭಕ್ತಿಯಿಂದ ಪ್ರಾರ್ಥಿಸಿದರು.ಪ್ರತಿದಿನ ಭೂಮಿಯ ಹತ್ತಿರ ಹಲವು ಭಕ್ತರೊಡನೆ ಶ್ರೀಮದ್ ಭಾಗವತಮ್ ಮತ್ತು ಪವಿತ್ರ ನಾಮಗಳನ್ನು ಪಠಿಸಿದರು ಹಾಗೂ ಭಕ್ತರು ಪ್ರತಿದಿನ ನಗರಕ್ಕೆ ತೆರಳಿ ಹರಿನಾಮವನ್ನು ಜಪಿಸಿದರು. ತನ್ನ ಪರಿಶುದ್ಧ ಭಕ್ತರ ದೃಢಭಕ್ತಿ ಮೆಚ್ಚಿದ ಭಗವಂತನು ಆ ಬಂಜರು ಭೂಮಿಯಲ್ಲಿ ನೀರಿನ ಮೂಲವನ್ನು ಅದ್ಭುತವಾಗಿ ಬಹಿರಂಗಪಡಿಸಿದನು. ನಂತರ ಮಹಾರಾಜ್‌ರವರು ಮಧ್ಯಮ ಗಾತ್ರದ ದೇವಸ್ಥಾನದ ರಚನೆಯೊಂದಿಗೆ 20 ಕೊಠಡಿ ಅತಿಥಿ ಗೃಹವನ್ನು ಸ್ಥಳೀಯ ಉದ್ಯಮಿ ಶ್ರೀ ಮಹೇಂದ್ರಸಿಂಗ್ ಜಡೇಜಾ ಅವರ ಸಹಾಯದಿಂದ ಪ್ರಾರಂಭಿಸಿದರು. ಅತಿಥಿಗೃಹವು 2003ರಲ್ಲಿ ಪೂರ್ಣಗೊಂಡಿತು ಮತ್ತು ಶ್ರೀ ಶ್ರೀ ರಾಧಾ ನೀಲಮಾಧವ್, ಶ್ರೀ ಪ್ರಹ್ಲಾದ್ ನರಸಿಂಹದೇವ್ ಮತ್ತು ಶ್ರೀ ಶ್ರೀ ಜಗನ್ನಾಥ್, ಬಲದೇವ್, ಸುಭದ್ರ ಅವರ ಅರ್ಚ ವಿಗ್ರಹಗಳನ್ನು ತಮ್ಮ ಇಚ್ಛೆಯಂತೆ ವೇದ ಸಂಪ್ರದಾಯದ ಪ್ರಕಾರ ಪ್ರತಿಷ್ಠಾಪಿಸಲಾಯಿತು. ರಾಜ್ಕೋಟ್ನಲ್ಲಿ 2003ರಲ್ಲಿ ಭಗವಂತನ ಅರ್ಚ ವಿಗ್ರಹಗಳು ಆಗಮಿಸುವ ಮುಂಚೆ ಪ್ರತಿ ಬೇಸಿಗೆಯಲ್ಲಿ ಬರಗಾಲದಿಂದ ಇದ್ದ ನಗರವು ಪ್ರತಿವರ್ಷ ಅಪಾರ ಮಳೆಯನ್ನು ಪವಾಡದಿಂದ ಪಡೆಯುತ್ತಿದ್ದು, ನಿವಾಸಿಗಳಿಗೆ ಅಪಾರ ಸಂತೋಷ ಮತ್ತು ಪರಿಹಾರವನ್ನು ನೀಡುತ್ತಿದೆ.

***ಬೆಳವಣಿಗೆಗಳು:*** ಮಹಾರಾಜ್ ರವರ ಪವಿತ್ರತೆ ಮತ್ತು ಒಡನಾಟದಿಂದ, ವಿಶ್ವದಾದ್ಯಂತ ಭೇಟಿ ನೀಡುವ ಭಕ್ತರ ಸಂಖ್ಯೆ ಉತ್ತಮವಾಗಿ ಬೆಳೆಯಿತು. ಭಾನುವಾರದ ಸಮಾರಂಭ ಬಹಳ ಬೇಗ ಜನಪ್ರಿಯವಾಯಿತು ಮತ್ತು ಇಡೀ ಸಭಾಂಗಣದಲ್ಲಿ ನೂರಾರು ಭಕ್ತರು ಕೀರ್ತನಗಳನ್ನು ಹಾಡುತ್ತಿದ್ದರು ಮತ್ತು ನೃತ್ಯ ಮಾಡುತಿದ್ದರು. ಜನ್ಮಾಷ್ಟಮಿಯಂದು 4 ದಿನಗಳ ಕಾಲ ಲಕ್ಷಾಂತರ ಭಕ್ತರು ಭಾಗವಹಿಸುತಿದ್ದರು. ರಥ ಯಾತ್ರೆ ಮತ್ತು ಇತರ ಎಲ್ಲಾ ಉತ್ಸವಗಳಲ್ಲಿ ಸಾವಿರಾರು ಭಕ್ತರು ಹಾಜರಾಗುತ್ತಿದ್ದರು. ಮಹಾರಾಜ್‌ರವರು ಶೀಘ್ರದಲ್ಲೇ ಗೋಪಾಲರ ಗೋಶಾಲವನ್ನು 20ಕ್ಕೂ ಹೆಚ್ಚಿನ ಹಸುಗಳೊಂದಿಗೆ ಉದ್ಘಾಟಿಸಿದರು. ಅವರು ದೈವಿಕ ವಾತಾವರಣದಲ್ಲಿ 120ಕ್ಕೂ ಹೆಚ್ಚಿನ ಮಕ್ಕಳ ಅಧ್ಯಯನಕ್ಕೆ ಅನುಕೂಲವಾಗುವಂತೆ ಶ್ರೀ ಪ್ರಹ್ಲಾದ್ ಇಂಟರ್ನ್ಯಾಷನಲ್ ಎಂಬ ಉತ್ತಮವಾದ ವೈದಿಕ ಶಾಲೆಯನ್ನು ಉದ್ಘಾಟಿಸಿದರು. ಮಹಾರಾಜ್‌ರವರು ಸ್ವತಃ ಶಿಕ್ಷಕರಾಗಿದ್ದು ಪ್ರತಿದಿನ ಮಕ್ಕಳಿಗೆ ಬೋಧಿಸಲು ಇಷ್ಟಪಡುತಿದ್ದರು. ಆದರೆ ತಮ್ಮ ಸೇವೆಯ ಮಿತಿಯಿಂದ ಎಂದಿಗೂ ತೃಪ್ತಿಪಡೆಯದೆ, ಮಹಾರಾಜ್‌ರವರು ಶ್ರೀ ಶ್ರೀ ರಾಧಾ–ನೀಲ್ ಮಾಧವ್‌ನ ಭಾರೀ ಸೌಂದರ್ಯದ ಅಮೃತಶಿಲೆಯ ದೇವಸ್ಥಾನವನ್ನು ಶ್ರೀಲ ಪ್ರಭುಪಾದರಿಗೆ ಸಮರ್ಪಿಸುವುದಾಗಿ ತಮ್ಮ ಜೀವನದ ದೀರ್ಘಕಾಲದ ಕನಸನ್ನು ನಮಗೆ ತಿಳಿಸಿದರು.

***'ಸೌರಾಷ್ಟ್ರದ ವೈಭವ' ಭೂಮಿ ಪೂಜೆ:*** ಭವ್ಯವಾದ ದೇವಸ್ಥಾನಕ್ಕೆ ಭೂಮಿ ಪೂಜೆಯನ್ನು 2007 ರಲ್ಲಿ ನಡೆಸಲಾಯಿತು. ಭೂಮಿ ಪೂಜೆಯ ಸಮಯದಲ್ಲಿ, ಮಹಾರಾಜ್ ರವರು ನಮಗೆ ವಿಶಿಷ್ಟ ವಾದ ಸೇವೆಯನ್ನು ಮಾಡುವ ಅವಕಾಶ ಕೊಟ್ಟರು. ಅವರು ನಮಗೆಲ್ಲಾ ಹರೇ ಕೃಷ್ಣ ಮಹಾಮಂತ್ರವನ್ನು ಹಲವಾರು ಪುಸ್ತಕಗಳಲ್ಲಿ ಬರೆದು ಎಲ್ಲಾ ಪುಟಗಳನ್ನು ಪವಿತ್ರ ನಾಮಗಳೊಂದಿಗೆ ತುಂಬಿಸಲು ಹೇಳಿದರು. ನಂತರ ಅವರು ಅನಂತ–ಶೇಷನ ಅಡಿಪಾಯದ ಜೊತೆಗೆ ಎಲ್ಲವನ್ನೂ ಇರಿಸಲು ನಮಗೆ ಸೂಚನೆ ನೀಡಿದರು. ನಂತರ ಅವರು ಮಹತ್ವಪೂರ್ಣವಾದ ಮಾತುಗಳನ್ನು ಈ ರೀತಿಯಾಗಿ ಹೇಳಿದರು, "ಪವಿತ್ರ ದೇವರ ನಾಮಗಳು ಈ ದೇವಾಲಯದ ಅಡಿಪಾಯ ಮತ್ತು ಈ ಪವಿತ್ರ ನಾಮಗಳು ದೇವಾಲಯವನ್ನು ನಿರ್ಮಿಸುತ್ತವೆ. ನಾವು ಇದನ್ನು ನಿರ್ಮಿಸುತ್ತಿಲ್ಲ. ನಾವು ನಿರಂತರ



ಭಕ್ತಿಯನ್ನು ಮಂತ್ರ ಪಠನೆ, ಓದು, ಮಂಗಳ ಆರತಿ ಮತ್ತು ಸೇವೆಯ ಮೂಲಕ ಸಮರ್ಪಿಸಬೇಕು. ಈ ದೇವಾಲಯವು ನಮ್ಮ ಪ್ರಾಮಾಣಿಕ ಭಕ್ತಿ ಸೇವೆಯ ಸಾಮರ್ಥ್ಯದ ಮೇಲೆ ನಿಲ್ಲುತ್ತದೆ". ನಂತರ ಭಗವಂತನಾದ ಶ್ರೀ ಕೃಷ್ಣನ ಅನಿಯಮಿತ ಕರುಣೆಯಿಂದ ದೇವಸ್ಥಾನದ ನಿರ್ಮಾಣ ಪ್ರಾರಂಭವಾಯಿತು.

***ಹಣ ಸಂಗ್ರಹಣೆ ಕೃಷ್ಣನ ಜವಾಬ್ದಾರಿ, ನಮ್ಮದಲ್ಲ:*** ಹಣದ ಹರಿವಿನ ಪ್ರಕಾರ ನಿರ್ಮಾಣ ಕಾರ್ಯವು ಮುಂದುವರಿಯಲಿ, ಯಾವುದೇ ಲಕ್ಷ್ಮೀಯು(ದೇಣಿಗೆ) ಬರಲಿ 100 ಶೇಕಡಾ ನಿರ್ಮಾಣಕ್ಕೆ ವ್ಯಯಿಸಲಾಗುತ್ತದೆ ಎಂದು ಮಹಾರಾಜ್‌ರವರು ನಿಶ್ಚಯಿಸಿದರು ಹಾಗೂ ಅದೇ ಸಮಯದಲ್ಲಿ, ಮಹಾರಾಜ್‌ರವರು ಕಟ್ಟುನಿಟ್ಟಾದ ತತ್ತ್ವವನ್ನು ಅನುಸರಿಸಿದರು – ಅವರು ಎಂದಿಗೂ ತಮ್ಮ ಬಾಯಿಯಿಂದ ದೇಣಿಗೆಯನ್ನು ಕೇಳುವುದಿಲ್ಲ ಎಂದು. ಅವರ ಪ್ರಖ್ಯಾತ ಹೇಳಿಕೆಯು ಸಾಮಾನ್ಯವಾಗಿ ನಮ್ಮ ಕಿವಿಗಳಲ್ಲಿ ಗುಣುಗುಟ್ಟುತ್ತದೆ, "ನಮ್ಮ ಕೆಲಸ ಭಕ್ತಿ ಮಾತ್ರ ಮತ್ತು ಶ್ರೀ ಕೃಷ್ಣನ ಕೆಲಸ ತನ್ನ ದೇವಸ್ಥಾನವನ್ನು ನಿರ್ಮಿಸುವುದು. ಅವರ ದೇವಸ್ಥಾನಕ್ಕಾಗಿ ನಾವೇಕೆ ದೇಣಿಗೆ ಸಂಗ್ರಹಿಸಬೇಕು?", ಒಮ್ಮೆ ಅವರು ಆಶ್ಚರ್ಯಕರವಾದ ಈ ಮಾತುಗಳನ್ನು ಹೇಳಿದರು ಒಮ್ಮೆ ಅಡಿಪಾಯವನ್ನು ಕಟ್ಟಲು ಶ್ರೀ ಕೃಷ್ಣನು ನಮಗೆ ಹಣವನ್ನು ಕೊಟ್ಟರೆ ನಾವು ಅಡಿಪಾಯವನ್ನು ನಿರ್ಮಿಸುತ್ತೇವೆ ಮತ್ತು ಅಲ್ಲಿ ನಮ್ಮ ಸಂಕೀರ್ತನೆಯನ್ನು ಮಾಡುತ್ತೇವೆ". ಈ ರೀತಿಯಾಗಿ ಅವರು ಶ್ರೀ ಕೃಷ್ಣನ ಪ್ರತಿಯಾಗಿ ತುಂಬು ವಿಶ್ವಾಸದಿಂದ ಇದ್ದರು.

***ಮಹಾರಾಜ್‌ರವರು ತಮ್ಮ ಶಿಷ್ಯರಿಗೆ ದೇವಾಲಯದ ನಿರ್ಮಾಣಕ್ಕಾಗಿ ಮೂರು ಪ್ರಮುಖ ತತ್ವಗಳನ್ನು ಸೂಚಿಸಿದರು:***

1. ಯಾರಿಂದಲೂ ಲಕ್ಷ್ಮೀ(ದೇಣಿಗೆ) ಯನ್ನು ಬೇಡಿಕೊಳ್ಳಬೇಡಿ.

2. ಶ್ರೀಶ್ರೀರಾಧಾ–ನೀಲ್‌ಮಾಧವ್ ಸೌಂದರ್ಯ ಅಮೃತಶಿಲೆಯ ದೇವಸ್ಥಾನವನ್ನು ಕಟ್ಟಲು ಕಠಿಣ ಕೆಲಸ ಮಾಡಿ.

3. ಪ್ರೀತಿಯ ವಹಿವಾಟುಗಳನ್ನು ಅಭ್ಯಾಸ ಮಾಡಿ ಮತ್ತು ನಿಮ್ಮ ಆಜ್ಞೆಯನ್ನು ಪಾಲಿಸುವವರಿಗೆ ಮಾತ್ರವಲ್ಲದೇ ಎಲ್ಲರಿಗೂ ನಮ್ರತೆಯಿಂದ ಸೇವೆ ಸಲ್ಲಿಸಿ.

ಈ ತತ್ವಗಳ ಮೇರೆಗೆ ಮಹಾರಾಜ್ ಅವರು, "ಉದ್ಘಾಟನಾ ಸಮಯದಲ್ಲಿ ಸಂದರ್ಶಿಸುವ ಭಕ್ತರಿಗೆ ಉಳಿದುಕೊಳ್ಳಲು ಒಳ್ಳೆ ಸೌಕರ್ಯಗಳು, ಸಾರಿಗೆ ವ್ಯವಸ್ಥೆ, ಪ್ರಸಾದ, ಒಳ್ಳೆ ಸೌಲಭ್ಯಗಳನ್ನು ಒದಗಿಸಿ ವಿಶಾಲ ಹೃದಯದಿಂದ ಅವರ ಜೊತೆ ಕಳೆಯಿರಿ" ಎಂದು ಹೇಳಿದರು. ಒಟ್ಟಾರೆಯಾಗಿ ಅಭ್ಯಾಸ ಮಾಡಲು ಅಸಾಧ್ಯವಾದ ಈ ತತ್ವಗಳನ್ನು ಹೇಗೆ ಕಾರ್ಯರೂಪಕ್ಕೆ ತರುವುದು? ಮಹಾರಾಜ್ ಅವರು ತಮ್ಮದೇ ಆದ ಉದಾಹರಣೆಯ ಮೂಲಕ ಅದನ್ನು ತೋರಿಸಿದ್ದಾರೆ, ಈ ತತ್ವಗಳನ್ನು ನಾವು ಅನುಸರಿಸಬೇಕಾದ ಏಕೈಕ ಮಾರ್ಗವೆಂದರೆ ಅಪ್ರತಿಮ ಪ್ರಭುವಿನ ಪಾದ ಕಮಲದ ಅಡಿಯಲ್ಲಿ ಧೃಡವಾದ ನಂಬಿಕೆ ಮತ್ತು ಭಕ್ತಿ ಬೆಳೆಸುವುದು. ಹಲವಾರು ನಿದರ್ಶನದಲ್ಲಿ ಭಕ್ತರು ಭಾರೀ ಪ್ರಮಾಣದ ದೇಣಿಗೆ ನೀಡುತ್ತೇವೆಂದು ಭರವಸೆ ನೀಡುತ್ತಾರೆ ಆದರೆ ನಂತರ ಅವರ ವಾಗ್ದಾನದಿಂದ ದೂರವಿರುತ್ತಾರೆ. ಆದರೆ ಮಹಾರಾಜ್‌ರು ಅವರೊಂದಿಗೆ ಎಂದಿಗೂ ಅಸಮಾಧಾನ ಹೊಂದಲಿಲ್ಲ ಮತ್ತು ಯಾವಾಗಲೂ ಅವರ ಪ್ರೀತಿಯ ಆಶ್ರಯದ ಹಿತವಾದ ನೆರಳನ್ನು ನೀಡಿದರು. ಅದೇ ಸಮಯದಲ್ಲಿ, ಕೆಲವೊಂದು ಶ್ರೀಮಂತ ವ್ಯಕ್ತಿಗಳನ್ನು ಎಂದಿಗೂ ಸ್ವಲ್ಪ ದೇಣಿಗೆಗೋಸ್ಕರ ಸಂತೈಸುತ್ತಿರಲಿಲ್ಲ. ಈ ನಿಟ್ಟಿನಲ್ಲಿ, ಅವರು ಶಾಸ್ತ್ರಗಳಿಂದ ಬಂದ ಈ ಸುಂದರವಾದ ಶ್ಲೋಕವನ್ನು ಜೀವಮಾನದ ಪಾಠವಾಗಿ ಪರಿಗಣಿಸುತ್ತ ಇದ್ದರು.

*ರೇ ರೇ ಚಾತಕ ಸಾವಧಾನ ಮನಸಾ ಮಿತ್ರಾ*
*ಕ್ಷಣಂ ಶ್ರೂಯತಾಮ್*
*ಅಂಬೋದಾ ಭಗವೋ ವಸಂತಿ ಗಗನೇ*
*ಸರ್ವೇಪಿ ನೈಕಾದೃಶಾ*
*ಕೇಚಿದ್ ವೃಷ್ಟಿಭಿರ್ ಆರ್ದ್ರಯಂತಿ ಧರಣೀ*
*ಗರ್ಜನ್ತಿ ಕೇಚಿದ್ ವೃತಾಹ*
*ಯೋಮ್ ಯೋಮ್ ಪಶ್ಯಸಿ ತಸ್ಯ ತಸ್ಯ*
*ಪುರಾತೋ ಮಾ ಬ್ರೂಹಿ ದೀನಂ ವಚಹ*

ಚಾತಕ ಎನ್ನುವುದು ಹಕ್ಕಿಯಾಗಿದ್ದು ಅದು ಮಳೆ ನೀರು ಮಾತ್ರ ಕುಡಿಯುತ್ತದೆ, ಅದೂ ಸಹ ಸ್ವಾತಿ ನಕ್ಷತ್ರದ ದಿನದಲ್ಲಿ ಮಾತ್ರ. ಕವಿ ಅದನ್ನು ಉದ್ದೇಶಿಸಿ, "ನನ್ನ ಸ್ನೇಹಿತ ಚಾತಕ, ದಯವಿಟ್ಟು ಒಂದು ಕ್ಷಣ ಕಿವಿಗೊಡು. ಯಾವಾಗಲೂ ನಿನ್ನ ಮನಸ್ಸಿನಲ್ಲಿ ಈ ವಿಷಯವನ್ನು ತಿಳಿದಿರು, ಆಕಾಶದಲ್ಲಿ ಹಲವು ಮೋಡಗಳು ಇವೆ. ಆದರೆ ಎಲ್ಲಾ ಮೋಡಗಳು ನಿನ್ನ ದಾಹವನ್ನು ತೀರಿಸಲಾಗುವುದಿಲ್ಲ, ಅವುಗಳಲ್ಲಿ ಕೆಲವು ಮಾತ್ರ ಭೂಮಿಯನ್ನು ತೇವವಾಗಿಸಬಹುದು ಮತ್ತು ಇನ್ನುಳಿದವು ಸುಮ್ಮನೆ ಧ್ವನಿಯನ್ನುಂಟುಮಾಡಿ ದೂರ ಹೋಗಬಹುದು. ಆದ್ದರಿಂದ ದಯವಿಟ್ಟು ಪ್ರತಿ ಮೋಡದ ಕಡೆಗೆ ನೀರಿಗಾಗಿ ಬಾಯಿ ತೆಗಿಯಬೇಡ ಹಾಗೂ ದೈನ್ಯತೆಯಿಂದ ನೀರಿಗಾಗಿ ಬೇಡಿಕೊಳ್ಳಬೇಡ."

ಕೆಲವು ಸಮಯದಲ್ಲಿ ಭಕ್ತರು ತಾವು ಯಾವುದೇ ಲಕ್ಷ್ಮೀ ಸೇವೆಯನ್ನು ತಮ್ಮಿಂದ ಮಾಡಲು ಸಾಧ್ಯವಾಗಲಿಲ್ಲ ಎಂದು ಪಶ್ಚಾತ್ತಾಪಪಡುವ ಸಂಧರ್ಭಗಳಿವೆ. ಮಹಾರಾಜ್‌ರವರು ಅವರಿಗೆ ಪ್ರೀತಿಯಿಂದ ಈ ರೀತಿ ಹೇಳುತ್ತಿದ್ದರು, "ಮಗನೇ ಚಿಂತಿಸಬೇಡ. ಯಾವುದೇ ಹಣವನ್ನು ಕಳುಹಿಸುವ ಅಗತ್ಯವಿಲ್ಲ. ನೀವು ನಿಮ್ಮ (ಜಪ) ಸಂಖ್ಯೆಯನ್ನು ನಮಗೆ ಕಳುಹಿಸುತ್ತಿರಿ, ನಿಮ್ಮ ಜಪ ಸಂಖ್ಯೆಯ (ಫಲವು) ದೇವಾಲಯವನ್ನು ನಿರ್ಮಿಸುತ್ತವೆ. ನಿಮಗೆ ಯಾವುದೇ ಲಕ್ಷ್ಮಿಯ(ಹಣ) ಅಗತ್ಯವಿದ್ದರೆ, ನಾವು ನಿಮಗೆ ಕೊಡುತ್ತೇವೆ. ಮಗನೇ ತಂದೆಯಿಂದ ಯಾವುದೇ ಸಹಾಯವನ್ನು ಕೇಳಲು ಹಿಂಜರಿಯಬಾರದು."

ಲಕ್ಷ್ಮೀ(ದೇಣಿಗೆ) ಸಂಗ್ರಹಿಸುವ ಬಗ್ಗೆ ಮಹಾರಾಜ್ ರವರು ಆಗಾಗ್ಗೆ ಈ ಮಾತುಗಳನ್ನು ಹೇಳುತ್ತಿದ್ದರು, ಇತರರ ಪಾದುಕೆಗಳಲ್ಲಿ ನಮ್ಮ ಪಾದಗಳನ್ನು ಇಟ್ಟಾಗ ಆ ಪಾದುಕೆಗಳು ತನ್ನ ಯಜಮಾನನ ಶ್ರಮವನ್ನು ನಮಗೆ ಅರಿವು ಮಾಡಿಕೊಡುತ್ತವೆ. ಮಹಾರಾಜ್‌ರವರು, ಭಗವತಂನ 6.10.6 ಪದ್ಯ ತಮ್ಮ ಹೃದಯಕ್ಕೆ ಹತ್ತಿರವಾಗಿತ್ತು ಎಂದು ಉಲ್ಲೇಖಿಸುತ್ತಾರೆ:

*ನೂನಂ ಸ್ವಾರ್ಥ–ಪರೋ ಲೋಕೋ ನ*
*ವೇದ ಪರಸಂಕಟಂ*
*ಯದಿ ವೇದ ನ ಯಾಚೇತ್ ನೇತಿ ನಾಹ*
*ಯದೀಶ್ವರಃ*

ಸ್ವಾರ್ಥಪರರು ಇತರರ ನೋವು ತಿಳಿಯದೆ ಇತರರಿಂದ ಏನಾದರೂ ಬೇಡಿಕೊಳ್ಳುತ್ತಾರೆ. ಆದರೆ ಭಿಕ್ಷುಕನೊಬ್ಬನು ಕೊಡುವವರ ಕಷ್ಟವನ್ನು ತಿಳಿದಿದ್ದರೆ, ಅವನು ಏನನ್ನೂ ಕೇಳುವುದಿಲ್ಲ. ಅಂತೆಯೇ, ದಾನ ನೀಡಲು ಸಮರ್ಥನಾಗಿರುವವನು ಭಿಕ್ಷುಕನ ಕಷ್ಟವನ್ನು ತಿಳಿದಿರುವುದಿಲ್ಲ, ಇಲ್ಲದಿದ್ದರೆ ಅವನು ಭಿಕ್ಷುಕನಿಗೆ ತಾನು ಬಯಸಿದದ್ದನ್ನು ನೀಡಲು ನಿರಾಕರಿಸುವುದಿಲ್ಲ.

***ಭಕ್ತಿಯು ದೇವಾಲಯವನ್ನು ನಿರ್ಮಿಸುತ್ತದೆ:***

ಮಹಾರಾಜ್‌ರವರು ತಮ್ಮ ಶಿಷ್ಯರ ಮನಸ್ಸಿನಲ್ಲಿ ತಮ್ಮ ಶಕ್ತಿಯುತ ಸಾಕ್ಷಾತ್ಕಾರವನ್ನು ಸದೃಢಗೊಳಿಸಿ, ದೇವಾಲಯಗಳು ಹಣದಿಂದ ನಿರ್ಮಿಸಲ್ಪಟ್ಟಿಲ್ಲ, ಆದರೆ ನಮ್ಮ ಪ್ರಾಮಾಣಿಕ ಭಕ್ತಿ ಸೇವೆಯಿಂದ ಎನ್ನುತ್ತಿದ್ದರು. ಒಮ್ಮೆ ಅವರು ಪೂರ್ಣವಾದ ಸಾಕ್ಷಾತ್ಕಾರವನ್ನು ಹೀಗೆ ಹಂಚಿಕೊಂಡರು, "ನಾವು ದೇವಸ್ಥಾನವನ್ನು ನಿರ್ಮಿಸುವಾಗ ನಮ್ಮ ಭಕ್ತಿ ಸೇವೆಯನ್ನು ಬೆಳೆಸುತ್ತೇವೆ. ಅದು ವಿಭಿನ್ನವಾಗಿದೆ. ಹಾಗಾಗಿ ನಮ್ಮ ಭಕ್ತಿಯ ಚೌಕಟ್ಟು ದೇವಸ್ಥಾನದ ಅಡಿಪಾಯವಾಗಿರಬೇಕು". ಮಹಾರಾಜ್‌ರವರ ದಣಿವರಿಯದ ಶ್ರಮ ಮತ್ತು ಮಾರ್ಗದರ್ಶನದಿಂದ ರಾಜ್ಕೋಟ್ನ ಪ್ರಮುಖ ದೇವಾಲಯವನ್ನು ನಿರ್ಮಿಸಲಾಯಿತು. ಪ್ರತಿದಿನ ಬೆಳಗ್ಗೆ ಭಾಗವತಂ ತರಗತಿಗಳ ಉಪನ್ಯಾಸದ ನಂತರ , ಮಹಾರಾಜ್‌ರವರು ದಿನಕ್ಕೆ 6 ರಿಂದ 7 ಗಂಟೆಗಳ ಕಾಲ ಹೊಸ ದೇವಾಲಯ ನಿರ್ಮಾಣದ ಉಸ್ತುವಾರಿಯನ್ನು ವಹಿಸುತ್ತಿದ್ದರು. ಮಹಾರಾಜ್ ರವರು ಪ್ರತಿ ನಿರ್ಮಾಣ ಕಾರ್ಯಕರ್ತರೊಂದಿಗೆ ಅವರ ಯೋಗಕ್ಷೇಮ, ಕುಟುಂಬ ಮತ್ತು ಎಲ್ಲದರ ಬಗ್ಗೆ ಪ್ರೀತಿಯಿಂದ ಮಾತನಾಡುತ್ತಿದ್ದರು. ಕಾರ್ಮಿಕರು ಸಂತೋಷದಿಂದ ಹೀಗೆ ಹೇಳಿದರು, "ನಾವು ಅನೇಕ ದೇವಾಲಯಗಳನ್ನು ನಿರ್ಮಿಸಿದ್ದೇವೆ. ಆದರೆ ಈ ದೇವಾಲಯವು ಬಹಳ ವಿಶಿಷ್ಟವಾಗಿದೆ ಏಕೆಂದರೆ ನಾವು ಸಂಬಳದೊಂದಿಗೆ ಪ್ರೀತಿಯನ್ನು ಪಡೆಯುತ್ತೇವೆ." ಮಹಾರಾಜ್ ರವರು, ನಡೆಯುವ ಪ್ರತಿಯೊಂದು ಖರ್ಚನ್ನೂ ಸರಿಯಾಗಿ ಪರಿಶೀಲಿಸುತ್ತಿದ್ದರು ಮತ್ತು ಎಲ್ಲಿ ಸಾಧ್ಯವಾದರೆ ಅಲ್ಲಿ ಹಣವನ್ನು ಉಳಿತಾಯ ಮಾಡುತ್ತಿದ್ದರು. ಇವರ ಕಾರ್ಯ ನಿರ್ವಹಣೆಯ ರೀತಿಯು ಬೇರೆಯವರಿಗೆ ಮಾರ್ಗದರ್ಶಿಯಾಗಿತ್ತು.

***ಪರಿಶುದ್ಧನಾದ ಶ್ರೀ ಕೃಷ್ಣನ ಭಕ್ತನು ಶಾಶ್ವತವಾದ ಶ್ರೀ ಕೃಷ್ಣನ ಪರಂಧಾಮಕ್ಕೆ ಸೇರುತ್ತಾನೆ:*** 2010ರ ಜನವರಿ 25ರಂದು, ಮಹಾರಾಜ್‌ರವರು 91 ನೇ ವಯಸ್ಸಿನಲ್ಲಿ ಲೌಕಿಕ ಜಗತ್ತಿನ ಹಿಂದಿನ ಕಾರ್ಯಗಳನ್ನು ಶ್ರೀ ಕೃಷ್ಣ ಕೃಪೆಯಿಂದ ಮುಗಿಸಿ, ಶ್ರೀ



ಕೃಷ್ಣನ ಹಿಂದಿನ ಶಾಶ್ವತ ಪರಂಧಾಮವನ್ನು ಪ್ರವೇಶಿಸಿದರು. ಮಹಾರಾಜ್‌ರವರು ನಮ್ಮ ಪ್ರಾಪಂಚಿಕ ದೃಷ್ಟಿಕೋನವನ್ನು ಬಿಟ್ಟರೂ, ಇಸ್ಕಾನ್ ರಾಜ್ಕೋಟ್ ಅಭಿವೃದ್ಧಿಯ ಪ್ರತಿ ಹಂತದಲ್ಲಿಯೂ ನಾವು ಮಹಾರಾಜ್‌ರವರ ಉಪಸ್ಥಿತಿಯನ್ನು ಅನುಭವಿಸುತ್ತಿದ್ದೆವು. **'ಸೌರಾಷ್ಟ್ರದ ವೈಭವ'** ಯೋಜನೆಯನ್ನು ಪೂರ್ಣಗೊಳಿಸುವ ಸೇವೆಯನ್ನು ಅವರ ಶಿಷ್ಯರಾದ ದೇವಕಿನಂದನ್ ಪ್ರಭು (ಸಿಂಗಪುರ್) ಮತ್ತು ವೈಷ್ಣವ ಸೇವಾ ಪ್ರಭು ಅವರ ನೇತೃತ್ವದಲ್ಲಿ ಮುಂದುವರೆಸಲು ಸೂಚಿಸಿದ್ದರು. ವರ್ಷಗಳು ಕಳೆದ ಹಾಗೆ, ದೇಣಿಗೆಗಳು ಸ್ವಲ್ಪ ಸ್ವಲ್ಪವಾಗಿ ಮಹಾರಾಜ್ ರವರ ಕೆಲವು ಶಿಷ್ಯರಿಂದ ಬರುತ್ತಿದ್ದವು, ಯಾವುದೇ ದೊಡ್ಡ ದಾನಿಗಳು ಈ ಯೋಜನೆಯಲ್ಲಿ ಪಾಲ್ಗೊಳ್ಳಲಿಲ್ಲ. ಹಲವಾರು ಸವಾಲುಗಳ ನಡುವೆಯೂ ವೈಷ್ಣವ ಸೇವಾ ಪ್ರಭುರವರು ಮಹಾರಾಜ್‌ರವರ ಮೇಲಿನ ಭಕ್ತಿ ಶ್ರದ್ಧೆಯಿಂದ, ದೇವಕಿನಂದನ್ ಪ್ರಭುರವರ ಮಾರ್ಗದರ್ಶನದಿಂದ ಕಠಿಣ ಪರಿಶ್ರಮ ಹಾಗೂ ಸಂಪೂರ್ಣ ನಂಬಿಕೆಯಿಂದ ಕಾರ್ಯ ನಿರ್ವಹಿಸುತ್ತಿದ್ದರು.

ಮಹಾರಾಜ್ ರವರು ನಮಗೆ ಉಪದೇಶಿಸಿದಂತೆ, ಭಾಗವತಂ ಅಧ್ಯಯನದ ಪ್ರಕಾರ ನಾವು ನಿರ್ಲಿಪ್ತವಾಗಿರಬೇಕು, ಕೆಲವೊಂದು ಶಿಷ್ಯರು ತಮ್ಮ ಪಿತ್ರಾರ್ಜಿತ ಆಸ್ತಿ, ಉಳಿತಾಯ ಮತ್ತು ಆದಾಯವನ್ನು ಯೋಜನೆ ಪೂರ್ಣಗೊಳಿಸಲು ನೀಡಿದರು. ವಿಶ್ವದ ವಿವಿಧ ಭಾಗಗಳಲ್ಲಿನ ಮಹಾರಾಜ್ ರವರ ಇತರ ಶಿಷ್ಯರು ಮತ್ತು ಹಿತೈಷಿಗಳು ತಮ್ಮ ವೈಯಕ್ತಿಕ ಸಾಮರ್ಥ್ಯದ ಮೇರೆಗೆ ಕೊಡುಗೆ ನೀಡಿದರು.

***ಕೃಷ್ಣನು ತನ್ನ ದೇವಾಲಯವನ್ನು ತಾನೇ ನಿರ್ಮಿಸುತ್ತಾನೆ:*** ಮಹಾರಾಜ್‌ರವರ ಕರುಣೆಯಿಂದ ದೇವಾಲಯದ ನಿರ್ಮಾಣ ಸೇವೆಯು 2014ರ ಸುಮಾರಿಗೆ ವೇಗವನ್ನು ಪಡೆದುಕೊಂಡಿತು. ದೇವಾಲಯದ ನಿರ್ಮಾಣದ ಮೂಲ ಯೋಜನೆ ಮತ್ತು ನಮ್ಮ ಕಣ್ಣುಗಳ ಮುಂದೆ ಪ್ರಸ್ತುತ ಪಡಿಸಿದ ಪ್ರಸ್ತುತ ಭವ್ಯವಾದ ರೂಪವು ಅಸಾಧಾರಣವಾಗಿ ವಿಭಿನ್ನವಾಗಿದೆ. ವಾಸ್ತುಶಿಲ್ಪಿ ಮತ್ತು ರಚನಾತ್ಮಕ ಇಂಜಿನಿಯರ್‌ಗಳು ಕೂಡಾ ಈ ಭವ್ಯ ಕಟ್ಟಡ ನಿರ್ಮಾಣವಾಗಿರುವ ರೀತಿ ನೋಡಿ ವಿಸ್ಮಯಗೊಂಡಿದ್ದರು. ಮಹಾರಾಜ್‌ರವರ ಶುದ್ಧ ಭಕ್ತಿ ಮತ್ತು ಶ್ರೀ ಕೃಷ್ಣನನ್ನು ಓಲೈಸುವ ಪರಿಣಾಮ ಅಸಾಧ್ಯವಾದ ನಿರ್ಮಾಣವು ಸಾಧ್ಯವಾಗಿದೆ ಎಂದು ಇದು ಸ್ಪಷ್ಟವಾಗಿ ಸಾಬೀತುಪಡಿಸುತ್ತದೆ.

ಮಹಾರಾಜ್ ಅವರ ನಿರ್ಗಮನದ ಸಮಯದಲ್ಲಿ, ದೇವಾಲಯದ ನಿರ್ಮಾಣವನ್ನು ಪೂರ್ಣಗೊಳಿಸಲು ಹಿರಿಯ ಅಧಿಕಾರಿಗಳಾದ ಯಶೋಮತಿನಂದನ್ ಪ್ರಭು ಮತ್ತು ಪರಮಪೂಜ್ಯ ಗೋಪಾಲಕೃಷ್ಣ ಗೋಸ್ವಾಮಿ ಮಹಾರಾಜ್‌ರ ಮಾರ್ಗದರ್ಶನ ಪಡೆಯಿರಿ ಎಂದು ತಮ್ಮ ಶಿಷ್ಯರಿಗೆ ಸೂಚನೆ ನೀಡಿದ್ದರು. ಶ್ರೀಲ ಪ್ರಭುಪಾದರ ಅತೀಂದ್ರಿಯ ಕುಟುಂಬದವರಾದ ವೈಷ್ಣವರ ಆಶೀರ್ವಾದದಿಂದ ಮತ್ತು ಪ್ರಾಮಾಣಿಕವಾದ ಇತರ ಅನೇಕ ಹಿತೈಷಿ ಗಳಿಂದ ಅತ್ಯಂತ



ನರ್‌ಸಿಂಹಾನಂದ ಪ್ರಭು, ಬ್ರಾಜಾ ಹರಿ ಪ್ರಭು, ದೇವಕಿನಂದನ್ ಪ್ರಭು (ಇಸ್ಕಾನ್ ಜುಹು), ಭೀಮ ಪ್ರಭು, ಬಾಸು ಘೋಷ್ ಪ್ರಭು, ನಿತ್ಯಾನಂದ ಪ್ರಭು, ಸಚ್ಚಿದಾನಂದ ಪ್ರಭು, ವಿಷ್ಣುನಾಮ್ ಪ್ರಭು, ಜಗತ್ ಸಾಕ್ಷಿ ಪ್ರಭು, ಭಕ್ತಿವಿನೋದ್ ಪ್ರಭು, ಆತ್ಮಾರಾಮ್ ಪ್ರಭು ಮತ್ತು ವೃಂದಾವನ್ ಚಂದ್ರ ಪ್ರಭು ರವರು ಪರಮಪೂಜ್ಯ ಗೋಪಾಲ್ ಕೃಷ್ಣ ಗೋಸ್ವಾಮಿ ಮಹಾರಾಜ್ ಮತ್ತು ಯಶೋಮತಿನಂದನ್ ಪ್ರಭು ಅವರ ಅಧ್ಯಕ್ಷತೆಯಲ್ಲಿ ಉಪಸ್ಥಿತರಿದ್ದರು.

ಸುಂದರವಾದ ಅಮೃತಶಿಲೆಯ ದೇವಸ್ಥಾನವು ಶ್ರೀ ರಾಮ ನವಮಿಯ ಪವಿತ್ರವಾದ ದಿನದಂದು ಉದ್ಘಾಟನೆ ಯಾಗಿ, ಶ್ರೀ ಶ್ರೀ ಸೀತಾ ರಾಮ ಲಕ್ಷ್ಮಣ ಹನುಮಾನ್ ಅವರ ವಿಗ್ರಹ ಪ್ರತಿಷ್ಠಾಪನೆಯಾಯಿತು. ದೇವಕಿನಂದನ್ ಪ್ರಭು (ಇಸ್ಕಾನ್ ಜುಹು) ಅವರು ಈ ವಿಗ್ರಹಗಳಿಗೆ ಶ್ರೀ ಶ್ರೀ ರಾಮ ರಾಮ ರಾಮಾನುಜ ಹನುಮಾನ್ ಎಂಬ ಸುಂದರ ಹೆಸರನ್ನು ನೀಡಿದರು.

ಈ ದೇವಾಲಯವು ರಾಜಸ್ಥಾನಿ ಕಲೆಗಳ ಅದ್ಭುತ ಮಾದರಿಯಾಗಿದೆ. ಇಲ್ಲಿ ಮೂರು ಪ್ರವೇಶದ್ವಾರಗಳಿವೆ – ಒಂದು ಮುಖ್ಯ ದ್ವಾರ ಮತ್ತು ಎಡ ಮತ್ತು ಬಲದಲ್ಲಿ ಎರಡು ಪ್ರವೇಶದ್ವಾರಗಳು. ಛಾವಣಿ, ನೆಲ, ಒಳಭಾಗ ಮತ್ತು ಬಾಹ್ಯ ಭಾಗಗಳನ್ನು ಶುದ್ಧ ಅಮೃತಶಿಲೆಯಿಂದ ನಿರ್ಮಿಸಲಾಗಿದೆ. ಮುಖ್ಯ ಪ್ರವೇಶದ್ವಾರದಲ್ಲಿ ಎರಡು ಚೆನ್ನಾಗಿ ವಿನ್ಯಾಸಗೊಳಿಸಲಾದ ಕಾರಂಜಿಗಳು ಇವೆ.

ಸೀಮಿತ ದಾನಿಗಳು, ಸೀಮಿತ ಹಣ ಮತ್ತು ಸೀಮಿತ ಬೆಂಬಲದ ನಡುವೆಯೂ, ಈ ಸುಂದರವಾದ, ಭವ್ಯವಾದ, ಆಕರ್ಷಕವಾದ ದೇವಾಲಯವು ರಾಜ್ಕೋಟ್ನ ಸಾಂಸ್ಕೃತಿಕ ಮತ್ತು ಕೈಗಾರಿಕೆಯ ನಗರದಲ್ಲಿ ಸ್ಪಷ್ಟವಾಗಿ ನೆಲೆಗೊಂಡಿದೆ, ಇದಕ್ಕೆ ಕಾರಣ ಪರಿಶುದ್ಧ ಭಕ್ತ ಪರಮಪೂಜ್ಯ ಮಹಾವಿಷ್ಣು ಗೋಸ್ವಾಮಿ ಮಹಾರಾಜ್‌ರವರ ಶ್ರೀಮದ್ ಭಾಗವತಮ್ ತತ್ವಗಳ ಮೇಲಿರುವ ಸ್ಥಿರ ನಂಬಿಕೆ, ಶ್ರೀಲ ಪ್ರಭುಪಾದರ ಆಶೀರ್ವಾದ ಮತ್ತು ಶ್ರೀ ಶ್ರೀ ರಾಧಾ ನೀಲ್‌ಮಾಧವ್‌ನ ಅಪಾರವಾದ ಕರುಣೆ.

***'ಸೌರಾಷ್ಟ್ರದ ವೈಭವ' ಉದ್ಘಾಟನಾ ಸಮಾರಂಭ:*** ಉದ್ಘಾಟನಾ ಸಮಾರಂಭವು ಮೂರು ದಿನಗಳ ಕಾಲ (12 ನೇ ಏಪ್ರಿಲ್‌ಯಿಂದ – 14 ಎಪ್ರಿಲ್ ವರೆಗೆ) ವಿವಿಧ ಯಜ್ಞಗಳು, ಹೋಮಗಳು, ಕಲಶ ಸ್ಥಾಪನೆ, ಮಹಾ ಅಭಿಷೇಕ ಮತ್ತು ಪ್ರಾಣ ಪ್ರತಿಷ್ಠಾಪಣೆಗಳೊಂದಿಗೆ ನಡೆಯಿತು. ಪ್ರಪಂಚದ ವಿವಿಧ ಭಾಗಗಳಿಂದ ಭಕ್ತರು 1008 ಬಗೆಯ ಭೋಗಗಳನ್ನು ಅರ್ಪಿಸಿದರು. ಹಿರಿಯ ವೈಷ್ಣವರಾದ ಪರಮಪೂಜ್ಯ ಲೋಕನಾಥ ಮಹಾರಾಜ್, ಪರಮಪೂಜ್ಯ ಭಕ್ತಿ ನಿತ್ಯಾನಂದ ಮಹಾರಾಜ್, ಪರಮಪೂಜ್ಯ ಭಕ್ತಿ ಆಶ್ರಯ ವೈಷ್ಣವ ಮಹಾರಾಜ್, ಪರಮಪೂಜ್ಯ ಅಮಿಯಾ ವಿಲಾಸ್ ಮಹಾರಾಜ್, ಪರಮಪೂಜ್ಯ ರೂಪಾ ರಘುನಾಥ್ ಮಹಾರಾಜ್, ಪರಮಪೂಜ್ಯ ಭಕ್ತಿ ಮಾಧುರ್ಯ ಗೋವಿಂದ ಮಹಾರಾಜ್, ಜನನಿವಾಸ್ ಪ್ರಭು, ಪಂಕಜಾಂಗ್ರಿ ಪ್ರಭು,

ಶ್ರೀ ಶ್ರೀ ರಾಧಾ–ನೀಲ್‌ಮಾಧವ್ ಧಾಮವು 3 ದಿನಗಳ ಕಾಲ ಮಧುರ ಕೀರ್ತನೆಗಳೊಂದಿಗೆ ಕೂಡಿತ್ತು ಮತ್ತು ಶ್ರೀ ಶ್ರೀ ರಾಮಚಂದ್ರ ಭಗವಾನ್ ಅವರ ಅತೀಂದ್ರಿಯ ಇಚ್ಛೆಯಿಂದ, ಅವರು ಅವತರಿಸಿದ ಪವಿತ್ರ ದಿನದಂದು, ದೇವತಾ ಮೂರ್ತಿಗಳಾದ ಶ್ರೀ ಶ್ರೀ ಸೀತಾ ರಾಮ ಲಕ್ಷ್ಮಣ್ ಹನುಮಾನ್ ರವರ ಪ್ರತಿಷ್ಠಾಪನೆ ಸಾವಿರಾರು ಭಕ್ತ–ರಿಂದ, ಅವರ ಪವಿತ್ರ ನಾಮ ಸ್ಮರಣೆಯಿಂದ ಹಾಗೂ ಪರಮಪೂಜ್ಯ ಲೋಕನಾಥ ಮಹಾರಾಜ್‌ರವರ ನೇತೃತ್ವದಲ್ಲಿ ಮಧುರ ಕೀರ್ತನೆಗಳೊಂದಿಗೆ ನೆರವೇರಿತು. 14ನೇ ಎಪ್ರಿಲ್ ರಂದು ಗುಜರಾತ್ ಮುಖ್ಯಮಂತ್ರಿ ಶ್ರೀ ವಿಜಯ್ ರುಪಾನಿ ಮತ್ತು ಕರ್ನಾಟಕದ ರಾಜ್ಯಪಾಲರಾದ ಶ್ರೀ ವಾಜು ಭಾಯಿ ವಾಲ್ಲಾರವರು ಸಮಾರಂಭವನ್ನು ಅಲಂಕರಿಸಿದರು ಮತ್ತು ಶ್ರೀಕೃಷ್ಣ ಮತ್ತು ಶ್ರೀಲ ಪ್ರಭುಪಾದರನ್ನು ಶ್ಲಾಘಿಸುವ ಆಕರ್ಷಕವಾದ ಭಾಷಣಗಳನ್ನು ಮಾಡಿದರು.

***ಪ್ರಸಕ್ತ ಮತ್ತು ಭವಿಷ್ಯದ ಬೋಧನೆ ಕಾರ್ಯಕ್ರಮಗಳು:*** ಪರಮಪೂಜ್ಯ ಮಹಾವಿಷ್ಣು ಗೋಸ್ವಾಮಿ ಮಹಾರಾಜ್‌ರವರ ಹಾದಿಯನ್ನೇ ಅನುಸರಿಸಿ ವೈಷ್ಣವ ಸೇವಾ

ಪ್ರಭು ಮತ್ತು ಅವರ ಭಕ್ತರ ಗಣ ಕಠಿಣ ಶ್ರಮದಿಂದ ಮತ್ತು ಸತತ ಪ್ರಯತ್ನಗಳ ಮೂಲಕ, ವರ್ಷಗಳಿಂದಲೂ ಸಂಸ್ಥೆಯಲ್ಲಿ ಉತ್ತಮ ಬೆಳವಣಿಗೆಯಾಗುತ್ತಿದ್ದು ಅನೇಕ ಹೊಸ ಭಕ್ತರು ನಿಯಮಿತವಾಗಿ ಸಂಸ್ಥೆಯ ಕುಟುಂಬಕ್ಕೆ ಸೇರ್ಪಡೆಯಾಗುತ್ತಿದ್ದಾರೆ. ಭಕ್ತರು ಶ್ರೀ ಕೃಷ್ಣನ ಅಪಾರ ಕರುಣೆಯಿಂದ ಹತ್ತಿರದ ಕಾಲೇಜುಗಳಲ್ಲಿನ ಯುವ ವಿದ್ಯಾರ್ಥಿಗಳಿಗೆ ಸೊಗಸಾದ ವಾರದ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ. ಅವರು ದೇವಾಲಯದ ಪರಿಸರ, ಪ್ರಸಾದದಿಂದ ಆಕರ್ಷಿತರಾಗುತ್ತಿದ್ದಾರೆ ಹಾಗೂ ವಿವಿಧ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ. ರಾಜ್ಕೋಟ್ನ ಸಮೀಪದ ಹಲವಾರು ಕಾಲೇಜುಗಳೊಂದಿಗೆ, ಯುವಕರನ್ನು ಶ್ರೀಕೃಷ್ಣಪ್ರಜ್ಞೆಗೆ ಆಕರ್ಷಿಸಲು ಅನೇಕ ವ್ಯವಸ್ಥಿತ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಸಂಸ್ಥೆಯಲ್ಲಿ ಮಾತಾಜಿಯರಿಗೆ ವಾರಕ್ಕೊಮ್ಮೆ ರಾಧಾರಾಣಿ ಸಭೆ ಇರುತ್ತದೆ. ನಿಯಮಿತವಾಗಿ ಭೇಟಿ ನೀಡುವ ಭಕ್ತರು ಭಗವದ್ಗೀತೆ ಮತ್ತು ಭಾಗವತಂ ತರಗತಿಗಳನ್ನು ನೀಡಿ, ಭಕ್ತರು ಶ್ರೀಲ ಪ್ರಭುಪಾದರ ಪುಸ್ತಕಗಳನ್ನು ಗಂಭೀರವಾಗಿ ಅಧ್ಯಯನ ಮಾಡಲು ಪ್ರೋತ್ಸಾಹಿಸುತ್ತಾರೆ.

ಮುಂಬರುವ ದಿನಗಳಲ್ಲಿ, ಶ್ರೀ ಶ್ರೀ ರಾಧಾ–ನೀಲ್‌ಮಾಧವ್‌ರ ಆಶೀರ್ವಾದದಿಂದ ಕೆಳಗಿನ ಯೋಜನೆಗಳನ್ನು ಪ್ರಾರಂಭಿಸಲಾಗುವುದು.

***1. ಅನ್ನಾಮೃತ ಸೇವಾ*** – ರಾಜ್ಕೋಟ್ನಲ್ಲಿ ಸಾವಿರಾರು ಸರ್ಕಾರಿ ಶಾಲೆಯ ಮಕ್ಕಳಿಗೆ ಪ್ರತಿದಿನ ಊಟ ನೀಡಲಾಗುವುದು.

***2. ಗೋಶಾಲಾ ವಿಸ್ತರಣೆ*** – ಪ್ರಸ್ತುತ ಗೋಶಾಲಾವನ್ನು ಹೆಚ್ಚು ಹಸುಗಳು ಮತ್ತು ಕರುಗಳನ್ನು ಬೆಳೆಸಲು ವಿಸ್ತರಿಸಲಾಗುವುದು ಮತ್ತು ಅವರ ಉತ್ಪನ್ನಗಳನ್ನು ವೈದಿಕ ಜೀವನ ಶೈಲಿಯನ್ನು ಪ್ರಸಾರ ಮಾಡಲು ಬಳಸಿಕೊಳ್ಳಲಾಗುತ್ತದೆ.

***3. ಗೋವಿಂದ ರೆಸ್ಟೋರೆಂಟ್*** – ಶ್ರೀಲ ಪ್ರಭುಪಾದರು ಬಯಸಿದಂತೆ ಭೇಟಿ ನೀಡುವವರಿಗೆ ಪ್ರಸಾದವನ್ನು ವಿತರಿಸಲು ಮುಂಬರುವ ದಿನಗಳಲ್ಲಿ ಉತ್ತಮವಾದ ಅತ್ಯಾಧುನಿಕ ಗೋವಿಂದ ರೆಸ್ಟಾರೆಂಟ್ ಅನ್ನು ಪ್ರಾರಂಭಿಸಲಾಗುವುದು.

***4. ಆಯುರ್ವೇದ ಆಸ್ಪತ್ರೆ*** – ನೈಸರ್ಗಿಕ ಔಷಧಿಗಳೊಂದಿಗೆ ರೋಗಿಗಳಿಗೆ ಸೇವೆ ಸಲ್ಲಿಸಲು ಉತ್ತಮವಾದ ಆಯುರ್ವೇದ ಚಿಕಿತ್ಸಾಲಯ ಬಿಡುಗಡೆ ಮಾಡಲಾಗುವುದು.

***5. ವೇದ ಗ್ರಂಥಾಲಯ*** – ಎಲ್ಲಾ ಪುರಾತನ ಪುಸ್ತಕಗಳನ್ನು ಒಳಗೊಂಡಿರುವ ವೈದಿಕ ಗ್ರಂಥಾಲಯ, ಶ್ರೀಲ ಪ್ರಭುಪಾದರ ಪುಸ್ತಕಗಳು ಮತ್ತು ನಮ್ಮ ಎಲ್ಲಾ ಆಚಾರ್ಯರ ಕೃತಿಗಳನ್ನು ದೇವಾಲಯದ ಆವರಣದಲ್ಲಿ ಯೋಜಿಸಲಾಗುವುದು.

ಭವಿಷ್ಯದಲ್ಲಿ, ಸೌರಾಷ್ಟ್ರದ ವೈಭವ ಇಸ್ಕಾನ್ ದೇವಸ್ಥಾನವು ಗುಜರಾತ್ನ ಇಡೀ ರಾಜ್ಯದ ಪ್ರಮುಖ ದಾರ್ಶನೀಯಕ ಸ್ಥಳವಾಗಲಿದೆ. ಇದು ಗುಜರಾತ್ನಲ್ಲಿ ಈಗ ಎರಡನೇ ಅತೀ ದೊಡ್ಡ ದೇವಾಲಯವಾಗಿದೆ. ಈ ದೇವಸ್ಥಾನವು ರಾಜ್ಕೋಟ್ನ ಎಲ್ಲಾ ಧಾರ್ಮಿಕ ಜನರಿಗೆ ಒಂದು ವರವಾಗಿದ್ದು, ಅವರ ಐಹಿಕ ನೋವುಗಳನ್ನು ನಿವಾರಿಸುವುದಲ್ಲದೆ, ಅವರ ಆಧ್ಯಾತ್ಮಿಕ ಪ್ರಗತಿಗೆ ಸಹಾಯ ಮಾಡುತ್ತದೆ. ವಾಸ್ತವವಾಗಿ, ಇದು ಕೇವಲ ರಾಜ್ಕೋಟ್ನ ನಿವಾಸಿಗಳಿಗೆ ಮಾತ್ರವಲ್ಲದೇ, ಇದು ಒಂದು ದೊಡ್ಡ ಸಾಂಸ್ಕೃತಿಕ ಕೇಂದ್ರವಾಗಿದ್ದು, ಎಲ್ಲ ಮಾನವಕುಲದ ಲೌಕಿಕ ಮತ್ತು ಆಧ್ಯಾತ್ಮಿಕ ಪ್ರಗತಿಗೆ ಸಹಾಯವಾಗುತ್ತದೆ.

## ಮರಳಿ ಭಗವಂತನೆಡೆಗೆ

**ಚಂದಾದಾರರ ಸೇವೆಗಾಗಿ ಸೂಚನೆಗಳು**

ನಿಮ್ಮ ಸಂತೃಪ್ತಿಯೇ ನಮ್ಮ ಮೊದಲ ಆದ್ಯತೆ.

**ಚಂದಾದಾರಿಕೆಯ ನವೀಕರಣ:**

ನಿಮ್ಮ ಚಂದಾದಾರಿಕೆ ನವೀಕರಿಸಬೇಕಾದಾಗ ನಾವೇ ಸ್ವತಃ ನಿಮಗೆ ಪತ್ರದ ಮೂಲಕ ಸೂಚನೆ ನೀಡುತ್ತೇವೆ. ನೀವು ಬಯಸಿದಲ್ಲಿ ನಮಗೆ ಕೇವಲ ಒಂದು ಕರೆ ಮಾಡುವುದರೊಂದಿಗೆ ನಿಮ್ಮ ಚಂದಾದಾರತ್ವ ನವೀಕರಿಸಬಹುದು.

**ಚಂದಾ ಉಡುಗೊರೆ :**

ಉದಾತ್ತ ಚಿಂತನಶೀಲ ಉಡುಗೊರೆಯನ್ನು ನೀಡಲು ಒಂದು ಸರಳ ದಾರಿ. ನೀವು ನಿಮ್ಮ ಮಿತ್ರರಿಗೆ ಮತ್ತು ನೆಂಟರಿಗೆ **'ಮರಳಿ ಭಗವಂತನೆಡೆಗೆ'** ಯನ್ನು ಉಡುಗೊರೆಯಾಗಿ ವರ್ಷದ ಯಾವುದೇ ಸಮಯದಲ್ಲಿ ನೀಡಬಹುದು. ಉಡುಗೊರೆ ಕೊಡುವವರ ಹೆಸರಿನ (ಆಕರ್ಷಕ ಮುದ್ರಣ ಹೊಂದಿರುವ) ಒಂದು ಚೀಟಿಯನ್ನೂ ಕೂಡ ಅಳವಡಿಸುತ್ತೇವೆ.

**ವಿಳಾಸ ಬದಲಾದಲ್ಲಿ :**

ನೀವು ನಿಮ್ಮ ವಾಸ್ತವ್ಯದಿಂದ ದೂರ ಪ್ರಯಾಣ ಮಾಡುತ್ತಿದ್ದಲ್ಲಿ, ಅಥವಾ ರಜೆಗಾಗಿ ಬೇರೆಡೆ ಹೋಗಿದ್ದಲ್ಲಿ ನಿಮ್ಮ ವಿಳಾಸವನ್ನು ಬದಲಿಸಲು ಅಥವಾ ನಿಮ್ಮ ಸೇವೆಯನ್ನು ತಾತ್ಕಾಲಿಕವಾಗಿ ಹಿಡಿದಿಡಿಯಲು ನಾವು ಸಂತೋಷಪಡುತ್ತೇವೆ.

ಇವುಗಳಲ್ಲಿ ಮತ್ತು 'ಮರಳಿ ಭಗವಂತನೆಡೆಗೆ' ಯ ನಿಮ್ಮ ಚಂದಾದಾರತ್ವದ ಕುರಿತಾದ ಇತರ ಯಾವುದೇ ಪ್ರಶ್ನೆಗಳಿದ್ದಲ್ಲಿ ನಮ್ಮನ್ನು ಸಂಪರ್ಕಿಸಿ :

**ಮರಳಿ ಭಗವಂತನೆಡೆಗೆ**
c/o ಮಥುರ ಶ್ಯಾಮ ದಾಸ, 31, 60 ಅಡಿ ರಸ್ತೆ, ಶಿವನಗರ, ರಾಜಾಜಿನಗರ, ಬೆಂಗಳೂರು – 10.
ದೂ : 080–23355014, 98440 33066
e-mail : mathurashyam@gmail.com

# ಅನಂತ ಪರಮಾನಂದ ಮತ್ತು ನಾನು

**– ಅಭಿಜಿತ್ ಟಾಲಿಯವರಿಂದ**

## ರಾತ್ರೀಯ ಆಕಾಶ ವೀಕ್ಷಣೆಯಲ್ಲಿ ಲೇಖಕರು ಬದುಕಿನ ಮತ್ತು ಜೀವಂತಿಕೆಯ ಅಮೂಲ್ಯ ಸತ್ಯವನ್ನು ಕಂಡುಕೊಳ್ಳುತ್ತಾರೆ.




ನನ್ನ ಬಾಲ್ಯದ ಪ್ರಾರಂಭದ ದಿನಗಳಿಂದಲೂ ನಾನು ಈ ವಿಶ್ವದ ಬಗೆಗೆ ಚಿಂತನೆ ನಡೆಸಿದ್ದೇನೆ. ರಾತ್ರಿಯ ಸಮಯದಲ್ಲಿ ನಕ್ಷತ್ರಗಳು ಗಾಢವಾಗಿ ಮಿನುಗುತ್ತಿರುವಾಗ ಚಂದ್ರನು ಭವ್ಯವಾದ ರೀತಿಯಲ್ಲಿ ಆ ಸ್ವರ್ಗೀಯ ಸಭೆಯಲ್ಲಿ ಅಧ್ಯಕ್ಷನಾಗಿ ವಿರಾಜಿಸುತ್ತಿರುವಾಗ, ನಾನು ಈ ವಿಶ್ವದಾಚೆಗೆ ಏನಿರಬಹುದೆಂದು ಚಿಂತಿಸುತ್ತಿದ್ದೆ. ಒಂದು ವೇಳೆ ನಾನು ನನ್ನಲ್ಲಿ ಆನಂದವನ್ನು ಕೆರಳಿಸುವ ಆ ಆಕಾಶದೆಡೆಗೆ ನುಗ್ಗುವ ಸಾಹಸವನ್ನು ಮೆರೆದರೆ, ಹಾಗೂ ಒಂದು ಉತ್ತಮ ಸಮಯದಲ್ಲಿ ಅದರ ಗಡಿಯನ್ನು ತಲುಪಿದರೆ ಅದರಾಚೆಗೆ ನಾನು ಏನನ್ನು ಕಾಣಬಹುದು? ಎಂದಾದರು ಒಮ್ಮೆ ನಾನು ಅದರ ಗಡಿಯನ್ನು ತಲುಪಿದರೆ, ಆ ಗಡಿಯ ಭಾಗದಲ್ಲಿನ ಎರಡೂ ಬದಿಗಳ (ಉಭಯ ಪಾರ್ಶ್ವಗಳ) ಭಿನ್ನತೆಯನ್ನು ನಾನು ಗುರುತಿಸುವ ಸಾಮರ್ಥ್ಯವನ್ನು ಹೊಂದಿರುವೆನೆ? ಅದರೊಳಗಿನ ಮತ್ತು ಅದರಾಚೆಗಿನದನ್ನು ವಿಭಜಿಸುವ ಸಾಮರ್ಥ್ಯವಿರುವುದೆ? ಖಂಡಿತವಾಗಿಯೂ ಒಳಭಾಗವು ಈ ವಿಶ್ವಕ್ಕೆ ಸೇರಿರುತ್ತದೆ, ಆದರೆ ನಾನು ಅದರ ಹೊರ ಭಾಗವನ್ನು ಗ್ರಹಿಸ ಬಲ್ಲೆನಾದರೆ ಆಗ ನಿಜವಾಗಿಯೂ ಅದರ ಒಳಭಾಗವು (ಗೋಚರಿಸುವುದಾಗಿರುವುದಿಲ್ಲ) ಅಸ್ತಿತ್ವ ಹೊಂದಿರುವುದಿಲ್ಲ. ಅದರ ಮೇರೆಯಿಂದಾಚೆಗೂ ಅಸ್ತಿತ್ವವಿರಬಹುದು. ಆದುದರಿಂದ ಆ ಸಾಹಸದ ಉತ್ಸಾಹದಿಂದ ಮತ್ತು ನವಶೋಧನೆಯ ನಿರೀಕ್ಷೆಯಿಂದಲೂ, ನಾನು ನನ್ನ ಪ್ರಯಾಣವನ್ನು ಮುಂದುವರೆಸುತ್ತೇನೆ. ಆದರೆ ಆಗ, ನಾನು ಖಂಡಿತವಾಗಿಯೂ ಬೇರೊಂದು ಗಡಿಯ ಆಚೆಗೆ ಬಂದಿರುತ್ತೇನೆ; ಅದರ ನಂತರ ಮತ್ತೊಂದು, ನಂತರ ಮತ್ತೊಂದು. ಪ್ರತಿಯೊಂದು ಗಡಿಯ ಮಿತಿಯಾಚೆಗೆ ಖಂಡಿತವಾಗಿಯೂ ಏನೋ ಒಂದು ಇರುತ್ತದೆ; ಏಕೆಂದರೆ ಗಡಿಯು ಅದರಾಚೆಗಿರುವುದನ್ನು ಪ್ರಕಟ ಪಡಿಸುತ್ತದೆ. ನಾನು ಅಂತಹ ಗಡಿಗಳನ್ನು ಗುರುತಿಸುವುದರಲ್ಲಿ ತೊಡಗಿರುತ್ತೇನೆ ಅಥವಾ ಕೆಲವು ನಿಶ್ಚಿತ ಗಡಿಗಳ ನಂತರ, ನಾನು ಮುಂದಿನ ಗಡಿಯ ಮಿತಿಯನ್ನು ಕಾಣದಾಗಿರುತ್ತೇನೆ. ಅಂತಹ ಯಾವುದೆ ಸಂದರ್ಭದಲ್ಲಿ, ನಾನು ನಿರ್ಣಯಿಸುವುದೇನೆಂದರೆ ನಾನು ಎಂದಿಗೂ ಗಡಿಯಾಚೆಗಿನ ಅಸ್ತಿತ್ವವನ್ನು ಕಾಣಲಾರೆ. ಅಸ್ತಿತ್ವಕ್ಕೆ ಪರಿಮಿತಿಯಿಲ್ಲ, ಆದರೆ ವ್ಯಾಪಕತೆಯನ್ನು ಹೊಂದಿರುವುದನ್ನು ನಿರಾಕರಿಸಲಾಗದ್ದು.

**ವೇದಗಳ ದೃಷ್ಟಿಕೋನ:** ವೇದ ಶಾಸ್ತ್ರಗಳ ಅಧ್ಯಯನದಿಂದ ನಾವು ಈ ಅಸ್ತಿತ್ವವು ನಿಶ್ಚಯವಾಗಿಯೂ ಅಂತ್ಯವಿಲ್ಲದ್ದೆಂದು ತಿಳಿಯುತ್ತೇವೆ. ನಾನು ವಾಸಿಸುತ್ತಿರುವ ಈ ವಿಶ್ವಕ್ಕೆ ಗಡಿಯೊಂದಿದೆ. ಅದು ಗೋಲಾಕಾರವಾಗಿದೆ ಮತ್ತು ವಿವಿಧ ವಸ್ತುಗಳಿಂದಾದ ಅನೇಕ ಪದರುಗಳನ್ನು ಅಂದರೆ ಭೂಮಿ(ಮಣ್ಣು), ನೀರು, ಬೆಂಕಿ, ವಾಯು, ಇತ್ಯಾದಿಗಳನ್ನು ಹೊಂದಿದೆ. ರಾತ್ರಿ ನಮಗೆ ಕಾಣುವ ಆಕಾಶವೂ ಈ ವಿಶ್ವದಲ್ಲಿ ಸೇರಿ ಹೋಗಿರುವುದಾಗಿದೆ ಮತ್ತು ಅದನ್ನು ಭೌತಿಕ ಆಕಾಶವೆಂದು ಕರೆಯಲಾಗುತ್ತದೆ. ಆದರೆ ಈ ಪರಿಮಿತ ವಿಶ್ವದಾಚೆಗೆ ಆಧ್ಯಾತ್ಮಿಕ ನಭವೊಂದಿದೆ, ಅದಕ್ಕೆ ಮಿತಿಯಿಲ್ಲ (ಅದು ಅಪರಿಮಿತ). ನಾವು ಜೀವಿಸುತ್ತಿರುವ ಈ ಭೌತಿಕ ವಿಶ್ವವು ಅಸಂಖ್ಯಾತ ಭೌತಿಕ ವಿಶ್ವಗಳಲ್ಲೊಂದಾಗಿದೆ. ಅದು ಆಧ್ಯಾತ್ಮಿಕ ನಭದಲ್ಲಿ ಒಂದು ಮೂಲೆಯಲ್ಲಿಯ ಕತ್ತಲಾವರಣವಾಗಿದೆ. ಇದರ ಹೊರತಾಗಿ ಆಧ್ಯಾತ್ಮಿಕ ನಭದಲ್ಲಿ ಅಸಂಖ್ಯಾತ ಸಂಖ್ಯೆಯ ಆಧ್ಯಾತ್ಮಿಕ ಗ್ರಹಗಳಿವೆ, ಅವುಗಳ ಮೇಲೆ

ಸ್ವತಃ ಪರಮ ಪುರುಷೋತ್ತಮನು ತನ್ನ ಅಪರಿಮಿತವಾದ ಸಂಪೂರ್ಣ ಸತ್ವಯುತ ಆಕಾಶಗಳಲ್ಲಿ ನೆಲೆಸಿದ್ದಾನೆ; ಅಲ್ಲಿ ಅವನ ಅಗಣಿತ ಪ್ರೀತಿ ಪಾತ್ರ ಭಕ್ತರು ಅವನೊಂದಿಗಿದ್ದಾರೆ, ಯಾವಾಗಲೂ ವೃದ್ಧಿಸುತ್ತಿರುವ ಮತ್ತು ಎಂದೆಂದಿಗೂ ನೂತನವಾಗಿರುವ ಭಕ್ತಗಣ ಅಲ್ಲಿ ನೆಲೆಸಿದೆ.

ನಾನು ಚಿಂತಿಸುತ್ತಿದ್ದ ಮತ್ತೊಂದು ಪ್ರಶ್ನೆಯೆಂದರೆ ಈ ಜೀವರಾಶಿಯ ಉಗಮವನ್ನು ಕುರಿತದ್ದು. ಪ್ರತಿಯೊಂದಕ್ಕೂ ಮೂಲವೊಂದಿದೆ, ಆದರೆ ಇವೆಲ್ಲವುಗಳ ಮೂಲಯಾವುದು? ಮತ್ತು ಯಾವ ಸಮಯದಲ್ಲಿ ಈ ಎಲ್ಲವೂ ಅಸ್ತಿತ್ವಕ್ಕೆ ಬಂದುವು? ಆದುದರಿಂದ ನಾನು ನನ್ನ ಚಿಂತನಾ ಪ್ರಯೋಗವನ್ನು ಪ್ರಾರಂಭಿಸಿದೆ. ನನ್ನ ಧ್ಯಾನವು ಈ ಕೆಳಕಂಡತೆ ನನ್ನ ಊಹೆಗೆ ನನ್ನನ್ನು ತಂದುನಿಲ್ಲಿಸಿತು. ಒಂದು ನಿಗದಿತ ಅವಧಿಯಲ್ಲಿ ಸಮಯಾವಕಾಶವಿಲ್ಲದ ಅಸ್ತಿತ್ವ ಉತ್ಪನ್ನವಾಯಿತು, ಅನಂತರದ ಒಂದು ನಿಶ್ಚಿತ ಸಮಯದಲ್ಲಿ ಆ ಅಸ್ತಿತ್ವವುಕಾಣದಾಯಿತು. ಅಂದರೆ ಟಿ ಸಮಯದಲ್ಲಿ ಅಸ್ತಿತ್ವ ರಹಿತ ಸಮಯದಲ್ಲಿಯಾವುದೂ ಇರಲಿಲ್ಲ. ಅನಂತರ ಶೂನ್ಯಭಾಗದಲ್ಲಿ, ಸಾಹಿತ್ಯಿಕವಾಗಿ ಟಿ+ಡಿಟಿ, ಅಲ್ಲಿ ಅಸ್ತಿತ್ವವುಂಟಾಯಿತು. ಆದುದರಿಂದ, ಅಸ್ತಿತ್ವವು ಅನಸ್ತಿತ್ವದಿಂದ ಬಂದಿತು. ಇದನ್ನು ಅನುಮಾನಕ್ಕೆಡೆಯಿಲ್ಲದಂತೆ ಭಾವಿಸಲು ನನಗೆ ಸಾಧ್ಯವಿಲ್ಲ. ಹಾಗಾದರೆ ಅದಕ್ಕೆ ಪರ್ಯಾಯವಾದ ವಿವರಣೆ ಯಾವುದು? ಇರುವ ಒಂದೆ ಒಂದು ಪರ್ಯಾಯವೆಂದರೆ ಶಾಶ್ವತವಾದ ಅಸ್ತಿತ್ವವೊಂದಿತ್ತು, ಅದು ಎಲ್ಲ ಕಾಲಕ್ಕೂ ಶೀಘ್ರವಾದ ಟಿ ಆಗಿತ್ತು. ನಾವು ಭಾವಿಸಿದಂತೆ ನಿಗದಿತವಾದ ಅಸ್ತಿತ್ವವೊಂದಿತ್ತು ಮತ್ತು ಆ ಅಸ್ತಿತ್ವವು ಅನಸ್ತಿತ್ವದಿಂದ ಉಗಮಗೊಂಡುದಲ್ಲ. ಅಸ್ತಿತ್ವವು ಶಾಶ್ವತವಾದುದು. ನನ್ನ ಮೊದಲಿನ ತೀರ್ಮಾನದೊಂದಿಗೆ ಜೊತೆಗೂಡಿ ಹೇಳುವುದಾದರೆ, ಅಸ್ತಿತ್ವವು ಅನಂತವಾದದ್ದು. ಇದರ ಪರಿಭಾಷೆಯೆಂದರೆ ಅಸ್ತಿತ್ವವು ಕೇವಲ ಅಸಂಖ್ಯ ಮಾತ್ರವಲ್ಲ, ಆದರೆ ಶಾಶ್ವತವಾದದ್ದು ಹೌದು. ಸ್ವರ್ಗೀಯವಾಗಿ ಈ ಉತ್ಪತ್ತಿಯು (ಅಸ್ತಿತ್ವವು) ಅಪರಿಮಿತವಾದುದು; ಮತ್ತೆ ಸರಳವಾದುದಲ್ಲ, ಆದರೆ ತಿರಸ್ಕರಿಸುವಂತಹದೂ ಅಲ್ಲ.

ಮಿಗಿಲಾಗಿ ವೇದ ಗ್ರಂಥಗಳು ಇದನ್ನು ಸ್ಪಷ್ಟವಾಗಿ ದೃಢಪಡಿಸುತ್ತವೆ. ಪರಮ ಪುರುಷೋತ್ತಮ ಶ್ರೀಕೃಷ್ಣ ಮತ್ತು ಆತನ ಶಕ್ತಿಯು ಶಾಶ್ವತವಾಗಿ ಮತ್ತು ಸಮಕಾಲೀನವಾಗಿ ಅಸ್ತಿತ್ವದಲ್ಲಿರುತ್ತದೆ. ಹೇಗೆ ಸೂರ್ಯ ಮತ್ತು ಸೂರ್ಯ ರಶ್ಮಿ ಏಕಕಾಲದಲ್ಲಿ ಅಸ್ತಿತ್ವದಲ್ಲಿರುತ್ತದೆಯೊ, ಸೂರ್ಯ ಅದರ ಮೂಲ ಸ್ರೋತವಾಗಿರುವಂತೆ ಪರಮ ಪುರುಷೋತ್ತಮನು ಆ ಶಕ್ತಿಯ ಸ್ರೋತವಾಗಿದ್ದಾನೆ (ಮೂಲ). ಭಗವಂತನ ಶಕ್ತಿಗಳಲ್ಲಿ ಒಂದಾದ ಭೌತಿಕ ಶಕ್ತಿಯಿಂದ ಈ ಭೌತಿಕ ವಿಶ್ವಗಳ ನಿರ್ಮಾಣವಾಗಿದೆ. ಆ ಶಕ್ತಿಯು ಆಧ್ಯಾತ್ಮಿಕವಾದುದೂ ಆಗಿದೆ. ಆದರೆ ಅದರ ಭಿನ್ನ ಭಿನ್ನ ಪ್ರಕಟನೆಗಳು ತಾತ್ಕಲಿಕವಾದವುಗಳು. ಆ ಕಾರಣದಿಂದಾಗಿ ವಿಶ್ವಗರ್ಭದಲ್ಲಿರುವ ಎಲ್ಲವೂ ಹಾಗೂ ವಿಶ್ವವೂ ಸಹ ತಾತ್ಕಾಲಿಕವಾದುದು; ಅದು ಹಾಗಿರಲು ಭಗವಂತನ ಭೌತಿಕ ಶಕ್ತಿ ಅದಾಗಿರುವುದೆ ಆಗಿದೆ. ಕಾಲ ಮಾಪನದಲ್ಲ ಖಗೋಲಶಾಸ್ತ್ರದನ್ವಯ ವಿಶ್ವದಲ್ಲಿನ ಕೆಲವು ಶಕ್ತಿಗಳು ಕೆಲವೇ ನಿಮಿಷಗಳ ಜೀವಾವಧಿಯನ್ನು ಹೊಂದಿರುತ್ತದೆ; ಆದರೆ ವಿಶ್ವವು ಸ್ವತಃ ಲಕ್ಷಾಂತರ ವರ್ಷಗಳವರೆಗೆ ಅಸ್ತಿತ್ವದಲ್ಲಿರುತ್ತದೆ. ಆದರೆ ಯಾವುದೇ ಸಂದರ್ಭದಲ್ಲಿಯೂ ಎಲ್ಲವೂ ಅಶಾಶ್ವತ; ಮತ್ತು ಗಣನೆಗೆ ತೆಗೆದುಕೊಳ್ಳುವುದಾದಲ್ಲಿ ಶಾಶ್ವತವಾದ, ಅನಂತವಾದ ಸ್ವಭಾವವನ್ನು ಹೊಂದಿರುವ ವಿಶ್ವದ ಜೊತೆಗೆ ಹೋಲಿಸಿದಾಗ ಅದರ ಸ್ಥಾನವು ತುಂಬಾ ಗೌಣವಾದುದು; ಅದನ್ನು ಕಾಲ ಮತ್ತು ಆಕಾರಗಳೊಂದಿಗೆ ಹೋಲಿಸಿ ಹೇಳಬಹುದು.

ನನ್ನ ಅಸ್ತಿತ್ವಃ ಈ ತೀರ್ಮಾನಕ್ಕೆ ಹೊಂದಿಕೊಂಡಂತೆ ತರ್ಕಪೂರ್ಣವಾಗಿ ನನ್ನ ಮುಂದಿನ ಪ್ರಶೆಯೆಂದರೆ ನನ್ನ ಸ್ವಂತ ಅಸ್ತಿತ್ವವು ಈ ವಿಸ್ತಾರವಾದ, ಅನಂತವಾದ ಮತ್ತು ಶಾಶ್ವತವಾದ ವಸ್ತುಗಳ ಯೋಜನೆಯೆ ಆಗಿದೆ. ಒಂದು ವೇಳೆ ನನ್ನ ಅಸ್ತಿತ್ವವು ಈ ದೇಹಕ್ಕೆ ಸಂಬಂಧಿಸಿದಂತೆ ಒಂದು ನೂರು ವರ್ಷಗಳಷ್ಟು ಎಂದಾದರೆ ಆಗ ನನಗೆ ಈ ಭೌತಿಕ ವಿಶ್ವದ ಯಾವುದೂ ಮಹತ್ವದ್ದೆನಿಸುವುದಿಲ್ಲ. ಶಾಶ್ವತವಾದುದರೊಂದಿಗೆ ಹೋಲಿಸಿದಾಗ ಈ ಒಂದು ನೂರು ವರ್ಷ ಏನು ಮಹಾ? ಮಾನವನ ಎಲ್ಲ ಪ್ರಯತ್ನಗಳೂ, ತತ್ತ್ವಶಾಸ್ತ್ರ, ನೈತಿಕತೆ, ಸಾಮಾಜಿಕ ಕಲ್ಯಾಣ ಕಾರ್ಯಕ್ರಮ, ಸಾಧನೆಗಳು, ಆಕಾಂಕ್ಷೆಗಳು, ಎಲ್ಲವೂ ಕೇವಲ ಗೌಣವಾಗುತ್ತವೆ. ಯಾವುದೇ ವಿಷಯವನ್ನು ಕುರಿತ ಚರ್ಚೆಗಳೂ ಗೌಣವೇ. ಸರಿ ಮತ್ತು ತಪ್ಪು, ನ್ಯಾಯ ಮತ್ತು ಅನ್ಯಾಯ, ಸ್ವಾತಂತ್ರ್ಯ ಮತ್ತು ಗುಲಾಮಗಿರಿ, ಈ ತತ್ತ್ವ ಶಾಸ್ತ್ರ ಅಥವಾ ಆ ಕ್ರೀಡೆ, ರಾಜನೀತಿ, ಪ್ರದರ್ಶನಗಳು, ಇಷ್ಟಾನಿಷ್ಟಗಳು, ಪುಣ್ಯ ಮತ್ತು ಪಾಪ ಯಾವುವೂ ಗಮನಾರ್ಹವಾಗುವುದಿಲ್ಲ. ಅದೃಶ್ಯವಾದ ಹಿಂಸಾತ್ಮಕವಲ್ಲದ, ವಿಶಾಲವಾದ ಮರು ಭೂಮಿಯ ಒಂದು ಕಣಕ್ಕೆ ಮೇಲಿನದೆಲ್ಲವನ್ನೂ ಹೋಲಿಸಿದಾಗ ಆ ಎಲ್ಲವೂ ಗೌಣವೆನಿಸುತ್ತವೆ. ಮತ್ತು ಆ ಕಾರಣದಿಂದಾಗಿ, ನಾನು ನನ್ನ ಅಸ್ತಿತ್ವದ ಕ್ಷಣಿಕ ದೀರ್ಘತೆಗಾಗಿ ಏನನ್ನೂ ಮಾಡಲು ನಿರಾಕರಿಸುತ್ತೇನೆ. ಆದರೆ ಉಳಿದ ಸಾಧ್ಯತೆಗಳ ಬಗೆಗೆ ಏನು? ನನ್ನ ಅಸ್ತಿತ್ವವು ಕೇವಲ



ಈ ಜೀವಿತಾವಧಿಯ 100 ವರ್ಷಗಳಿಗೆ ಸೀಮಿತಗೊಳ್ಳದಿದ್ದಲ್ಲಿ ಏನು? ಕನಿಷ್ಠ ಹಲವು ಜೀವಿತಾವಧಿಯವರೆಗೆ ವಿಸ್ತರಣೆಗೊಂಡಲ್ಲಿ ಏನು? ಮತ್ತು ನನ್ನ ಜೀವಿತಾವಧಿ ಅನಂತ ಸಮಯದವರೆಗೆ ವಿಸ್ತರಣೆಯಾದಲ್ಲಿ ಆಗು ಏನು? ಆಗ ನನ್ನ ಬದುಕನ್ನು ಹೇಗೆ ನಿರ್ವಹಿಸ ಬೇಕಾಗುತ್ತದೆನ್ನುವುದು ಪ್ರಮುಖವಾಗುತ್ತದೆ ಏಕೆಂದರೆ ನಾನು ಯಾವುದೇ ವಿಸ್ತಾರವಾದ ಬದುಕಿನ ಅವಧಿಯಲ್ಲಿ ಅಶಾಂತವಾಗಿರುವುದಕ್ಕೆ ಬಯಸುವುದಿಲ್ಲ. ನನ್ನ ಬದುಕು ಸುಖಕರವಾಗಿರಲು ಮತ್ತು ಸಂತೋಷದಿಂದಿರಲು ನಾನು ಹೇಗೆ ವರ್ತಿಸಬೇಕು? ಈ ಪ್ರಶ್ನೆಯು ಹೆಚ್ಚು ಧ್ಯಾನಾಸಕ್ತನಾಗುವುದಕ್ಕೆ ಅವಕಾಶ ಕಲ್ಪಿಸುತ್ತದೆ.

**ಶಾಶ್ವತ ಬದುಕಿನ ಸಾಮಾನ್ಯ ತತ್ತ್ವಗಳು :**

ವೇದ ಶಾಸ್ತ್ರಗಳು ಅರ್ಥೈಸುವಂತೆ ಮತ್ತು ವಾಸ್ತವಾಂಶದ ತಳಹದಿಯ ಮೇಲೆ ಮೂಲ ಹೇಳಿಕೆಯ ಆಧಾರದ ಮೇಲೆ ಜೀವನವು ಶಾಶ್ವತವಾದುದು. ಎಲ್ಲ ಜೀವರಾಶಿಗಳೂ ಶಾಶ್ವತ ಅಸ್ತಿತ್ವವನ್ನು ಹೊಂದಿವೆ ಮತ್ತು ಶಾಶ್ವತವಾಗಿ ಮುಂದುವರಿಯುತ್ತವೆ. ಅವುಗಳ ಮೂಲ ನೆಲೆ ಆಧ್ಯಾತ್ಮಿಕ ಗ್ರಹಗಳಲ್ಲಿ ಒಂದಾಗಿರುತ್ತದೆ. ಮತ್ತು ಅವುಗಳು ಪರಮ ಪುರುಷೋತ್ತಮನೊಂದಿಗೆ ಸಂಬಂಧ ಹೊಂದಿರುತ್ತವೆ. ಹಾಗಾಗಿ ಆತ್ಮಗಳು ಶಾಶ್ವತವಾದ ಆನಂದದ ಬದುಕನ್ನು ಹೊಂದಿರುತ್ತವೆ ಮತ್ತು ತಮ್ಮ ಆಧ್ಯಾತ್ಮಿಕ ಇಂದ್ರಿಯಗಳ ಅನುಭವಗಳನ್ನು ಹೊಂದಿ ಭಗವಂತನ ಸೇವೆಯಲ್ಲಿ ಆಧ್ಯಾತ್ಮಿಕ ಗ್ರಹಗಳಲ್ಲಿ ನೆಲೆಸುತ್ತವೆ. ಯಾವ ಜೀವಿಗಳು ಸ್ವತಂತ್ರ ಬದುಕಿನ ಆಶೆಯನ್ನು ಹೊಂದಿರುತ್ತವೆಯೊ ಅಂತಹವುಗಳಿಗೆ ಭಗವಂತನು ಕೃಪೆಮಾಡಿ ತನ್ನ ಭೌತಿಕ ಜಗತ್ತಿನಲ್ಲಿ ಅವಕಾಶವನ್ನು ಕಲ್ಪಿಸಿ ಕೊಡುತ್ತಾನೆ ಮತ್ತು ಭೌತಿಕ ಶರೀರವನ್ನು ಅನುಗ್ರಹಿಸಿ ಈ ಭೌತಿಕ ಜಗತ್ತಿನ ವ್ಯವಹಾರದಲ್ಲಿ ತೊಡಗಿರುವಂತೆ ಮಾಡುತ್ತಾನೆ. ಹಾಗಾಗಿ ಈ ಭೌತಿಕ ಜಗತ್ತಿನ ಜೀವರಾಶಿಗಳು ತಮ್ಮ ಆಧ್ಯಾತ್ಮಿಕ ಜಗತ್ತಿನ ಸಂಪರ್ಕವನ್ನು ಮರೆತು ಭಗವಂತನ ಸಂಬಂಧದ ಬಗೆಗೆ ಅಜ್ಞಾನವನ್ನು ಹೊಂದಿರುತ್ತವೆ. ಆತ್ಮಗಳು ಆಧ್ಯಾತ್ಮಿಕ ಜಗತ್ತಿನಲ್ಲಿ ಭವ್ಯವಾದ ಆನಂದದ ಅನುಭವವನ್ನು ಹೊಂದಿರುವ ಕಾರಣ ಅವುಗಳು ಅದೇ ಆನಂದದ ಅನುಭವವನ್ನು ಈ ಭೌತಿಕ ಜಗತ್ತಿನಲ್ಲಿಯೂ ಪಡೆಯಲು ಬಯಸುತ್ತವೆ. ಅವುಗಳು ಆ ಆನಂದಾನುಭವವನ್ನು ಈ ಭೌತಿಕ ಜಗತ್ತಿನಲ್ಲಿ ಪಡೆಯ ಬೇಕಾದರೆ ತಮ್ಮ ಮನಸ್ಸನ್ನು ಮತ್ತು ಇಂದ್ರಿಯಗಳನ್ನು ತೃಪ್ತಿ ಪಡಿಸುವ ಮೂಲಕ ಪಡೆಯ ಬಹುದೆಂಬ ಗ್ರಹಿಕೆಯನ್ನು ಹೊಂದಿರುತ್ತವೆ. ಹಾಗಾಗಿ ಅನಂತವಾದ ಆನಂದದ ತೃಪ್ತಿಗಾಗಿ ನಶ್ವರವಾದ ಮತ್ತು ಮಿತಿಯನ್ನು ಹೊಂದಿರುವ ಭೌತಿಕ ಇಂದ್ರಿಯಗಳ ತೃಪ್ತಿಯಿಂದ ಅವುಗಳು ಹತಾಶೆಗೆ ಒಳಗಾಗುತ್ತವೆ (ಶಾಂತವಾಗಿ ಸಹಿಸುವುದು ಅಥವಾ ಅದನ್ನು ಹೊರಹಾಕುವುದು) ಅಥವಾ ತಮ್ಮ ಸ್ವಾರ್ಥ ಲಾಲಸೆಗಾಗಿ ಬೇರೆಯವರನ್ನು ಶೋಷಣೆಗೆ ಗುರಿ ಮಾಡುತ್ತವೆ. ಯಾವುದೇ ಸನ್ನಿವೇಶದಲ್ಲಿ, ಕೇವಲ ಆಧ್ಯಾತ್ಮಿಕ ಇಂದ್ರಿಯಗಳ ಮೂಲಕ

ಅನುಭವವನ್ನುಗಳಿಸಿದ ಭಗವಂತನ ಪ್ರೀತಿಯ ಸೇವಾಭಾವವನ್ನು ಭೌತಿಕ (ನಶ್ವರವಾದ) ವಾದ ಮತ್ತು ಪರಿಮಿತವಾದ ಇಂದ್ರಿಯಗಳಿಂದ ಪಡೆಯಲು ಸಾಧ್ಯವಿಲ್ಲ. ಸಮಗ್ರವಾಗಿ ಹೇಳುವುದಾದರೆ, ಈ ಸ್ಥಿತಿಯು, ಭೌತಿಕ ಪ್ರಪಂಚದ ಎಲ್ಲ ಕೆಡುಕುಗಳಿಗೆ ಕಾರಣವಾಗಿದೆ. ಹಾಗಾಗಿ ಎಲ್ಲ ರೀತಿಯಲ್ಲಿ ನಾವು ಅನುಭವಿಸುವ ನೋವುಗಳು ನಮ್ಮ ಸ್ವಯಂ ಮನೋಭಿಲಾಶೆಯಿಂದ, ಸಂತೋಷವನ್ನು ತಪ್ಪಾದ ಜಾಗದಲ್ಲಿ ಹುಡುಕುವುದರಿಂದಲೇ ಆಗಿದೆ. ಎಲ್ಲಿಯವರೆಗೂ ನಾವು ಭಗವಂತನ ಸೇವೆಯಲ್ಲಿ ಇಂದ್ರಿಯಗಳನ್ನು ತೊಡಗಿಸಿ ಶಾಶ್ವತವಾದ ಆನಂದವನ್ನು ಪಡೆಯಲು ಬಯಸುವುದಿಲ್ಲವೊ ಅಲ್ಲಿಯವರೆಗೆ ನಮಗೆ ಅಪರಿಮಿತವಾದ ಮತ್ತು ಶಾಶ್ವತವಾದ ಆನಂದವನ್ನು ಪಡೆಯಲಾಗುವುದಿಲ್ಲ. ಯಾವುದೇ ಪ್ರಮಾಣದ ಭೌತಿಕ ಉಪಕರಣಗಳು ನಮಗೆ ಪರಮಾನಂದವನ್ನು ನೀಡಲಾರವು. ಒಂದುವೇಳೆ ಹಾಗೆ ಆಗುವುದಿದ್ದರೆ ಎಲ್ಲ ಶ್ರೀಮಂತ ವ್ಯಕ್ತಿಗಳೂ ಸಂತೋಷವಾಗಿ ಮತ್ತು ಎಲ್ಲ ಬಡವರು ದುಃಖಿತರಾಗಿ ಇರುತ್ತಿದ್ದರು. ಆದರೆ ನಮ್ಮ ಸುತ್ತ ಮುತ್ತ ಇರುವ ವಸ್ತುಗಳನ್ನು ಗಮನಿಸುತ್ತ ನಾವು ಸ್ಪಷ್ಟವಾಗಿ ಕಾಣಬಹುದಾದುದೆಂದರೆ ಭೌತಿಕ ವಸ್ತುಗಳ ಸಮೃದ್ಧಿಯಿಂದ ಸಂತೋಷದ ಆಳತೆಯನ್ನು ಮಾಡಲಾಗುವುದಿಲ್ಲ. ದೀರ್ಘಕಾಲದ ಸಂತೋಷಕ್ಕೆ ಮೂಲವಾದ ಎಕ್ಸ್ ವಸ್ತು ಯಾವುದು? ಸಂತೋಷದ ಬುನಾದಿಯೆ ತೃಪ್ತಿ; ಯಾವುದು ನಮ್ಮಲ್ಲಿರುವುದೊ ಅದರಿಂದ ತೃಪ್ತಿ ಪಡಬೇಕು. ಅತೃಪ್ತ ಆತ್ಮವು ಎಂದಿಗೂ ಸಂತೋಷದಿಂದಿರಲಾರದು; ಮತ್ತು ತೃಪ್ತಿ ಹೊಂದಿದ ಆತ್ಮವು ಹೆಚ್ಚಿನದೇನನ್ನೂ ಸಂತೋಷಕ್ಕಾಗಿ ಬಯಸುವುದಿಲ್ಲ. ಹಾಗಾದಲ್ಲಿ ಎಲ್ಲಿಂದ ತೃಪ್ತಿ (ಸಂತೋಷ) ಉಗಮವಾಗುತ್ತದೆ? ನಿಸ್ವಾರ್ಥ ಸೇವೆಯಲ್ಲಿ ಅದು ದೊರೆಯುತ್ತದೆ.



ನಮ್ಮಲ್ಲಿ ಬಹಳಷ್ಟು ಮಂದಿ ತಮ್ಮ ಬದುಕಿನಲ್ಲಿ ತೃಪ್ತಿಯನ್ನು ಬೇರೆಯವರ ಸೇವೆಯನ್ನು ಮಾಡುವ ಮೂಲಕ ಪಡೆದುಕೊಂಡಿರುವ ಅನುಭವವನ್ನು ಕಾಣುತ್ತೇವೆ. ಅನೇಕ ಜನರು ಸೇವೆಗಾಗಿಯೆ ತಮ್ಮ ಬದುಕನ್ನು ಮುಡುಪಾಗಿಟ್ಟು ಅದನ್ನೇ ತಮ್ಮ ಆದರ್ಶವಾಗಿಟ್ಟುಕೊಂಡಿರುತ್ತಾರೆ. ನಿಸ್ವಾರ್ಥ ಸೇವೆಯು ನಮಗೆ ತೃಪ್ತಿಯನ್ನು ತಂದುಕೊಡುವುದೇತಕ್ಕೆ? ವೇದ ಶಾಸ್ತ್ರಗಳು ತಿಳಿಸುವಂತೆ ಭಗವಂತನಾದ ಕೃಷ್ಣನ ನಿಸ್ವಾರ್ಥ ಸೇವೆಯು ನಮ್ಮ ಆತ್ಮದ ಮೂಲ ಸ್ವಭಾವವೇ ಆಗಿರುತ್ತದೆ. ಹಾಗಾಗಿ ಅದರ ಸಾದೃಶ್ಯವೂ ಸಹ ಅಂದರೆ ಶ್ರೀಕೃಷ್ಣನನ್ನಲ್ಲದೆ ಬೇರೆಯವರಿಗೆ ಮಾಡುವ ಸೇವೆಯು ನಮಗೆ ಸಂತೃಪ್ತ ಸಾಗರದ ಒಂದು ಬಿಂದುವಿನಷ್ಟಾದರೂ ಹರ್ಷವನ್ನು ತರುತ್ತದೆ ಮತ್ತು ಕೃಷ್ಣನ ಸೇವೆಯಲ್ಲಿನ ಸಂತೋಷವನ್ನು ತರುತ್ತದೆ. ನಾವು ನೇರವಾಗಿ ಕೃಷ್ಣನ ಸೇವೆಗೆ ನಮ್ಮನ್ನು ತೊಡಗಿಸಿಕೊಂಡರೆ ನಾವು ಆಳವಾದ ತೃಪ್ತಿಯ ಮತ್ತು ಸಂತೋಷದ ಅನುಭಾವವನ್ನು ಹೊಂದುತ್ತೇವೆ. ಮತ್ತು ಸ್ವಾಭಾವಿಕವಾಗಿ, ನಾವು ನಮ್ಮ ಸುದೈವವನ್ನು ಅನ್ಯರೊಂದಿಗೆ ಹಂಚಿಕೊಳ್ಳುವುದನ್ನು ಆಶಿಸುತ್ತೇವೆ.

ಆಗಾಗ್ಯೆ ಪ್ರಶ್ನೆಯೊಂದು ಎದ್ದು ನಿಲ್ಲುತ್ತದೆ, ಭಗವಂತನ ಸೇವೆಯನ್ನು ಮಾಡುವ ಬದಲು, (ಯಾರು ವಾಸ್ತವವಾಗಿ ನಮ್ಮ ಸಹಾಯವನ್ನು ಬಯಸುವುದಿಲ್ಲ), ಈ ಪ್ರಪಂಚದಲ್ಲಿ ಅಗತ್ಯವಿರುವರಿಗೆ ಮತ್ತು ದುರಾದೃಷ್ಟವಂತರಿಗೆ ಏಕೆ ಸೇವೆಸಲ್ಲಿಸಬಾರದು? ಈ ಪ್ರಶ್ನೆಗೆ ಉತ್ತರವನ್ನು ವಾಚಕರು ಈ ವೇಳೆಗೆ ಗುರುತಿಸಿರಬಹುದು; ಅಂದರೆ ಪ್ರತಿಯೊಂದು ಆತ್ಮವೂ ಭಗವಂತನ ಸೇವೆ ತನಗೆ ಅಗತ್ಯವೆಂದು ಭಾವಿಸುತ್ತದೆ. ಕೇವಲ ಪುರುಷೋತ್ತಮನ ಸೇವೆಯಲ್ಲಿ ತೊಡಗಿಸಿಕೊಂಡ ಆತ್ಮವು ತಾನು ಸಹಜವಾದ ಮತ್ತು ತಾನು ಬಯಸಿದ ಪರಮಾನಂದವನ್ನು ಹೊಂದುತ್ತದೆ. ಆ ಕಾರಣಕ್ಕಾಗಿಯೆ ನಮ್ಮ ವೈಯಕ್ತಿಕ ಹಿತಾಸಕ್ತಿಗಾಗಿಯೆ ನಾವು ಭಗವಂತನ ಸೇವೆಯನ್ನು ಮಾಡಬೇಕು. ಮಿಗಿಲಾಗಿ, ಈ ಮೂಲ ಭೂತ ಸತ್ಯವನ್ನು ಅರ್ಥಮಾಡಿಕೊಂಡು ಓರ್ವ ವ್ಯಕ್ತಿ ಅಗತ್ಯವಿರುವವರಿಗೆ ಸಹಾಯ ಮಾಡುತ್ತಾರೆ; ಅವರನ್ನೂ ದೇವರ ಸೇವೆಯಲ್ಲಿ ತೊಡಗುವಂತೆ ಪ್ರೋತ್ಸಾಹಿಸುತ್ತಾರೆ ಮತ್ತು ಆಮೂಲಕ ತಮ್ಮ ಬದುಕಿನಲ್ಲಿ ಪರಮ ಸುಖವನ್ನು ಪಡೆಯುವಂತೆ, ಅರಿಯುವಂತೆ ಮಾಡುತ್ತಾರೆ. ಈ ಸೇವೆಯೇ ಓರ್ವ ವ್ಯಕ್ತಿ ಬೇರೊಬ್ಬ ವ್ಯಕ್ತಿಗೆ ಕೊಡಬಹುದಾದ ನಿಜವಾದ ಸೇವೆ. ಅದನ್ನು ಹೊರತು ಪಡಿಸಿ ಉಳಿದ



ಎಲ್ಲವೂ ಕೇವಲ ಬಾಹ್ಯ ಪ್ರದರ್ಶನವಾಗುತ್ತದೆ, ಅದರಿಂದ ಇತ್ಯಾತ್ಮಿಕ ಪ್ರಭಾವ ಯಾವುದೂ ಆಗುವುದಿಲ್ಲ. ಏಕೆಂದರೆ ಅದನ್ನು ಹೊರತು ಪಡಿಸಿದ ಎಲ್ಲವೂ ಎಲ್ಲ ರೀತಿಯ ಸೇವೆಗೂ ಮೂಲ ಕಾರಣವಾಗುತ್ತದೆ. ಆ ಕಾರಣದಿಂದ ಸಾಮಾಜಿಕ ಕಾರ್ಯಕರ್ತರಾದ ನಾವೆಲ್ಲರೂ ಈ ಉತ್ತಮ ಕಾರ್ಯದಲ್ಲಿ ತೊಡಗಿಸಿ–ಕೊಳ್ಳೋಣ, ಅತಿ ಮುಖ್ಯವಾದುದೆಂದರೆ ಅವರೆಲ್ಲರಿಗೂ ಭಗವದ್ಭಕ್ತಿಯ ಪ್ರಜ್ಞೆಯನ್ನು ಅವರ ಕಾರ್ಯಸೂಚಿಯಲ್ಲಿರುವಂತೆ ಮಾಡೋಣ. ಇದರೊಂದಿಗೆ ಅವರ ಎಲ್ಲಾ ಸಾಧನೆಗಳೂ ಸಫಲಗೊಳ್ಳುತ್ತದೆ; ಅದನ್ನು ಹೊರತು ಪಡಿಸಿದರೆ ಉಳಿದ ಎಲ್ಲವೂ ಸಂಪೂರ್ಣ ವಿಫಲತೆಯನ್ನು ಹೊಂದುತ್ತವೆ.

***ಸ್ವಾರ್ಥ ಸಾಧನೆಗಾಗಿ ನಾವು ಭಗವಂತನ ಸೇವೆ ಮಾಡುತ್ತಿರುವೆವೆ?***

ಈ ಸನ್ನಿ ವೇಶದಲ್ಲಿ, ವಿಶೇಷವಾಗಿ ನಾಸ್ತಿಕರ ಮನಸ್ಸಿನಲ್ಲಿ ಪ್ರಶ್ನೆಯೊಂದು ಜನಿಸುತ್ತದೆ, ಕಟ್ಟಕಡೆಗೆ ಅವರು ಹೇಳುತ್ತಾರೆ, "ನೀನು ನಿನ್ನ ಸಂತೋಷವನ್ನು ಬಯಸುತ್ತೀಯ, ನೀನು ಖಂಡಿತವಾಗಿಯೂ ನಿಸ್ವಾರ್ಥ ವ್ಯಕ್ತಿಯಲ್ಲ, ನೀನು ನಮ್ಮನ್ನು ಹಾಗೆ ನಂಬುವಂತೆ ಮಾಡುತ್ತಿರುವೆ. ನೀನು ಭಗವಂತನ ಸೇವೆ ಮಾಡುತ್ತಿದ್ದೀಯೆ ಏಕೆಂದರೆ ಅದು ನಿನಗೆ ಸಂತೋಷವನ್ನು ಕೊಡುತ್ತದೆ, ಆದರೆ ಅದು ನಿಜವಾಗಿಯೂ ನಿಸ್ವಾರ್ಥವಲ್ಲ." ಈ ಪ್ರಶ್ನೆಯ ಹಿಂದೆ ಅಡಗಿರುವ ಚಾತುರ್ಯದ ಬುದ್ಧಿಮತ್ತೆಯನ್ನು ನಾವು ಒಪ್ಪಿಕೊಳ್ಳುತ್ತೇವೆ. ಮತ್ತು ಈ ಪ್ರಶ್ನೆಗೆ ಸರಿಯಾದ ಉತ್ತರವೆಂದರೆ ನಿಜವಾದ ಭಕ್ತನ ಹೃದಯವನ್ನು ಇದು ತಟ್ಟುತ್ತದೆ. ದೇವರನ್ನು ದೂರವಿರಿಸಿ ಸಂತೋಷವನ್ನು ಆಶಿಸುವಂತಹವರಿಗೆ ನಾವು ತಿಳಿಸಿ ಹೇಳುವುದೇನೆಂದರೆ ಶಾಶ್ವತವಾದ ಮತ್ತು ನೈಜವಾದ ಆನಂದ ದೊರೆಯುವುದು ಕೇವಲ ಭಗವಂತನ ಸೇವೆಯಿಂದ ಮಾತ್ರ. ಭಗವಂತನಿಗೆ ಮಾಡುವ ಅಲ್ಪ ಸೇವೆಯಿಂದ, ಅದು ಸ್ವಾರ್ಥದಿಂದಲೇ ಆಗಿದ್ದರೂ, ಸುಪ್ತಾವಸ್ಥೆಯಲ್ಲಿರುವ ಭಗವಂತನ ಪ್ರೇಮವು ಜಾಗೃತಗೊಳ್ಳುತ್ತದೆ. ಅನಂತರ ಸ್ವಲ್ಪ ಸಮಯದಲ್ಲಿಯೆ ಆ ವ್ಯಕ್ತಿಯು ಭಗವಂತನನ್ನು ನಿಸ್ವಾರ್ಥವಾಗಿ ಸೇವೆ ಮಾಡಲು ಪ್ರಾರಂಭಿಸುತ್ತಾನೆ. ಆತ್ಮದ ಸಹಜ ಸ್ವಭಾವವು ಭಗವಂತನನ್ನು ಪ್ರೀತಿಸುವುದು ಮತ್ತು ಅವನ ಸೇವೆ ಮಾಡುವುದೆ ಆಗಿದೆ; ಮತ್ತು ಒಮ್ಮೆ ಮೂಲ ಪ್ರಜ್ಞೆ ಜಾಗೃತಗೊಂಡರೆ, ಆತ್ಮವು ಭಗವಂತನ ಸೇವೆಯನ್ನು ನಿಸ್ವಾರ್ಥ ಭಾವನೆಯಿಂದ ಮಾಡಲು ಬಯಸುತ್ತದೆ. ಭಗವಂತನ ಶುದ್ಧಭಕ್ತನಿಗೆ ತಾನು ಸ್ವತಃ ಸುಖಿಯಾಗಿರುವೆನೊ ಅಥವಾ ಇಲ್ಲವೊ ಎನ್ನುವ ನಿರ್ಣಯವಿರುವುದಿಲ್ಲ; ಅವನಲ್ಲಿ ಇರುವುದೆಲ್ಲವೂ ತಾನು ತನ್ನ ದೈವವನ್ನು ಹೇಗೆ ಸೇವೆ ಮಾಡ ಬೇಕು ಮತ್ತು ಅವನನ್ನು ಹೇಗೆ ತೃಪ್ತಿ ಪಡಿಸಬೇಕೆನ್ನುವುದು ಮಾತ್ರ ಆಗಿರುತ್ತದೆ. ಎಲ್ಲವನ್ನೂ ಪ್ರೀತಿಸುವ ಭಗವಂತನು ಅಂತಹ ನೈಜಭಕ್ತನ ಭಕ್ತಿಯಿಂದ ಸಂಚಲಿತನಾಗುತ್ತಾನೆ ಮತ್ತು ಭಕ್ತನ ಸಂತೋಷಕ್ಕೆ ಮಿತಿಯಿಲ್ಲದಂತೆ ಕರುಣಿಸುತ್ತಾನೆ. ಶುದ್ಧ ಭಕ್ತನು ಕೃಷ್ಣನ ಆನಂದವಿನಿಮಯದಿಂದ ಉದ್ದೀಪನಗೊಳ್ಳುವುದಿಲ್ಲ ಆದರೆ ಶುದ್ಧ ಪ್ರೇಮದಿಂದ ವರ್ತಿಸುತ್ತಾನೆ. ಶುದ್ಧ ಭಕ್ತನು ಎಂದಿಗೂ ಆನಂದವನ್ನು ಬಯಸುವುದಿಲ್ಲ, ವಾಸ್ತವವಾಗಿ ಅವನು ಸೇವೆಯನ್ನು ಅರ್ಪಿಸುತ್ತಾನೆ ಇದು ಕೃಷ್ಣ ಪ್ರೇಮದ ಶುದ್ಧವಾದ ಸಾರ ಮತ್ತು (ಹೃದಯದಲ್ಲಿ) ಆತ್ಮನಲ್ಲಿ ನೆಲೆಯೂರಿರುವಂತಹದು.

ನನ್ನ ಮನೆಯ ಮೇಲ್ಭಾಗದಲ್ಲಿ ನಿಂತು ರಾತ್ರಿಯ ಆಗಸ ವೀಕ್ಷಣೆಯಲ್ಲಿದ್ದ ನನ್ನಲ್ಲಿ ಜಾಗೃತಗೊಂಡ ಮಾನಸಿಕ ಪ್ರಯಾಣ ನನ್ನನ್ನು ಭೌತಿಕ ಪ್ರಪಂಚದಾಚೆಗೆ ವಿಸ್ತಾರವಾದ ಆಧ್ಯಾತ್ಮಿಕ ನಭದ ಕಡೆಗೆ ಕೊಂಡೊಯ್ದ ರೀತಿ ಮುಂದುವರಿದು ಅದು ನನ್ನನ್ನು ಶಾಶ್ವತವಾದ ಭಗವಂತನ ಸಾನ್ನಿಧ್ಯಕ್ಕೆ ಕರೆದೊಯ್ದು ಆತನ ಅನಂತ ಶಕ್ತಿಯನ್ನು ದರ್ಶಿಸುವಂತೆ ಮಾಡಿತು. ಇಂತಹ ಅಭೂತಪೂರ್ವವಾದ ಮತ್ತು ಸಂಕೀರ್ಣವಾದ ವಿಸ್ತಾರದ ಜೀವಿತವು ನನ್ನನ್ನು ನನ್ನ ಸ್ವಂತ ಅಸ್ತಿತ್ವದ ಬಗೆಗೆ ಚಿಂತಿಸುವಂತೆ ಮಾಡಿತು, ಮತ್ತು ಸ್ವಾಭಾವಿಕವಾಗಿ ನಾನು ಆ ಪುರುಷೋತ್ತಮನ ಪ್ರೀತಿಯ ಕಿಂಕರನಾಗಿರುವಂತೆ ಮಾಡಿತು, ಹಾಗಾಗಿ, ನನ್ನ ಬದುಕಿನ ಈ ಸಂದರ್ಭದಲ್ಲಿ ನನ್ನ ಸಹಜ ಆಧ್ಯಾತ್ಮಿಕ ಪ್ರಜ್ಞೆಯನ್ನು ಪುನರುಜ್ಜೀವನಗೊಳಿಸುವುದು ಮತ್ತು ಅಂತೆಯೆ ಇತರರಿಗೆ ಆ ನಿಟ್ಟಿನಲ್ಲಿ ಸಹಾಯ ಮಾಡುವುದೆ ಆಗಿದೆ. ಅತ್ಯಂತ ಸಂಕೀರ್ಣವಾದ ಮತ್ತು ನಿರಾಕರಿಸಲಾಗದ ಆಧ್ಯಾತ್ಮಿಕ ಅನಂತತೆಯ ಅಸ್ತಿತ್ವವು ನನ್ನನ್ನು ನಾನೇ ಶೋಧಿಸಿಕೊಳ್ಳುವಂತೆ ಮಾಡಿದೆ.

*(ಅಭಿಜಿತ್ ಟಾಲಿಯವರು ಕಂಪ್ಯೂಟರ್ ವಿಜ್ಞಾನದಲ್ಲಿ ಮುಂಬೈನ ಐಐಟಿ ಯಲ್ಲಿ ಎಂ.ಟೆಕ್. ಮಾಡಿ ಪ್ರಸ್ತುತ ಹಿರಿಯ ಸಾಫ್ಟ್ ವೇರ್ ಇಂಜಿನಿಯರ್ ಆಗಿ ಪೂಣೆಯ ಎಂ ಎನ್ ಸಿ ಯಲ್ಲಿ ಕೆಲಸಮಾಡುತ್ತಿದ್ದಾರೆ.)*

# ಮಂತ್ರ ದಂಡ

**– ತಾರಿಣಿ ರಾಧಾದೇವಿದಾಸಿ**



ನಮ್ಮ ಮಕ್ಕಳನ್ನು ಪಠಿಸುವಂತೆ ಮಾಡುವ , ಉತ್ಸಾಹ ತುಂಬುವ ಮತ್ತು ಸುಶಿಕ್ಷಿತರನ್ನಾಗಿಸುವವು ಶ್ರೀ ಕೃಷ್ಣನ ಕಥೆಗಳು.

ಕಥೆಗಳನ್ನು ಹೇಳುವ ಕೌಶಲವನ್ನು ಹೊಂದಿರುವ ನಾನು, ಕೆಲವೊಮ್ಮೆ ನನ್ನ ಮಕ್ಕಳು ನನ್ನನ್ನು ದಿನಪೂರ್ತಿ ಕೆಲಸದ ಭಾರದಿಂದ ದಣಿದಿರುವ ಸಂದರ್ಭದಲ್ಲೂ ಕಥೆ ಹೇಳುವಂತೆ ಒತ್ತಾಯಿಸಿದಾಗ ನನ್ನನ್ನು ನಾನೆ ಶಪಿಸಿ ಕೊಳ್ಳುತ್ತೇನೆ. ಆದರೆ ಅನೇಕ ಬಾರಿ ನನಗೆ ಈ ಕಥೆಯನ್ನು ಹೇಳುವ ಸಾಮರ್ಥ್ಯವನ್ನು ದಯಪಾಲಿಸಿರುವುದಕ್ಕೆ ಕೃತಜ್ಞಳಾಗಿರುತ್ತೇನೆ, ಕಾರಣ ಅವುಗಳನ್ನು ಅನೇಕ ಬಾರಿ ಹೇಳಿದಾಗ ಅವು ಮತ್ತೆ ಮತ್ತೆ ಕೇಳಬೇಕೆನ್ನುವ ಆನಂದವನ್ನು ಉಂಟು ಮಾಡುತ್ತವೆ. ಇದು ಸಾಧ್ಯವಾಗಿರುವುದಕ್ಕೆ ಕಾರಣ ಕೃಷ್ಣನ ಬಾಲ್ಯದ ಕಥೆಗಳನ್ನು ಹೇಳುವುದೇ ಆಗಿರುತ್ತದೆ. ಆ ಎಲ್ಲ ಕಥೆಗಳು ಇಂದ್ರಿಯಾತೀತ ಆನಂದವನ್ನು ಸ್ಫುರಿಸುವ ಕಥೆಗಳೇ ಆಗಿವೆ. ಇದಕ್ಕೆ ಹೊರತಾಗಿ ಭಿನ್ನತೆಯನ್ನು ತೋರುವ ಮೂರು ಹಂದಿ ಮರಿಗಳ ಅಥವಾ ಸಿಂಡ್ರೆಲಾ ಕಥೆಯನ್ನು ಪ್ರತಿದಿನ ಹೇಳುವುದು ಸಮಂಜಸವೆ?

ಓರ್ವ ಮಾತೆ ತನ್ನ ಶಿಶುವು ನಿದ್ರಿಸಲೆಂದು ಅವಳಿಗಾಗಿ ಅಚಕವೊಂದನ್ನು ಹಾಡುತ್ತಾಳೆ. ಆದರೆ ಅದೇ ಅಚಕವನ್ನು ಎಷ್ಟು ಬಾರಿ ಹಾಡುವುದು? ಒಂದು ದಿನ ಆಕೆ ಸಂಪೂರ್ಣವಾಗಿ ಅಚಕ ಹಾಡನ್ನು ಹಾಡಲು ಬೇಸರಿಸಿಕೊಂಡಳು ಮತ್ತು ವ್ಯಾಕುಲಗೊಂಡಳು, ಕಾರಣ ಅವಳ ಶಿಶು ಬೇರೆ ಯಾವುದೇ ರಾಗಕ್ಕೆ ಪ್ರತಿಕ್ರಿಯಸಲಿಲ್ಲ. ಆಗ ನಾನು ಅದೇ ರಾಗದಲ್ಲಿ ಹರೇ ಕೃಷ್ಣ ವನ್ನು ಹಾಡಿದಾಗ ಆ ಮಗು ತಕ್ಷಣವೇ ನಿದ್ರಾವಶಕ್ಕೆ ಜಾರಿತು. ಈ ವಿಧಾನದಿಂದ ತಾಯಿ ಮತ್ತು ಮಗು, ಇಬ್ಬರೂ ಆನಂದಾನುಭಾವಿಗಳಾದರು. ಇದರಂತೆಯೆ, ಕೃಷ್ಣನ ಕಥೆಗಳು ಸ್ವಾಭಾವಿಕವಾಗಿ ಧಾರ್ಮಿಕ ಕಥೆಗಳಾಗಿರುವುದರಿಂದ ಕಥೆಯನ್ನು ಹೇಳುವವರಿಗೆ ಮತ್ತು ಪ್ರಾಮಾಣಿಕವಾಗಿ ಅದನ್ನು ಆಲಿಸುವವರಿಗೆ ಬೇಸರವೊದಗುವುದಿಲ್ಲ. ಚೈತನ್ಯ ಪ್ರಭುಗಳು ಪುರಿಯಲ್ಲಿ ವಾಸ್ತವ್ಯ ಮಾಡಿದ್ದ ಕಾಲದಲ್ಲಿ ಪ್ರತಿದಿನವೂ ಪ್ರಹ್ಲಾದನ ಮತ್ತು ದ್ರುವನ ಇತಿಹಾಸವನ್ನು ಕೇಳುತ್ತಿದ್ದರು ಹಾಗೂ ಈ ಬಾಲ ಭಕ್ತರ ಭಕ್ತಿಯನ್ನು ಸ್ಮರಿಸುತ್ತ ಪರಮಾನಂದವನ್ನು ಹೊಂದುತ್ತಿದ್ದರು.

ಮಕ್ಕಳಿಗೆ ಅವರ ಬಾಲ್ಯ ಕಾಲದಲ್ಲಿ ಶ್ರೀ ಕೃಷ್ಣನ ಬಾಲ್ಯದ ಕಥೆಗಳನ್ನು ಹೇಳುವುದನ್ನು ಪ್ರಾರಂಭಿಸಬಹುದು. ಅದೃಷ್ಟವಶಾತ್ ಶ್ರೀಲ ಪ್ರಭುಪಾದರ ಕೃಪೆಯಿಂದ ಮತ್ತು ಅನಾಯಾಸ ಸೇವೆಗೈಯುವ ಅವರ ತೀಕ್ಷ್ಣಮತಿಗಳಾದ ಅನುಯಾಯಿಗಳ, ಕಾರ್ಯದ ಫಲವಾಗಿ ಇಸ್ಕಾನ್‌ನಲ್ಲಿ ಬೃಹತ್ ಶ್ರೇಣಿಯ ಚಿತ್ರ ಸಾಮಾಗ್ರಿಗಳು ಮತ್ತು ಮಕ್ಕಳ ಪುಸ್ತಕಗಳು ಮಕ್ಕಳನ್ನು ಕಾರ್ಯಶೀಲರನ್ನಾಗಿಸಲು ದೊರೆಯುತ್ತಿವೆ. ಗೋಡೆಗಳಲ್ಲಿ ಚಿತ್ರಿಸಲಾಗಿರುವ ಶ್ರೀಕೃಷ್ಣನ ವಿವಿಧ ಚಿತ್ರಗಳನ್ನು ಮಕ್ಕಳಿಗೆ ಅತ್ಯಂತ ಸಣ್ಣ ವಯಸ್ಸಿನಲ್ಲಿ ಅಂದರೆ ಅವರು ಆರು ತಿಂಗಳಿನ ಶಿಶುವಾಗಿರುವಾಗಲೇ ತೋರಿಸುತ್ತ, ಪ್ರಾಣಿ ಪಕ್ಷಿಗಳನ್ನು ತೋರಿಸುತ್ತ, ಕೃಷ್ಣನ ನಗುಮುಖ ಮತ್ತು ಅವನ ಆಭರಣಗಳು ಮತ್ತಿತರ ದೃಶ್ಯಾವಳಿಗಳನ್ನು ತೋರಿಸುತ್ತ ಅವುಗಳ ಬಗೆಗೆ ಶಿಶುವಿನ ಆಸಕ್ತಿಯನ್ನು ಉತ್ತೇಜಿಸಬಹುದು. ಮಗುವು ನೋಡಿದ, ಕೇಳಿದ ಎಲ್ಲವನ್ನು ತಕ್ಷಣದಲ್ಲಿ ಪುನಃರೂಪಿಸಲು ಸಾಧ್ಯವಾಗದಿರಬಹುದು, ಮಗುವು ಅದಕ್ಕೆ ಪ್ರತಿಕ್ರಿಯೆಯನ್ನು ನೀಡದಿರಬಹುದು. ಆದರೆ ಮಗುವಿನ ಮನಸ್ಸಿನಲ್ಲಿ ನಾವು ಆಳವಾದ ನೆನಪನ್ನು ಆ ಮೂಲಕ ಮೂಡಿಸಬಹುದು. ಈ ರೀತಿ ಮಾಡುವ ಮೂಲಕ ಮಗುವಿಗೆ ಆಡಿಸಲು ಮನೆಯಗಲಕ್ಕೆ ಅಥವಾ ಅಂಗಳಕ್ಕೆ ಮಗುವಿನ ಹಿಂದೆ ಅಡ್ಡಾಡುವುದನ್ನು ತಪ್ಪಿಸಬಹುದು.

ಮಗುವು ಒಂದು ಕಡೆ ಕುಳಿತು ಕೊಳ್ಳುವುದನ್ನು ಅಭ್ಯಾಸ ಮಾಡಿಕೊಂಡ ನಂತರ, ವಿಸ್ತಾರವಾದ ಚಿತ್ರಗಳನ್ನು ಮಗುವಿಗೆ ತೋರಿಸುತ್ತ ಸರಳವಾದ ಮಾತುಗಳಲ್ಲಿ ಕೃಷ್ಣನ ಬಾಲ ಲೀಲೆಗಳ ಬಗೆಗೆ ವಿವರಿಸುತ್ತ ಹೋಗಬಹುದು. ಮಗುವು ಮಾತನಾಡುವ


ಸಾಮರ್ಥವನ್ನು ಪಡೆದುಕೊಂಡ ನಂತರ, ಅದಕ್ಕೆ ಅರ್ಥವಾಗಿ ಮಗುವು ನೆನಪಿನಲ್ಲಿಟ್ಟು ಕೊಂಡು ತಾನೇ ಅದನ್ನು ಉಚ್ಚರಿಸುವಂತೆ ಸಾಧ್ಯವಾಗುವ ರೀತಿಯಲ್ಲಿ ಕೃಷ್ಣನ ಬಾಲ್ಯದ ಕಥೆಗಳನ್ನು ಸರಳವಾದ ಶಬ್ದಗಳಲ್ಲಿ ಹೇಳಬೇಕು. ಹೀಗೆ ಮಾಡುವ ಮೂಲಕ ಕೃಷ್ಣಪ್ರಜ್ಞೆಯನ್ನು ಮಕ್ಕಳಲ್ಲಿ ನೆಲೆ ನಿಲ್ಲುವಂತೆ ಮಾಡುವ ಮೂಲಕ ನಮ್ಮ ಸಮಯವನ್ನು ಸದುಪಯೋಗ ಪಡಿಸಿಕೊಳ್ಳಬಹುದು.

ನನ್ನ ಮಗಳು ಭಾಗ್ಯವತೀ ರಾಧಾ ತನ್ನ ಶಿಶುವಿಹಾರ (ಕಿಂಡರ್ ಗಾರ್ಡನ್) ದಿಂದ ಮನೆಗೆ ಮರಳಿದ ನಂತರ ಅವಳ ಬೊಂಬೆಯಾಟದ ಫೋನ್‌ನನ್ನು ನನಗೆ ಕೊಟ್ಟು ತನ್ನ ಸಹಪಾಠಿಯೊಂದಿಗೆ ಮಾತನಾಡುವಂತೆ ತಿಳಿಸಿದಳು. ಸಾಮಾನ್ಯವಾಗಿ ನಾನು ಅವಳ ಗೆಳತಿ ಶ್ರೇಯಾಳೊಂದಿಗೆ ಮಾತನಾಡುತ್ತ ಅವಳು ತನ್ನ ಊಟವನ್ನು ಮುಗಿಸಿದಳೆ, ಅವಳು ನಿದ್ರಿಸಲು ಪ್ರಾರಂಭಿಸಿರುವಳೆ ಇತ್ಯಾದಿ ಮಾತುಗಳನ್ನು ಆಡತೊಡಗುತ್ತೇನೆ. ಆದರೆ ಭಾಗ್ಯ ತನ್ನ ಬೇರೊಬ್ಬ ಸಹಪಾಠಿಯೊಂದಿಗೆ ಮಾತನಾಡಲು ತಿಳಿಸುತ್ತಾಳೆ, ಅನಂತರ ಮತ್ತೊಬ್ಬಳೊಂದಿಗೆ ---- ಅಂತಿಮವಾಗಿ ಅದು ಲೌಕಿಕವಾದುದಾಗಿ ಮತ್ತು ಆಟಕ್ಕೆ ಕೊನೆಯಿಲ್ಲದಾಗಿ, ನಾನು ಅದಕ್ಕೆ ಕೃಷ್ಣಪ್ರಜ್ಞೆಯ ಸ್ಪರ್ಶವನ್ನು ನೀಡುತ್ತೇನೆ. ನಾನು ಫೋನನ್ನು ಎತ್ತಿಕೊಂಡು ಆಕೆಯ ಮತ್ತೊಬ್ಬ ಗೆಳತಿಯಾದ ಮಾಯಾಂಕಳಿಗೆ ಕರೆಮಾಡಿ ಆಕೆಗೆ ರಾಮಲಕ್ಷ್ಮಣರು ಕಾಡಿಗೆ ಹೋದುದು ತಿಳಿದಿದೆಯೆ ಎಂದು ಪ್ರಶ್ನಿಸುತ್ತೇನೆ, ಮುಂದುವರಿದು ಅವರು ಅಲ್ಲಿ ತಾಟಕಿಯಂತಹ ದುರುಳ ಹೆಂಗಸನ್ನು ನೋಡಿದುದನ್ನು ತಿಳಿಸುತ್ತೇನೆ. ತಾಟಕಿ 'ಬೂಬೂ' ಎಂದಳು, ರಾಮ ತನ್ನ ಬಾಣದಿಂದ ಹೊಡೆಯುತ್ತಾನೆ. ಕೆಡುಕಿನ ಹೆಂಗಸು ತಾಟಕಿ ಹೋಹೋ ಎಂದು ಕೆಳಗೆ ಬೀಳುತ್ತಾಳೆ, ಹೀಗೆ ಪ್ರತಿವಾಕ್ಯವನ್ನು ಹೇಳುವಾಗಲು ಅದನ್ನು ಅಭಿನಯದ ಮೂಲಕ ತೋರಿಸುತ್ತೇನೆ. ಈ ವೇಳೆಗೆ ಭಾಗ್ಯಳ ಎಲ್ಲ ಗೆಳತಿಯರನ್ನು ನಾನು ಕರೆದು ಅವರಿಗೆ ಕಥೆಯನ್ನು ಹೇಳುತ್ತೇನೆ. ಅದು ಸಂತೋಷದಿಂದ ಕಳೆದ ಮಧ್ಯಾಹ್ನವಾಗಿರುತ್ತದೆ. ಭಾಗ್ಯ ತಾನೂ ಅಭಿನಯಿಸುತ್ತಾ ಆ ಕಥೆಯನ್ನು ಉಳಿದ ಜನರಿಗೆ ಹೇಳುತ್ತಾಳೆ. ನನ್ನ ಮಕ್ಕಳು ತಮ್ಮ ಶಾಲಾ ಸಹಪಾಠಿಗಳಿಂದ "ಕೊಲ್ಲು", "ಸಾಯಿ" ಎನ್ನುವ ಪದಗಳನ್ನು ಕಲಿಯುವ ವರೆಗೆ ನಾನು "ಕೆಳಗೆ ಬೀಳು" ಎನ್ನುವ ಶಬ್ದವನ್ನೆ ಸಾವಿನ ಶಬ್ದವಾಗಿ ಬಳಸುತ್ತಿದ್ದೆ. ಕಥೆಗಳನ್ನು ಕೇಳಲು ಯಾರು ಇಷ್ಟ ಪಡುವುದಿಲ್ಲ? ಕೃಷ್ಣನ ಕಥೆಗಳನ್ನು ಸವಿಯಾಗಿ ಚಪ್ಪರಿಸುವಂತಹ ಪ್ರಿಯ ಆದೇಶವನ್ನು ಶ್ರೀಲ ಪ್ರಭುಪಾದರು ನಮ್ಮೆಲ್ಲರಿಗೂ ನೀಡಿದ್ದಾರೆ. ಮಕ್ಕಳು ಕಥೆಗಳನ್ನು ಕೇಳುತ್ತಾ ಸ್ವಭಾವಿಕವಾಗಿ ತೆಗೆದುಕೊಳ್ಳಬಹುದಾದ ಆಹಾರಕ್ಕಿಂತಲೂ ಹೆಚ್ಚು ತಿನ್ನುತ್ತಾರೆ. ಮಕ್ಕಳು ಭೋಜನಕ್ಕೆ ಮತ್ತೆ ಮತ್ತೆ ಕರೆದಾಗಲೂ ಬಾರದಿದ್ದರೆ ಶ್ರೀಕೃಷ್ಣನ ಪುಸ್ತಕವೊಂದನ್ನು ಹಿಡಿದು ಕುಳಿತು ಓದಲು ಪ್ರಾರಂಭಿಸಿ; ಆಗ ಅವರು ನಿಮ್ಮ ಬಳಿ ಓಡೋಡಿ ಬರುವುದನ್ನು ಕಾಣುತ್ತೀರಿ. ಕೃಷ್ಣನ ಕಥೆಗಳ ಅಭಿರುಚಿಯನ್ನು ಮಕ್ಕಳಲ್ಲಿ ಬೆಳೆಸುವುದರಿಂದ ಅತಿಶಯವಾದ ಪ್ರಯೋಜನಗಳಿವೆ.

ಕೃಷ್ಣನನ್ನು ಹೊಗಳುವುದು: ಶಿಸ್ತಿಗೆ ಸುಲಭೋಪಾಯ ಭಕ್ತಿಯ ನವವಿಧಗಳಲ್ಲಿ ಭಗವಂತನನ್ನು ಕುರಿತ ಶ್ರವಣ ಅಥವಾ ಹೇಳುವುದು ಅತ್ಯಂತ ಪ್ರಮುಖವಾದುದು, ಕಾರಣ ಅದರಿಂದ ನಾವು ಭಗವಂತನನ್ನು ಹೊಗಳುವ ಮತ್ತು ಆತನ ನಿಕಟ ಸಂಬಂಧವನ್ನು ಸ್ಥಾಪಿಸುವುದಕ್ಕೆ ಪ್ರಾರಂಭಿಸುತ್ತೇವೆ. ರಾಮ/ಕೃಷ್ಣ ಇವರುಗಳು ಎಷ್ಟು ಶ್ರೇಷ್ಠ ನಾಯಕರೆನ್ನುವುದನ್ನು ಮಕ್ಕಳು ಒಮ್ಮೆ ಅರಿತು ಕೊಂಡರೆ ಅವರೊಂದಿಗೆ ತಮ್ಮ ಗೆಳೆತನವನ್ನು ಬೆಳೆಸಲು ಆಶಿಸುತ್ತಾರೆ. ದುಷ್ಟರಾದ ರಾಕ್ಷಸರಂತೆ ತಾವು ವರ್ತಿಸಬಾರದು, ಅದು ತಮ್ಮನ್ನು ನಾಶಮಾಡುತ್ತದೆ ಬದಲಾಗಿ ಭಗವಂತನ ಕೃಪೆಗೆ ಪಾತ್ರರಾದ ಭಕ್ತರಂತೆ ತಮ್ಮನ್ನು ಆತನು ರಕ್ಷಣೆ ಮಾಡುವನೆಂದು ಭಾವಿಸುತ್ತಾರೆ. ಅದರಿಂದ ಅವರಲ್ಲಿ ಸ್ವಾಭಾವಿಕವಾಗಿ ಶಿಸ್ತು ನೆಲೆಯಾಗುತ್ತದೆ.

ನಮ್ಮ ಮಕ್ಕಳ ಕಾರ್ಯಕ್ರಮಗಳಲ್ಲಿ ನಾವು ಎಂದೂ ನೈತಿಕ ಮೌಲ್ಯಗಳನ್ನು ಬೋಧಿಸುವುದಿಲ್ಲ. ನಾವು ಅವರಿಗೆ ಕೇವಲ ಕೃಷ್ಣನ ಕಥೆಯನ್ನು ಹೇಳುತ್ತೇವೆ ಮತ್ತು ಕೃಷ್ಣ ಸಂಬಂಧಿತ ಚಟುವಟಿಕೆಗಳಲ್ಲಿ ಅವರು ಭಾಗಿಯಾಗುವಂತೆ ಮಾಡುತ್ತೇವೆ. ಮೊದಲಿಗೆ ತಂದೆ ತಾಯಂದಿರು ತಮ್ಮ ಮಕ್ಕಳು ತುಂಬ ವಿಧೇಯರಾಗಿರುವುದಾಗಿ, ಗೌರವಯುತವಾಗಿ ಮತ್ತು ಶಾಂತವಾಗಿರುವುದನ್ನು ತಿಳಿಸುತ್ತಾರೆ. ಶ್ರೀರಾಮ, ಶ್ರೀಕೃಷ್ಣ ಮತ್ತು ಅವರ ಭಕ್ತರು ತಮ್ಮ ಬದುಕಿನಲ್ಲಿ ಋಜುಮಾರ್ಗದಲ್ಲಿ ನಡೆಯುತ್ತಾರೆ. ಇದರಿಂದಾಗಿ ಮಕ್ಕಳು ಸ್ವಾಭಾವಿಕವಾಗಿ ಆ ಗುಣಗಳನ್ನು ಬೆಳಸಿಕೊಳ್ಳುತ್ತಾರೆ. ಈ ರೀತಿಯಾಗಿ ಕಥೆಯನ್ನು ಹೇಳುವುದರಿಂದ ಅದು "ಮಂತ್ರ ದಂಡದಂತೆ" ಅವರಲ್ಲಿ "ಶಿಸ್ತು" ಮೂಡುವಂತೆ ಮಾಡುತ್ತದೆ ಮತ್ತು ಅದೇ ವೇಳೆಗೆ ಭಗವಂತನಲ್ಲಿ ಪ್ರೀತಿ ಬೆಳೆಯುವಂತೆಯೂ ಮಾಡುತ್ತದೆ.

ಇತ್ತೀಚಿನ ದಿನಗಳಲ್ಲಿ ಪ್ರತಿದಿನವೂ ಮಕ್ಕಳಲ್ಲಿ ಕ್ರೌರ್ಯದ ನಡವಳಿಕೆಗಳು ಹೆಚ್ಚಾಗುತ್ತಿರುವುದನ್ನು ಕಾಣುತ್ತಿರುತ್ತೇವೆ, ಅದಕ್ಕೆ ಮುಖ್ಯ ಕಾರಣ ಆ ಮಕ್ಕಳು ಟಿ.ವಿ . ಗಳಲ್ಲಿ ಮತ್ತು ಚಲನಚಿತ್ರಗಳಲ್ಲಿ ಹೆಚ್ಚಾಗಿ ಕ್ರೌರ್ಯದ ದೃಶ್ಯಗಳನ್ನು ನೋಡುವಂತೆ ಮಾಡುತ್ತಿರುವುದೇ ಆಗಿದೆ. ಶ್ರೀಕೃಷ್ಣನ ಬಾಲ್ಯದ ಕಥೆಗಳನ್ನು ನಾವು ಗಮನದಲ್ಲಿರಿಸಿಕೊಂಡರೆ



ಮತ್ತು ಅವನ ಅವತಾರಗಳನ್ನು ಗಮನಿಸಿದರೆ ವಾಸ್ತವವಾಗಿ ಆ ಕಥೆಗಳು ಹೋರಾಟದ ಕಥೆಗಳೇ ಆಗಿವೆ. ಆದರೆ ಅವುಗಳಿಂದ ಮಕ್ಕಳ ಮೇಲಾಗುವ ಪರಿಣಾಮಗಳು ಮಾತ್ರ ಭಿನ್ನವೇ ಆಗಿರುತ್ತವೆ. ಶ್ರೀಲ ಪ್ರಭುಪಾದರು ತಮ್ಮ ಉಪನ್ಯಾಸವೊಂದರಲ್ಲಿ ಅದನ್ನು ಈ ರೀತಿಯಾಗಿ ವಿವರಿಸಿದ್ದಾರೆ; ಕೃಷ್ಣನ ಈ ಹೋರಾಟದ ಲೀಲೆಯು, ಶೈಶವಾವಸ್ಥೆ, ಮತ್ತು ರಾಸಲೀಲೆಯ ಪೂರ್ವ ಕಥೆಗಳು ಎಲ್ಲವೂ ಒಂದೆ ಆಗಿವೆ, ಕಾರಣ ಅವುಗಳೆಲ್ಲದರ ಕೇಂದ್ರಬಿಂದು ಶ್ರೀಕೃಷ್ಣನೆ ಆಗಿದ್ದಾನೆ. ಕೃಷ್ಣ ಕೇಂದ್ರವಾಗಿ, ಏನೆಲ್ಲ ಕೃಷ್ಣನಿಗೆ ಸಂಬಂಧಿಸಿದಂತೆ ಬರುವುದೆಲ್ಲವೂ ಕೃಷ್ಣನೇ ಆಗಿರುತ್ತಾನೆ.

ಕೃಷ್ಣನು ಶುದ್ಧ ಸತ್ವಗುಣದವನಾಗಿದ್ದು, ಅವನನ್ನು ನಾವು ಯಾವಾಗ ಸ್ಮರಿಸುವೆವೊ, ನಾವು ನಿಧಾನವಾಗಿ ನಮ್ಮಲ್ಲಿರುವ ಆಸೆ ಮತ್ತು ಮೌಢ್ಯಗಳನ್ನು ಕಡಿಮೆ ಮಾಡಿ ಕೊಳ್ಳುತ್ತೇವೆ. ಕೃಷ್ಣನ ಹೋರಾಟದ ಪೂರ್ವಭಾಗಗಳನ್ನು ಅವನ ತುಂಟಾಟದ ಬಾಲಲೀಲೆಗಳೊಂದಿಗೆ ಅಂದರೆ, ದಾಮೋದರಲೀಲೆ, ಗೋಪಾಲ ಬಾಲಕರೊಂದಿಗೆ ಅವನ ಆಟಗಳು ಹಾಗೂ ಅತ್ಯಂತ ತಾಳ್ಮೆಯನ್ನು ಪ್ರದರ್ಶಿಸಿದ ಪ್ರಹ್ಲಾದ ಮಹಾರಾಜನ ಇತಿಹಾಸಗಳೊಂದಿಗೆ ಸಮನ್ವಯಗೊಳಿಸಬೇಕು. ಒಮ್ಮೆ ವಾರದ ಭಕ್ತ ಪ್ರಾಹ್ಲಾದನ ಶಾಲೆಯ ಕಾರ್ಯಕ್ರಮವೊಂದರಲ್ಲಿ ಓರ್ವ ಬಾಲಕ ನಾವು ಯಾವಾಗಲೂ ಏಕೆ ಕೃಷ್ಣನ ಕಥೆಗಳನ್ನೇ ಹೇಳುತ್ತೇವೆ, ರಾಮನ ಕಥೆಗಳನ್ನೇಕೆ ಹೇಳಲ್ಲವೆಂದು ಪ್ರಶ್ನಿಸಿದನು. ನಾನು ಉತ್ತರವನ್ನು ಹೇಳುವಾಗ, ನಾನು ಕೃಷ್ಣನಿಗೆ ನಿಜವಾಗಿಯೂ ಕೃತಜ್ಞತೆಯನ್ನು ಸಲ್ಲಿಸಿದೆ, ಕಾರಣ ಮಕ್ಕಳಿಗೆ ಕೃಷ್ಣನ ಬಾಲಲೀಲೆಗಳನ್ನು ವರ್ಣಿಸುವಾಗ ಅನೇಕ ಬಾರಿ ನಾನು ಅಭಿನಯ ಪೂರ್ವಕವಾಗಿ, ಸರಳವಾಗಿ ಮಕ್ಕಳಿಗೆ ಕೃಷ್ಣನ ಕಥೆಗಳನ್ನು ತಿಳಿಸಿದ್ದೇ. ವಾಲ್ಮೀಕಿಯು ರಾಮನ ಬಾಲಲೀಲೆಗಳನ್ನು ಎಷ್ಟು ಸಲ ವರ್ಣಿಸಿ ಬರೆದಿದ್ದಾರೆ? ಕೇವಲ ಒಂದೋ ಎರಡೊ ಅದಕ್ಕಿಂತ ಹೆಚ್ಚಾಗಿ ಯಾರಿಗೂ ಏನೂ ತಿಳಿಯದು. ಆದರೆ ಕೃಷ್ಣನು ಎಷ್ಟು ಕರುಣಾಮಯಿ ಎಂದರೆ ಮಕ್ಕಳಿಗೆ ತಿಳಿಸಿ ಹೇಳಲು, ಅವನು ನಮಗೆ ಆತನ ಬಾಲಲೀಲೆಗಳನ್ನು ಬಹಳಷ್ಟು ನೀಡಿದ್ದಾನೆ, ಆ ಮೂಲಕ ಆತನಲ್ಲಿ ಮಕ್ಕಳಿಗೆ ಭಕ್ತಿಭಾವ ಉಕ್ಕುವಂತೆ ಮಾಡಿದ್ದಾನೆ. ಕೃಷ್ಣನ ದಯಾಳುತನವನ್ನು ಮಕ್ಕಳು ಅರಿಯಲು ಅವನು ಅಘಾಸುರನಿಗೆ ಮುಕ್ತಿಯನ್ನು ಕರುಣಿಸಿ, ಪರಮ ಪದವನ್ನು ಅನುಗ್ರಹಿಸಿದ್ದು, ಪೂತನಾ ಳಿಗೂ ಅಂತಹುದೇ ಕರುಣೆಯನ್ನು ತೋರಿಸಿದುದು, ಇಂತಹ ಘಟನೆಗಳು ಮಕ್ಕಳಿಗೆ ಆತ್ಮ ದೇಹಗಳ ಸಂಬಂಧವನ್ನು ಸುಲಭವಾಗಿ ಅರಿಯಲು, ಅಸುರರನ್ನು ಕೊಲ್ಲುವಲ್ಲಿ ಕೃಷ್ಣನು ಕೃಪಾಸಿಂಧುವಾಗಿರುವುದನ್ನು ತಿಳಿಸುತ್ತದೆ.

ಮಕ್ಕಳ ವಯಸ್ಸು ಹೆಚ್ಚುತ್ತಾ ಕಂಡಂತೆ ಹೊಸ ಕಥೆಗಳನ್ನು ಅವರಿಗೆ ತಿಳಿಸಲು ಶ್ರೇಷ್ಠ ಭಕ್ತರಾದ ಆಳ್ವಾರರ ಮತ್ತು ಪಾಂಡುರಂಗನ ಅಸಂಖ್ಯಾತ ಭಕ್ತರ ವಿವರಗಳನ್ನು ಪಡೆದುಕೊಂಡು ಸಜ್ಜಾಗಿರಬೇಕು. ಈ ಮೂಲಕ ಮಕ್ಕಳು ಭಗವಂತನ ವಿಗ್ರಹ ಭಗವಂತನಿಂದ ಪ್ರತ್ಯೇಕವಲ್ಲವೆನ್ನುವ ದೃಢ ವಿಶ್ವಾಸವನ್ನು ಹೊಂದುತ್ತಾರೆ. ಇಸ್ಕಾನ್ ದೇಗುಲಗಳಲ್ಲಿರುವ ಭಗವಂತನ ವಿಗ್ರಹಗಳ, ಮಾಯಾಪುರದಲ್ಲಿರುವ ನರಸಿಂಹ ಮತ್ತು ಜಗನ್ನಾಥನ ವಿಗ್ರಹಗಳು, ಪುರುಷೋತ್ತಮನ ಬಾಲಲೀಲೆಗಳನ್ನು ನಾವು ಅರಿಯಲು ಮತ್ತು ಆತನು ನಮ್ಮಿಂದ ಎಂದೂ ದೂರವಿಲ್ಲವೆನ್ನುವುದನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗುತ್ತವೆ. ಅವನ ಬಾಲಲೀಲೆಗಳನ್ನು ಭಕ್ತರೊಂದಿಗೆ ಪೂರ್ವಕಾಲಕ್ಕೆ ಸಂಬಂಧಿಸಿದುದಲ್ಲಿ ಆದರೆ ಪ್ರತಿದಿನದ ವಾಸ್ತವವೆನ್ನುವುದನ್ನು ಮನಗಾಣ ಬಹುದು.

ಒಮ್ಮೆ ಮಕ್ಕಳು ಕಥೆಗಳನ್ನು ಕೇಳುವ ಅಭ್ಯಾಸವನ್ನು ಬಳಿಸಿಕೊಂಡರೆ, ನೈತಿಕ ಮೌಲ್ಯಗಳನ್ನು ಕಥೆಗಳ ಮೂಲಕ ತಿಳಿಸುವ ಅಥವಾ ಅವರಲ್ಲೂ ಅಗತ್ಯವಾದ ಸದ್ಗುಣಗಳನ್ನು ಬೆಳೆಸಲು ಸುಲಭವಾಗುತ್ತದೆ. ಅಗತ್ಯಕ್ಕನುಸಾರವಾಗಿ ನಾವು ಕಥೆಗಳನ್ನು ನಿರೂಪಿಸಬಹುದು, ಕಟ್ಟಬಹುದು, ಆ ಮೂಲಕ ಸದ್ಗುಣಗಳನ್ನು ಬೆಳೆಸಬಹುದು.

ಉದಾಹರಣೆಗೆ ಈ ಸರಳ ಕಥೆಯೊಂದನ್ನು ನೋಡಿ;

ಸುಮುಖಿ ಮತ್ತು ದುರ್ಮುಖಿ ಈರ್ವರು ಸಹೋದರಿಯ ಸುಮುಖಿ ವಿಧೇಯಳು, ಆದರೆ ದುರ್ಮುಖಿ ಹಟಮಾರಿ ಹಾಗು ಸ್ವಾತಂತ್ರ ನಡತೆಯವಳು. ಒಮ್ಮೆ ಅವರ ತಂದೆ ಪಟ್ಟಣದಿಂದ ಹೊರಹೋಗಬೇಕಾಯಿತು. ಆಗ ದುರ್ಮುಖಿ ಆತನೊಂದಿಗೆ ತಾನು ಹೊರಗೆ ಪ್ರಯಾಣ ಮಾಡುವುದಾಗಿ ಒತ್ತಾಯಿಸಿದಳು. ಆಗ ಅವಳ ತಾಯಿಯು ತಂದೆ ಹೊರಗೆ ಹೋಗುತ್ತಿರುವುದು ಸಭೆಗಳಲ್ಲಿ ಭಾಗವಹಿಸುವುದ್ದಕ್ಕಾಗಿ ಹಾಗೂ ಅದರಿಂದ

ಅವಳ ರಕ್ಷಣೆ ಬಗ್ಗೆ ಅವರಿಗೆ ಗಮನ ಹರಿಸಲಾಗುವುದಿಲ್ಲವೆಂದು ತಿಳಿಸಿದಳು ಮತ್ತು ಹೋಟೇಲಿನ ಕೊಠಡಿಯಲ್ಲಿ ನೀನು ಒಬ್ಬಳೇ ಇರಬೇಕಾಗುತ್ತದೆಂದು ತಿಳಿಸಿದಳು. ದುರ್ಮುಖಿ ತಾಯಿಯ ಮಾತನ್ನು ಮನ್ನಿಸದೆ ಹೊರಟಳು . ತಂದೆಯು ಅವಳು ಕಠಿಣವಾದ ಪಾಠವೊಂದನ್ನು ಕಲಿಯಬೇಕೆಂದು ಅವಳನ್ನು ಜೊತೆಯಲ್ಲಿ ಕರೆದುಕೊಂಡು ಹೋದರು. ಅವರು ತಮ್ಮ ಕಾರ್ಯಾಲಯದ ಕಾರ್ಯಗಳಲ್ಲಿ ತೊಡಗಬೇಕಾದುದರಿಂದ ದುರ್ಮುಖಿಯನ್ನು ಹೋಟೆಲಿನ ಅವರ ಕೊಠಡಿಯಲ್ಲಿ ಬಿಟ್ಟು ಹೊರಟರು ಮತ್ತು ಊಟದ ಸಂಧರ್ಭದಲ್ಲಿ ಮಾತ್ರ ಅವಳೊಂದಿಗಿರುತ್ತಿದ್ದರು. ದುರ್ಮುಖಿಯು ಇದರಿಂದ ಪೂರ್ತಿಯಾಗಿ ಬೇಸತ್ತಳು. ಅದೇ ಸಮಯದಲ್ಲಿ ಸುಮುಖಿಯು ಮನೆಯಲ್ಲಿಯೇ ಇದ್ದುದ್ದರಿಂದ ಅವಳ ಚಿಕ್ಕಪ್ಪ ಮನೆಗೆ ಬಂದುದರಿಂದ ಅವರು ತಮ್ಮ ಮಕ್ಕಳೊಂದಿಗೆ ಸುಮುಖಿಯನ್ನು ನಗರದಲ್ಲಿ ಸುತ್ತಾಡಲು ಕರೆದೊಯ್ದರು. ಅವರಿಗೆ ಅದೊಂದು ಉತ್ತಮವಾದ ಸಮಯವಾಗಿತ್ತು. ದುರ್ಮುಖಿಯು ಮನೆಗೆ ಹಿಂದಿರುಗಿದಾಗ ಅವಳು ತಾನು ತನ್ನ ಚಿಕ್ಕಪ್ಪನೊಂದಿಗೆ ನಗರದಲ್ಲಿ ಸುತ್ತಾಡುವ ಸುವರ್ಣವಕಾಶವನ್ನು ಕಳೆದುಕೊಂಡುದಲ್ಲದೆ, ಒಂಟಿಯಾಗಿ ಹೋಟೆಲಿನಲ್ಲಿ ಕಳೆದ ಬೇಸರದ ಸಮಯವನ್ನು ಸ್ಮರಿಸಿ ದುಃಖಿತಳಾದಳು. ಇನ್ನು ಮುಂದೆ ತಂದೆ ತಾಯಿಯರ ಮಾತನ್ನು ಕೇಳುವುದಾಗಿ ಆಗಲೇ ಆಕೆ ಪ್ರತಿಜ್ಞೆ ಮಾಡಿದಳು. ಈ ಕಥೆ ತಂದೆತಾಯಂದಿರ ಮಾತನ್ನು ಕೇಳದ ಮಕ್ಕಳ ಪರಿತಾಪವನ್ನು ವಿವರಿಸುತ್ತದೆ ಮತ್ತು ವಿಧೇಯರಾದ ಮಕ್ಕಳು ಪಡೆದುಕೊಳ್ಳುವ ಸುಯೋಗವನ್ನು ತಿಳಿಸುತ್ತದೆ. ಒಂದು ಗಂಟೆಯ ಉಪನ್ಯಾಸವನ್ನು ನೀರವವಾಗಿ ಆಲಿಸುವುದಕ್ಕಿಂತ ಮಕ್ಕಳಿಗೆ ಇಂತಹ ಸಣ್ಣ ಕಥೆಗಳು ಅವರಲ್ಲಿ ಮಾನಸಿಕ ಮಾರ್ಪಾಡನ್ನು ತರುತ್ತದೆ. ಪೋಷಕರು ಕಥೆಗಳನ್ನು ಕಟ್ಟುವ ಕ್ರಿಯಾತ್ಮಕ ಚಟುವಟಿಕೆಗಳತ್ತ, ಮಕ್ಕಳ ಶಿಸ್ತು ಕಾಯ್ದುಕೊಳ್ಳುವಲ್ಲಿ, ಮತ್ತು ಅವರ ಬೇಡಿಕೆಗಳು ಉದಾತ್ತವಾಗಿರುವತ್ತ ಗಮನ ಹರಿಸಬೇಕು. ನಾವು ದೇವಾಲಯಗಳನ್ನು ಸಂದರ್ಶಿಸುವುದಕ್ಕೆ ಸಂಬಂಧಿಸಿದ ಅತ್ಯುತ್ತಮವಾದ ಉದಾಹರಣೆಯೊಂದು ಇಲ್ಲಿದೆ.

ಪಬ್ಲಿ ಮತ್ತು ಪುದುಲಿ ಸೋದರರು ಒಮ್ಮೆ ತಮ್ಮ ತಂದೆತಾಯಿಯ ಜೊತೆ ದೇವಾಲಯಕ್ಕೆ ಹೋಗಿದ್ದಾಗ ನಾಲ್ಕು ವರ್ಷದ ಪುದುಲಿ ತನಗೆ ದೇವಾಲಯದ ಅಂಗಡಿಯಿಂದ ವಸ್ತುವೊಂದನ್ನು ಕೊಡಿಸುವಂತೆ ಒತ್ತಾಯಿಸುತ್ತಾನೆ. ತಂದೆಯು ಅವನನ್ನು ಆರತಿಯಾದ ನಂತರ ಅಂಗಡಿಗೆ ಕರೆದುಕೊಂಡು ಹೋಗುವುದಾಗಿ ಹೇಳುತ್ತಾನೆ. ಆದರೆ, ಪುದುಲಿ ಆರತಿಗೆ ಮೊದಲೇ ಅಂಗಡಿಗೆ ಹೋಗುವುದಕ್ಕೆ ಪ್ರಯತ್ನಿಸುತ್ತಾನೆ. ಅವನು ಮಾಡುತ್ತಿದ್ದ ಗಲಾಟೆಯಿಂದ ಅವನನ್ನು ತಂದೆ ಹೊರಗೆ ಕರೆದುಕೊಂಡು ಹೋಗಬೇಕಾಗುತ್ತದೆ. ಅವರು ಮರಳಿ ಬರುವ ವೇಳೆಗೆ ಆರತಿ ಮುಗಿದಿರುತ್ತದೆ. ಮತ್ತು ಪಬ್ಲಿ ಕೈ ತೊಳೆಯುತ್ತಿರುತ್ತಾನೆ, ಅವನ ಬಳಿ ಬಂದ ಪುದುಲಿ ಅವನು ಏನನ್ನು ತಿಂದನೆಂದು ವಿಚಾರಿಸುತ್ತಾನೆ. ಪೂಜಾರಿಯು ಎಲ್ಲಾ ಭಕ್ತರಿಗೂ ರುಚಿಕರವಾದ ಪ್ರಸಾದವನ್ನು ವಿತರಿಸಿದರೆಂದು ಪಬ್ಲಿ ಹೇಳುತ್ತಾನೆ. ಅವನ ಕೈ ಯಿಂದ ಅದು ಸೋರಿ ಹೋಗುತ್ತಿದ್ದ ಕಾರಣ ಅದನ್ನು ಅವನು ಪೂರ್ಣವಾಗಿ ತಿಂದನೆಂದೂ ತನ್ನ ಸಹೋದರನಿಗೆ ಉಳಿಸಲಾಗಲಿಲ್ಲವೆಂದು ತಿಳಿಸುತ್ತಾನೆ. ಪುದುಲಿಯು ತನ್ನ ಅತ್ಯಂತ ಪ್ರಿಯವಾದ ಪ್ರಸಾದವನ್ನು ಕಳೆದುಕೊಂಡುದುದಕ್ಕೆ ವಿಷಾದಿಸುತ್ತಾನೆ. ತಂದೆಯು ಮಗನಿಗೆ ತನ್ನ ಮಾತನ್ನು ಕೇಳಿ ಆರತಿಯ ನಂತರ ಅಂಗಡಿಗೆ ಹೋಗಬಹುದಿತ್ತೆಂದು ಹೇಳುತ್ತಾನೆ. ಪುದುಲಿಯು ಇನ್ನು ಮುಂದೆ ಆಲಯದಲ್ಲಿ ಆರತಿ ಮುಗಿಯುವವರೆಗೆ ಕಾಯುವುದಾಗಿ ಮತ್ತು ಆರತಿಗೆ ಮೊದಲು ಆಲಯದಿಂದ ಹೊರಗೆ ಹೋಗುವುದಿಲ್ಲವೆಂದು ತೀರ್ಮಾನಿಸುತ್ತಾನೆ.

ನಿದ್ರಿಸುವುದಕ್ಕೆ ಮುನ್ನ ಮಕ್ಕಳಿಗೆ ಕೃಷ್ಣನ ಕಥೆಗಳನ್ನು ಹೇಳುವುದರಿಂದ ಮಕ್ಕಳು ನಿದ್ರೆಯಲ್ಲಿಯೂ ಕೃಷ್ಣಪ್ರಜ್ಞೆಯಲ್ಲಿರುವಂತೆ ಮಾಡಬಹುದು ಹಾಗು ಮುಂಜಾನೆ ಮಕ್ಕಳು ತಮಗೆ ವಿಚಿತ್ರವಾದ ಕನಸುಗಳು ಬಿದ್ದು ಅಲ್ಲಿ ಕೃಷ್ಣನ ದರ್ಶನ ಪಡೆದುದನ್ನು ಕೇಳಬಹುದು. ಈ ದಿನ ಬೆಳಿಗ್ಗೆ ನನ್ನ ಮಗ ನಿತಾಯ್ ಹೇಳಿದ, "ಬಾತುಕೋಳಿಯೊಂದು ತನ್ನ ಮಂಡಿ ಮತ್ತು ಪಾದಗಳಲ್ಲಿ ಗಾಯಗೊಂಡಿತ್ತು. ಅದನ್ನು ತೂಗುಯ್ಯಾಲೆಯಲ್ಲಿ ಕೂರಿಸಿದ, ಮತ್ತೊಂದು ತೂಗುಯ್ಯಾಲೆಯಲ್ಲಿ ರಾಮ ಮಲಗಿದ್ದ . ರಾಮನೇ ವಿಷ್ಣುವಲ್ಲವೇ ? ಆದುದರಿಂದ ತಾನಿದ್ದಲ್ಲಿಂದ ತನ್ನ ಕೈ ನಿಂದ (ಎರಡನೆಯ ಕೈ ಯನ್ನು ಎದೆಯ ಬಲಭಾಗದಲ್ಲಿ–ರಿಸಿಕೊಂಡಂತೆ ತೋರಿಸುತ್ತೆ) ಅವನು ಬಾತುಕೋಳಿಯನ್ನು ತೂಗುತ್ತಿದ್ದ." ಎಂತಹ ಅತಿ ಮಾನುಷ ಸ್ವಪ್ನ! ಆದರೆ ರಾಮನನ್ನು ಸ್ವಪ್ನದಲ್ಲೂ ಕಾಣುವ ಆನಂದ ನಮ್ಮನ್ನು ಇಡಿ ದಿನ ಚೇತೋಹಾರಿಯನ್ನಾಗಿರಿಸಿತು. ಮತ್ತು ಭಗವಂತನು ಎಲ್ಲ ಪ್ರಾಣಿಗಳಲ್ಲೂ ಪ್ರೀತಿಯನ್ನು ತೋರಿಸುತ್ತನೆನ್ನುವ ಆಲೋಚನೆ ಸಂತೋಷ ಪಡಿಸುತ್ತದೆ.


*(ತಾರಿಣಿ ರಾಧಾ ದೇವಿದಾಸಿಯವರು ಜಯಪತಾಕಸ್ವಾಮಿಯವರ ಶಿಷ್ಯೆ. ಆಕೆಯು ನಾಲ್ಕು ಮಕ್ಕಳ ತಾಯಿ, ಆಕೆಯು ಚೆನ್ನೈನಲ್ಲಿ ಮಕ್ಕಳ ಕಾರ್ಯಕ್ರಮದಲ್ಲಿ ಸಹಯೋಜಿಕೆಯಾಗಿ ಕಾರ್ಯನಿರ್ವಹಿಸುತ್ತರೆ.)*

# ಶ್ರೀಲ ಪ್ರಭುಪಾದ ಲೀಲಾಮೃತ

**ಹಿಂದಿನ ಸಂಚಿಕೆಯಿಂದ.....**

ಶ್ರೀಮತಿ ಬೋಟೆಲಳನ್ನು (ಆಕೆಗೆ ವಿನೋದವಾಣೀದಾಸಿ ಎಂದು ಹೆಸರು ಕೊಡಲಾಗಿತ್ತು) ತಾವು ಸಂದರ್ಶಿಸಬೇಕೆ ಎಂದು ಕೇಳಿ ಯಮುನಾ ಪ್ರಭುಪಾದರಿಗೆ ಬರೆದಿದ್ದಳು. ಪ್ರಭುಪಾದರು, "ಈ ವಾಣೀದಾಸಿಯ ಕತೆಯೆಂದರೆ ಆಕೆ ವಯಸ್ಸಾದವಳು, ಆಕೆಗೊಂದು ಮನೆಯಿದೆ ಮತ್ತು ಮನೆಯ ಮುಂದೆ ಗೌಡೀಯ ಮಠ ಎಂದು ಫಲಕ ಹಾಕಿದ್ದಾಳೆ, ಇಷ್ಟೆ." ಎಂದು ಉತ್ತರ ಬರೆದ್ದಿದ್ದರು. ಭಕ್ತರು ಅಪೇಕ್ಷೆ ಪಟ್ಟರೆ ಸೌಜನ್ಯಕ್ಕಾಗಿ ಆಕೆಯ ಮನೆಗೆ ಹೋಗಿ ಅವಳ ಮನೆಯಲ್ಲಿ ಕೀರ್ತನೆಗಳನ್ನು ನಡೆಸಲು ಆಕೆ ಒಪ್ಪುವಳೇ ಎಂದು ತಿಳಿದುಕೊಳ್ಳಬೇಕೆಂದೂ ಬರೆದಿದ್ದರು. ಆಕೆಯ ಮನೆಗೆ ಹೋಗಲು ನಗರದಿಂದ ಹಲವು ಗಂಟೆಗಳ ಪ್ರಯಾಣ ಮಾಡಬೇಕಾಗಿತ್ತು. ಭಕ್ತರಲ್ಲಿ ಒಬ್ಬಾತ ಅಲ್ಲಿಗೆ ಹೋದ. ಆದರೆ ಮುಚ್ಚಿದ ಬಾಗಿಲಿಗೆ ಹಿಂದಿನಿಂದಲೇ ಮಾತನಾಡಿದ ಆಕೆ ಆತನು ಹೊಸದೆಹಲಿಯ ಗೌಡೀಯ ಮಠದಿಂದ ಪರಿಚಯ ಪತ್ರವನ್ನು ತಂದರೆ ಮಾತ್ರ ಅವನನ್ನು ನೋಡುವುದಾಗಿ ಹೇಳಿದಳು. ಮೂವತ್ತೈದು ವರ್ಷಗಳ ಕಾಲ ಇಂಗ್ಲೆಂಡಿನಲ್ಲಿ ಸನ್ಯಾಸಿಗಳು ಉಪದೇಶ ಮಾಡಿದ್ದರ ಫಲವೆಂದರೆ ಈ ವಿನೋದವಾಣೀ ದಾಸಿಯ ಪ್ರಕರಣ, ಆದರೆ ಪ್ರಭುಪಾದರ ತರುಣ ಅಮೆರಿಕನ್ ಧರ್ಮ ಪ್ರಚಾರಕರು ನಾಲ್ಕೇ ತಿಂಗಳಲ್ಲಿ ಲಂಡನ್ ನನ್ನು ಚಕಿತಗೊಳಿಸಿದ್ದರು.

ನಗರದಲ್ಲಿ ಹಲವು ತಿಂಗಳ ಕಾಲ ಬೇರೆ ಬೇರೆ ಭಾಗಗಳಲ್ಲಿ ವಾಸಮಾಡಿದ ನಂತರ ಅವರು ಒಟ್ಟಿಗೆ ವಾಸಮಾಡಲು ಅವಕಾಶ ಕೊಡುವ ಮನೆಯೊಡೆಯನೊಬ್ಬ ಸಿಕ್ಕ,



ಕೊವಂಟ್ ಗಾರ್ಡನ್ ಪ್ರದೇಶದಲ್ಲಿ ಖಾಲಿ ಇದ್ದ ತನ್ನ ಉಗ್ರಾಣವೊಂದರಲ್ಲಿ ಅವರು ಬಾಡಿಗೆಯನ್ನು ಕೊಡದೆ ವಾಸಿಸಬಹುದೆಂದು ಆತ ಒಪ್ಪಿದ. ಭಕ್ತರು ತಾವೇ ತಾತ್ಕಾಲಿಕ ಪೂಜಾಮಂದಿರವನ್ನು ನಿರ್ಮಿಸಿಕೊಂಡರು, ಸ್ವಲ್ಪ ಕಾಲದಲ್ಲೆ ಮೊದಲ ಮೂವರು ಬ್ರಿಟಿಷ್ ಭಕ್ತರನ್ನು ಸಂಪಾದಿಸಿದರು. ಹೊಸದಾಗಿ ಬಂದವರು, ಧೋತಿಯನ್ನು ಉಡುವುದು, ತಲೆಯ ಕೂದಲನ್ನು ತೆಗೆಸುವುದು ಸೇರಿದಂತೆ ಕೃಷ್ಣಪ್ರಜ್ಞೆಯ ಶಿಸ್ತನ್ನು ಸ್ವೀಕರಿಸಿದರು, ಅವರಿಗೆ ಅದು ಪ್ರಿಯವೂ ಆಯಿತು.

ತಮ್ಮ ಗುಂಪು ವಿಸ್ತಾರಗೊಂಡು ಪ್ರಭುಪಾದರ ಶಕ್ತಿ ಕಾರ್ಯ ಸಾಧಿಸುತ್ತಿರುವುದನ್ನು ಕಂಡ ಭಕ್ತರಿಗೆ ರೋಮಾಂಚನವಾಯಿತು. ತನ್ನ ಮನೆಯೊಡೆಯನ ಕಚೇರಿಯಿಂದ ಪ್ರಭುಪಾದರಿಗೆ ಟೆಲಿಫೋನ್ ಮಾಡಿದರು. ಅದೊಂದು ಸಭೆಗಳಲ್ಲಿ ಬಳಸುವ ಟೆಲಿಫೋನ್, ಮೇಜಿನ ಮೇಲಿನ ಸಣ್ಣ ಧ್ವನಿವರ್ಧಕದಲ್ಲಿ ಪ್ರಭುಪಾದರ ದನಿ ಕೇಳಿಸಿತು. ಭಕ್ತರು ಕಾತುರತೆಯಿಂದ ಮೈಯೆಲ್ಲ ಕಿವಿಯಾಗಿ ಕೇಳಿದರು.

"ಪ್ರಭುಪಾದರೆ, ಇಲ್ಲಿ ನಮ್ಮೊಡನೆ ಕೆಲವರು ಹೊಸ ಬ್ರಹ್ಮಚಾರಿಗಳಿದ್ದಾರೆ, "ಮುಕುಂದ ಹೇಳಿದರು.

ಸಮುದ್ರದಾಚೆಯಿಂದ ಪ್ರಭುಪಾದರು ಕೇಳಿದರು, "ಓ, ಅವರು ಚಪಾತಿಗಳನ್ನು ಮಾಡುತ್ತಿದ್ದಾರೇನು?" ಭಕ್ತರಿಗೆ ನಗುವನ್ನು ತಡೆಯಲಾಗಲಿಲ್ಲ. ಅನಂತರ ಇನ್ನಷ್ಟು ಮಾತನ್ನು ಕೇಳಲು ಸದ್ದಿಲ್ಲದೆ ಕುಳಿತರು.

"ಇಲ್ಲ, " ಮುಕುಂದ ಹೇಳಿದರು, "ಆದರೆ ಇನ್ನು ಮೇಲೆ ಮಾಡುತ್ತಾರೆ." ಭಕ್ತರಲ್ಲಿ ಪ್ರತಿಯೊಬ್ಬರೂ ಪ್ರಭುಪಾದರು ತಮ್ಮೊಡನೆ ಇಲ್ಲದಿರುವುದು ಹೇಗೆನ್ನಿಸುತ್ತದೆ ಎಂದು ಹೇಳಿದರು. ತಮಗೂ ಅವರೊಡನೆ ಇಲ್ಲದಿರುವುದು ಬೇಸರವಾಗಿದೆ ಎಂದೂ ಅವರಿಗೆ ಒಂದು ಸರಿಯಾದ ವಾಸಸ್ಥಳ ದೊರೆತ ಕೂಡಲೆ ತಾವು ಬರುವುದಾಗಿಯೂ ಪ್ರಭುಪಾದರು ಹೇಳಿದರು.

ಕೊವೆಂಟ್ ಗಾರ್ಡ ನಿನ ಉಗ್ರಾಣದಲ್ಲಿ ಮೂರು ತಿಂಗಳ ಕಾಲ ಅವರು ಇರಲು ಅವಕಾಶ ಕೊಟ್ಟು ಅನಂತರ ಮಾಲೀಕನು ತನಗೆ ಆ ಸ್ಥಳವು ಅಗತ್ಯವಾಗಿದೆ ಎಂದೂ ಅವರು ಬೇರೆ ಕಡೆಗೆ ಹೋಗಬೇಕೆಂದೂ ತಿಳಿಸಿದ. ಮೂರು ಜೋಡಿಗಳು ಮೂರು ಬೇರೆ ಬೇರೆ ಸ್ಥಳಗಳಿಗೆ ಹೋಗಬೇಕಾಯಿತು, ಅವರ ಗುಂಪಿನ ಉತ್ಸಾಹ ಕರಗಿಹೋಯಿತು.

ಪ್ರಭುಪಾದರು ಚೆದುರಿಹೋಗಿದ್ದ ಜೋಡಿಗಳಿಗೆ, ಅವರ ಶ್ರದ್ಧಾವಂತ ಸಂಕಲ್ಪವನ್ನು ಪ್ರಶಂಸಿಸಿ ವಾರಕ್ಕೆ ಎರಡು ಮೂರು ಕಾಗದಗಳನ್ನು ಬರೆಯಲು

ಪ್ರಾರಂಭಿಸಿದರು. ಬೇರಾವ ಕೆಲಸವಿಲ್ಲದಿದ್ದರೂ ತಮಗೆ ಬಂದ ಇತ್ತೀಚಿನ ಪತ್ರಗಳನ್ನು ಒಬ್ಬ–ರಿಗೊಬ್ಬರು ತೋರಿಸುವುದಕ್ಕಾಗಿಯಾದರೂ ಭಕ್ತರು ಆಗಾಗ ಒಂದೆಡೆ ಸೇರುತ್ತಿದ್ದರು. ಪ್ರಭುಪಾದರು, ಪಶ್ಚಿಮ ದೇಶಗಳಲ್ಲಿ, ಖಚಿತವಾಗಿ ಲಂಡನ್ನಿನಲ್ಲಿ, ಕೃಷ್ಣಪ್ರಜ್ಞೆಯನ್ನು ಉಪದೇಶ ಮಾಡುವ ತಮ್ಮ ಬಯಕೆಯ ಬಗ್ಗೆ ಮುಕುಂದರಿಗೆ ಬರೆದರು.

"ನನ್ನ ಮಟ್ಟಿಗೆ ಹೇಳುವುದಾದರೆ, ಜಗತ್ತಿನ ಪಶ್ಚಿಮ ಭಾಗದಲ್ಲಿ ಕೃಷ್ಣಪ್ರಜ್ಞೆಯನ್ನು ಹಬ್ಬಿಸುವ ನನ್ನ ಬದುಕಿನ ಮಹತ್ಕಾರ್ಯವನ್ನು ತ್ವರಿತಗೊಳಿಸುವುದೊಂದೇ ನನ್ನ ಬಯಕೆ. ಈಗ ನನ್ನ ಜೊತೆಗೆ ಸೇರಿಕೊಂಡಿರುವ ಎಲ್ಲ ಹುಡುಗ ಹುಡುಗಿಯರ ನೆರವಿನಿಂದ ನಾನು ಈ ಚಳವಳಿಯನ್ನು ಸ್ಥಾಪಿಸಬಲ್ಲೆನಾದರೆ ಅದೊಂದು ಮಹತ್ವದ ಸಾಧನೆ ಎಂದು ನನ್ನ ಧೃಡ ನಂಬಿಕೆ. ನನಗೆ ವಯಸ್ಸಾಯಿತು, ಆಗಲೇ ಎಚ್ಚರಿಕೆಯೂ ಬಂದಿದೆ, ಆದರೆ ಈ ದೇಹವನ್ನು ಬಿಡುವ ಮುನ್ನ ನಿಮ್ಮಲ್ಲಿ ಕೆಲವರು ಕೃಷ್ಣಪ್ರಜ್ಞೆಯ ಅರಿವನ್ನು ಧೃಡವಾಗಿ ಬೆಳೆಸಿಕೊಳ್ಳುವುದನ್ನು ಕಾಣಬೇಕೆಂದು ನನ್ನ ಆಸೆ. ಲಂಡನ್ನಿನಲ್ಲಿ ಒಳ್ಳೆಯ ಕೇಂದ್ರವೊಂದನ್ನು ಸ್ಥಾಪಿಸಲು ಸಾಧ್ಯವಾಗದಿದ್ದರೂ ನೀವೂ ಆರು ಮಂದಿ ಹುಡುಗ ಹುಡುಗಿಯರು ನಿಮ್ಮಿಂದಾದುದನ್ನೆಲ್ಲ ಮಾಡಿದ್ದೀರಿ ಎಂದು ನನಗೆ ಬಹು ಸಂತೋಷ ಮತ್ತು ಹೆಮ್ಮೆ. ಕೃಷ್ಣಪ್ರಜ್ಞೆಯ ಕೆಲಸವನ್ನು ನನ್ನ ಶಿಷ್ಯರು ಬಹು ಚೆನ್ನಾಗಿ ಮಾಡುತ್ತಿದ್ದಾರೆ ಎಂಬ ಸುದ್ದಿ ದೂರದ ಭಾರತಕ್ಕೂ ತಲುಪಿದೆ. ಅದೇ ನನಗೆ ಹೆಮ್ಮೆ. ವಿಯೆಟ್ನಾಮಿನಲ್ಲಿಯೂ ಯಾರೋ ಹರೇಕೃಷ್ಣ ಚಳವಳಿಯನ್ನು ಹರಡುತ್ತಿದ್ದಾರೆ ಎಂದು ಭಾರತದಲ್ಲಿ ಜಾಹೀರಾತಾಗಿದೆ ಎಂದು ನನ್ನ ದೇವ ಸಹೋದರನಿಂದ ಕಾಗದ ಬಂದಿದೆ. ಆದುದರಿಂದ ನಿರಾಶೆ ಪಡಲು ಏನೂ ಕಾರಣವಿಲ್ಲ. ಕೃಷ್ಣನು ಒಳ್ಳೆಯ ಅವಕಾಶವನ್ನು ಅನುಗ್ರಹಿಸಿದಷ್ಟು ಕೆಲಸವನ್ನು ಮಾಡುತ್ತ ಹೋಗಿ, ನೀವು ಆತಂಕ ಪಡಲು ಕಾರಣವೇ ಇಲ್ಲ. ಎಲ್ಲವೂ ನಿರಾತಂಕವಾಗಿ ಮುಂದುವರೆಯುತ್ತಿದೆ. ಆದರೆ ನೀವೀಗ ಚೆದುರಿಹೋಗಿರುವುದರಿಂದ ನಿಮ್ಮ ಚಟುವಟಿಕೆಗಳು ಸ್ವಲ್ಪ ಬಲ ಕುಂದಿದಂತೆ ಕಾಣುತ್ತದೆ. ಹಿಂದಿನಷ್ಟೇ ಉತ್ಸಾಹದಿಂದ ಈಗಲೂ ಸೇರಲು ಪ್ರಯತ್ನಿಸಿ ಆಗ, ದೇವಾಲಯ ಆಗಲಿ ಆಗದಿರಲಿ, ನಿಮ್ಮ ಚಳವಳಿ ಮುಂದುವರೆಯುತ್ತದೆ. ದೇವಾಲಯದ ವಿಷಯ ನಾವು ವಿಶೇಷವಾಗಿ ತಲೆಗೆ ಹಚ್ಚಿಕೊಳ್ಳುವುದು ಬೇಡ. ಏಕೆಂದರೆ ಈ ಯುಗದಲ್ಲಿ ದೇವಾಲಯದಲ್ಲಿ ಆರಾಧನೆಯು ಮುಖ್ಯವಾದ ಅಂಶವೇ ಅಲ್ಲ. ಮುಖ್ಯವಾದದ್ದು ಸಂಕೀರ್ತನೆ. ಆದರೆ ಒಮ್ಮೊಮ್ಮೆ ಜನರು ಸೇರಿ ವೀಕ್ಷಿಸಲು ಒಂದು ಕೇಂದ್ರವು ಬೇಕಾಗುತ್ತದೆ, ಆದುದರಿಂದ ದೇವಾಲಯವು ಅಗತ್ಯ, ಆದರೆ ಅದಕ್ಕೆ ಎರಡನೆಯ ಸ್ಥಾನ. ಆದ್ದರಿಂದ ಆದಷ್ಟು ಬೇಗ ಒಟ್ಟಿಗೆ ವಾಸಿಸಲು ಪ್ರಯತ್ನಿಸಿ. ನೀವೆಲ್ಲ ಮತ್ತೆ ಒಂದೇ ಕಡೆ ವಾಸಿಸುವುದನ್ನು ನೋಡಲು ನಾನು ಬಹಳ ಕಾತರನಾಗಿದ್ದೇನೆ."

ಶ್ರೀಲ ಪ್ರಭುಪಾದರ ಶಿಷ್ಯರಿಗೆ, ಅವರು ಲಂಡನ್ನಿನಲ್ಲಿ ಉಪದೇಶವನ್ನು ಕೈಗೊಳ್ಳಬೇಕೆಂದು ಆದೇಶ ಬೇರೆಲ್ಲ ಕರ್ತವ್ಯಗಳಿಗಿಂತ ಕಡ್ಡಾಯವಾಗಿತ್ತು. ಅವರು ಶಿಷ್ಯರ ಹೃದಯಗಳಲ್ಲಿ ನೆಲಸಿದ್ದುದು, ಮತ್ತೆ ಮತ್ತೆ ಶಿಷ್ಯರು ಅವರನ್ನು ಕುರಿತು ಯೋಚಿಸುತ್ತಿದ್ದರು. ಅವರ ಅಪ್ಪಣೆಗಳನ್ನು ಪರಿಪಾಲಿಸಿ ಅವರನ್ನು ಪ್ರಸನ್ನಗೊಳಿಸುವ ಅವರ ಪ್ರಯತ್ನಕ್ಕೆ ಮೂಲ ಪ್ರಭಾವ ಶಕ್ತಿಯೂ ಅಲ್ಲ, ಕಾನೂನೂ ಅಲ್ಲ, ಆದ–'ರೆ ಪ್ರೀತಿ. ಗುರುವನ್ನು ಪ್ರಸನ್ನಗೊಳಿಸಿದರೆ ಪರಮ ಪುರುಷನು ಪ್ರಸನ್ನನಾಗುತ್ತಾನೆ; ಪ್ರಭುಪಾದರ ಶ್ರದ್ಧಾವಂತ ಶಿಷ್ಯರಿಗೆ ಅವರನ್ನು ಪ್ರಸನ್ನಗೊಳಿಸುವುದೇ ಗುರಿ ಎನ್ನಿಸಿತ್ತು.

***ಲಾಸ್ ಎಂಜಲೀಸ್ :– ಜೂನ್ 23, 1969***

ನವವೃಂದಾವನದಿಂದ ಹೊರಟ ಪ್ರಭುಪಾದರು ಲಾಸ್ ಎಂಜಲೀಸ್‌ನ ಕೇಂದ್ರಕ್ಕೆ ಭೇಟಿ ಕೊಟ್ಟರು, ಅಲ್ಲಿ ರಾಧೆ ಮತ್ತು ಕೃಷ್ಣನ ವಿಗ್ರಹಗಳನ್ನು ಪ್ರತಿಷ್ಠಾಪಿಸಿದರು. ಅವರು ಲಂಡನ್ನಿನ ತಮ್ಮ ಶಿಷ್ಯರಿಗೆ ಹೇಳಿದಂತೆ ಸಂಕೀರ್ತನೆಯೇ ಮುಖ್ಯವಾಗಿದ್ದರೂ ಮೂರ್ತಿಪೂಜೆಯೂ ಅಗತ್ಯವಾಗಿತ್ತು. ಪ್ರಭುಪಾದರು ತಮ್ಮ ಬರಹಗಳಲ್ಲಿ ಮೂರ್ತಿಪೂಜೆಯ ಅಗತ್ಯವನ್ನು ಚರ್ಚಿಸಿದ್ದರು, ತಮ್ಮ ಪ್ರತಿಯೊಂದು ಇಸ್ಕಾನ್ ಕೇಂದ್ರದಲ್ಲಿ ಕ್ರಮಕ್ರಮವಾಗಿ ಉನ್ನತಮಟ್ಟದ ಮೂರ್ತಿಪೂಜೆಯನ್ನು ಅಳವಡಿಸಿದ್ದರು. ಲಾಸ್ ಎಂಜಲೀಸ್ ನ ಕೇಂದ್ರವು ಮಾದರಿ ಕೇಂದ್ರವಾಗಿ ರೂಪಗೊಂಡಿದ್ದರಿಂದ ಇನ್ನೂ ಶ್ರೀಮಂತವಾದ ಮತ್ತು ಶ್ರಮಸಾಧ್ಯವಾದ ಮಟ್ಟದ ರಾಧೆ ಮತ್ತು ಕೃಷ್ಣರ ಪೂಜೆಯನ್ನು ಅಳವಡಿಸಲು ಅದೇ ಯೋಗ್ಯವಾದ ಸ್ಥಳವಾಯಿತು. ಆ ವಿಶಾಲವಾದ ಮಂದಿರದಲ್ಲಿ ಒಂದು ನೂರಕ್ಕಿಂತಲೂ ಹೆಚ್ಚು ಮಂದಿ ಭಕ್ತರು ನೆರೆದಿದ್ದರು. ಪ್ರಭುಪಾದರು ಅಭಿಷೇಕ ಮಾಡಿ ರಾಧೆ ಮತ್ತು ಕೃಷ್ಣರ ಪುಟ್ಟ ವಿಗ್ರಹಗಳನ್ನು ಶೃಂಗರಿಸಿ ಪೂಜಾಸ್ಥಳದಲ್ಲಿ–ರಿಸಿದರು. ತಮ್ಮ ಭಕ್ತರು ರಾಧೆ ಮತ್ತು ಕೃಷ್ಣನ ಸೇವೆ ಮಾಡಲು ಅವಕಾಶ ದೊರೆಯುವಂತೆ ಇಳಿದು ಬರಬೇಕೆಂದು ಅವರ ಆವಾಹನೆ ಮಾಡುತ್ತಿದ್ದರು. ತಮ್ಮ ಶಿಷ್ಯರು ಅವರನ್ನು ಅಲಕ್ಷಿಸುವುದಿಲ್ಲ ಎನ್ನುವ ವಿಶ್ವಾಸದಿಂದ ಅವರಿಗೆ ರಾಧೆ ಮತ್ತು ಕೃಷ್ಣರನ್ನು ಬರಮಾಡಿಕೊಡುತ್ತಿದ್ದರು. ತಮ್ಮ ಉಪನ್ಯಾಸದಲ್ಲಿ ಪ್ರಭುಪಾದರು, ತಮ್ಮ ಶಿಷ್ಯರು ಯಾವುದೇ ಕಾರಣದಿಂದ ತಮ್ಮ ಉತ್ಸಾಹವನ್ನು ಕಳೆದುಕೊಂಡು ಬಿಟ್ಟರೆ ಅವರು ಸಲ್ಲಿಸುವ ಪೂಜೆಯು ನಿರ್ಜೀವ ವಿಗ್ರಹದ ಆರಾಧನೆಯಂತೆಯೇ ಎಂದು ವಿವರಿಸಿದರು. **ಮುಂದುವರೆಯುವುದು........**

# ಒಬ್ಬ ನಾಯಕನ ಅರ್ಹತೆಗಳು

## ಇಸ್ಕಾನಿನ ಸಂಸ್ಥಾಪಕಾಚಾರ್ಯರಾದ ಪರಮಪೂಜ್ಯ ಭಕ್ತಿವೇದಾಂತಸ್ವಾಮಿ ಶ್ರೀಲ ಪ್ರಭುಪಾದರ ಸಂಭಾಷಣೆ, ಮಾರ್ಚ್ 1, 2010



(ಈ ಕೆಳಗಿನ ಸಂಭಾಷಣೆಯು ಪರಮ ಪೂಜ್ಯ, ಕೃಷ್ಣ ಕೃಪಾ, ಶ್ರೀಮುರ್ತಿ ಶ್ರೀಲ ಎ.ಸಿ.ಭಕ್ತಿವೇದಾಂತ ಸ್ವಾಮಿ ಪ್ರಭುಪಾದರ ಹಾಗೂ ಅವರ ಕೆಲ ಶಿಷ್ಯರಗಳ ನಡುವೆ, ಕ್ಯಾಲಿಫೋರ್ನಿಯಾದ(ಯು.ಎಸ್.ಎ) ವೆನಿಸ್ ಸಮುದ್ರದಡದಲ್ಲಿ, 1973 ರ ಡಿಸಂಬರ್ ತಿಂಗಳ ಬೆಳಗಿನ ಜಾವದಲ್ಲಿ ನಡೆಯಿತು.)

**ಶಿಷ್ಯ** : ಶ್ರೀಲ ಪ್ರಭುಪಾದರೆ, ದೈವೀ ನಿಯಮಗಳು ಬಹಳ ಶಕ್ತಿಯುತವಾದದ್ದಾದರೂ, ಕೆಲವೊಮ್ಮೆ ನಾವು, ವ್ಯಾದಿ, ಮೃತ್ಯುಗಳಂತಹವುಗಳನ್ನು ಎಲ್ಲವನ್ನು ನಿಗ್ರಹಿಸುವ ಶ್ರೀ ಕೃಷ್ಣನಿಗೆ ಶರಣಾಗತರಾಗುವ ಮೂಲಕ ಜಯಿಸಬಹುದೆಂದು ವಾದಿಸುತ್ತೇವೆ. ಆದರೆ ಸಂದೇಹವಾದಿಗಳು, ಭಗವಂತನ ಸಹಾಯವಿಲ್ಲದೆಯೇ ನಾವೇ ಕ್ರಮೇಣವಾಗಿ ಈ ಜಗತ್ತಿನ ನಿಯಮಗಳನ್ನು ನಿಗ್ರಹಿಸಬಹುದೆಂಬುದಾಗಿ ಹೇಳುತ್ತಾರೆ.

**ಶ್ರೀಲ ಪ್ರಭುಪಾದರು** : ಇಲ್ಲ, ನಾವು ಜಗತ್ತಿನ ನಿಯಮಗಳನ್ನು ಬಲವಂತವಾಗಿಯಾದರೂ ಸಹ ಒಪ್ಪಿಕೊಳ್ಳಲೇ ಬೇಕು. ಅದು ಹೇಗೆ ತಾನೆ ಒಬ್ಬನು, ತಾನು ಜಗತ್ತಿನ ನಿಯಮಗಳನ್ನು ಜಯಿಸಿರುವುದಾಗಿ ಹೇಳಿಕೊಳ್ಳಬಲ್ಲ?

**ಶಿಷ್ಯ** : ವೈದ್ಯರು ಹಾಗೂ ಜೀವಶಾಸ್ತ್ರಜ್ಞರು ಬಹಳಷ್ಟು ರೋಗ ರುಜಿನಗಳನ್ನು ಜಯಿಸಿದ್ದಾರೆ.

**ಶ್ರೀಲಪ್ರಭುಪಾದರು** : ಆದರೂ, ಜನಗಳಿಗೀಗಲೂ ವ್ಯಾಧಿಗಳು ಬರುತ್ತಲೇ ಇವೆ. ವೈದ್ಯರುಗಳು ಹೇಗೆ ರೋಗಗಳನ್ನು ತಡೆಗಟ್ಟಿದ್ದಾರೆನ್ನುವಿರಿ?

**ಶಿಷ್ಯ** : ಉದಾಹರಣೆಗೆ, ಆಫ್ರಿಕಾ ಹಾಗೂ ಭಾರತ ದೇಶಗಳಲ್ಲಿ, ಎಲ್ಲರಿಗೂ ಸಿಡುಬಿನ ರೋಗ ತಡೆಗಟ್ಟಲು ಚುಚ್ಚುಮದ್ದನ್ನು ಕೊಡುತ್ತಿದ್ದಾರೆ, ಮತ್ತು ಸಾವಿರಾರು ಮಕ್ಕಳು ಸಾವನ್ನಪ್ಪುವುದನ್ನು ತಪ್ಪಿಸಿದ್ದಾರೆ.

**ಶ್ರೀಲ ಪ್ರಭುಪಾದರು** : ಆದರೆ ಆ ಮಕ್ಕಳು ಬೆಳೆದು ದೊಡ್ಡವರಾಗುತ್ತಾರೆ ಮತ್ತು ಮುಪ್ಪನ್ನಪ್ಪುತ್ತಾರೆ ಹಾಗು ಒಂದು ದಿನ ಸಾವನ್ನಪ್ಪಿಯೇ ತೀರುತ್ತಾರೆ. ಹಾಗಾದಾಗ ಸಾವನ್ನೇನೂ ತಡೆಹಿಡಿದಿಲ್ಲವಲ್ಲ. ಮತ್ತು ಆ ಮಕ್ಕಳ ಬಗ್ಗೆ ಅವರೇಕಷ್ಟು ಕಾಳಜಿವಹಿಸಬೇಕು? ಅವರಿಗೆ ಅತಿಯಾದ ಜನಸಂಖ್ಯೆ ಬೇಡ, ಹಾಗಿರುವಾಗ ತಾರ್ಕಿಕವಾಗಿ ವೈದ್ಯರುಗಳು ಅವರನ್ನು ಸಾಯಲು ಬಿಡಬೇಕಲ್ಲವೇ? ಆದರೆ ವೈದ್ಯರುಗಳೆಲ್ಲರೂ ತರ್ಕ ಬದ್ಧವಾಗಿ ಆಲೋಚಿಸಲಾಗದವರು. ಒಂದೆಡೆ ಅವರು ಮಕ್ಕಳ ಸಾವನ್ನು ತಡೆಯಬೇಕು ಮತ್ತು ಇನ್ನೊಂದೆಡೆ, ಗರ್ಭನಿರೋಧಕಗಳನ್ನು ಮತ್ತು ಬ್ರೂಣ ಹತ್ಯೆಯನ್ನು ಶಿಫಾರಸು ಮಾಡುತ್ತಾರೆ. ಏಕೆ? ಏತಕ್ಕಾಗಿ ಸಾಯಿಸುತ್ತಿದ್ದಾರೆ? ಜನಸಂಖ್ಯೆಯ ಹೆಚ್ಚಳವನ್ನು ನಿಯಂತ್ರಿಸಲು ಸಾಯಿಸುತ್ತಿದ್ದಾರೆ. ಜಗತ್ತಿನ ಇನ್ನೊಂದೆಡೆಯಲ್ಲಿ ಮಕ್ಕಳು ಈ ರೀತಿ ಸಾವನ್ನಪ್ಪುತ್ತಿರುವಾಗ, ಇಲ್ಲಿ ಮಕ್ಕಳನ್ನು ಉಳಿಸಿಕೊಳ್ಳುವ ಆಸಕ್ತಿ ಏಕೆ?

**ಶಿಷ್ಯ** : ಒಮ್ಮೆ ಮಗು ಹುಟ್ಟಿತೆಂದರೆ, ಅದನ್ನು ಉಳಿಸಿಕೊಳ್ಳಬೇಕು, ಆದರೆ, ಅದು ಇನ್ನೂ ಗರ್ಭದಲ್ಲಿರುವಾಗ ಅದನ್ನು ಸಾಯಿಸಬಹುದು. ಅವರು ಅದನ್ನು ಮನುಷ್ಯಾಕಾರವನ್ನು ಪಡೆದಿಲ್ಲವೆನ್ನುತ್ತಾರೆ.

**ಶ್ರೀಲ ಪ್ರಭುಪಾದರು** : ಆದರೆ, ಒಬ್ಬ ಹೆಂಗಸು ಗರ್ಭಿಣಿಯಾದೊಡನೆಯೇ ಅಲ್ಲಿ ಮಗು ಹುಟ್ಟಿದೆ ಎಂದರ್ಥ. ಗರ್ಭ ಧಾರಣೆ ಎಂದರೆ ಮಗುವಾಗಲೇ ಹುಟ್ಟಿದೆ ಎಂದರ್ಥ. ಅಲ್ಲಿ ಮಗುವಿಲ್ಲವೆಂದು ಅವರು ಹೇಗೆ ತಾನೇ ಹೇಳುವರು? ಇದು ಅರ್ಥವಿಲ್ಲದ್ದು. ಒಬ್ಬಳು ಗರ್ಭಿಣಿಯಾದರೆ, ನಾವೇಕೆ ಅವಳು 'ಮಗುವನ್ನು ಧರಿಸಿದ್ದಾಳೆ' ಎನ್ನುತ್ತೇವೆ? ಅಂದರೆ ಮಗುವಾಗಲೇ ಹುಟ್ಟಿದೆ.

ಆದ್ದರಿಂದ, ನಾನು ಈ ಬ್ರೂಣ ಹತ್ಯೆಯನ್ನು ಮೂರ್ಖತೆಯ ಪರಮಾವಧಿ ಎಂದು ಹೇಳುತ್ತೇನೆ.

**ಶಿಷ್ಯ :** ಸರಿ, ಅವರು ಅದನ್ನು ವಿವೇಚನಾಯುತವಾದದ್ದೆಂಬುದಾಗಿ ಹೇಳುತ್ತಾರೆ.

**ಶ್ರೀಲ ಪ್ರಭುಪಾದ :** ಹೇಗೆ ?

**ಶಿಷ್ಯ :** ಕೆಲವೊಮ್ಮೆ ಅವರು ತಮಗೆ ಉತ್ತಮವೆನಿಸಿದುದನ್ನು ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಮತ್ತು ಖಂಡಿತವಾಗಿ ಮುಂದೆ ಅವರಿಗೆ ಶಿಕ್ಷೆಯಾಗುವುದೆನ್ನಲು ಕರ್ಮವೆನ್ನುವುದೊಂದಿದೆ ಎಂಬುದನ್ನು ಅಲ್ಲಗೆಳೆಯುತ್ತಾರೆ. ಅವರದು 'ಮೊಲದ ತತ್ವ'. ತೋಳವೊಂದು ಮೊಲದ ಮೇಲೆ ಎರಗಲು ಬಂದಾಗ, ಮೊಲವು ಒಡನೆಯೇ ತನ್ನ ಕಣ್ಣನ್ನು ಮುಚ್ಚಿಕೊಳ್ಳುತ್ತದೆ ಮತ್ತು ತಾನು ನಿಜವಾಗಿಯೂ ಸುರಕ್ಷಿತನೆಂದು ಭಾವಿಸುತ್ತದೆ.

**ಶ್ರೀಲ ಪ್ರಭುಪಾದರು :** ಹಾಗಾಗಿ, ಬ್ರೂಣ ಹತ್ಯೆ ಮಾಡುವವರು ಮೊಲದ ಸಿದ್ಧಾಂತವನ್ನು ನಂಬುತ್ತಾರೆ. ಅದು ಮನುಷ್ಯನ ತತ್ತ್ವವಲ್ಲ. ಅದು ಮೊಲದ ತತ್ತ್ವ, ಕಪ್ಪೆಯ ತತ್ತ್ವ, ಕತ್ತೆಯ ತತ್ತ್ವ ಮತ್ತು ಶ್ರೀಮದ್ಭಾಗವತದಲ್ಲಿ (2.3.19) ಇಂತಹವರನ್ನು; ***ಶ್ವ–ವಿನ್–ವರಾಹೋಷ್ಟ್ರ ಖರೈನ್ – ಸಂಸ್ತುತಾನ್ ಪುರುಷಾನ್ ಪಶೂನ್,*** ಬ್ರೂಣ ಹತ್ಯೆಯನ್ನು ಉತ್ತೇಜಿಸುವಂತಹ ನಾಯಕರೆಲ್ಲರೂ ಮೂರ್ಖರು ಮತ್ತು ಅವರೆಲ್ಲರೂ, ಅವರದೇ ತರಹದ ಇನ್ನಿತರ ಮೂರ್ಖರಿಂದ ಮತ್ತು ನೀಚ ಬುದ್ಧಿಯವರಿಂದ ಕೂಡಿದ ಸಾಮಾನ್ಯ ಜನರಿಂದ ಸ್ತುತಿಸಲ್ಪಡುತ್ತಾರೆ. ಇಡೀ ಮಾನವ ಕುಲವೇ ಮುರ್ಖರಿಂದ ಕೂಡಿರುವುದರಿಂದ, ಅವರೆಲ್ಲರೂ ಕೂಡಿ ಒಬ್ಬ ಮೂರ್ಖನನ್ನೇ ತಮ್ಮ ನಾಯಕನನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ನಂತರ ಈ ಮೂರ್ಖನಿಂದ ಅಸಮಾಧಾನಿತರಾಗಿ ಅವನನ್ನು ಅಧಿಕಾರದಿಂದ ಓಡಿಸಿ ಇನ್ನೊಬ್ಬ ಮೂರ್ಖನನ್ನು ಆಯ್ಕೆ ಮಾಡುತ್ತಾರೆ. ಇದು ***ಪುನಃ ಪುನಃ ಚರ್ವಿತ ಚರ್ವಣಾನಾಮ್;*** ಅಗಿದಿದ್ದನ್ನೇ ಅಗಿಯುತ್ತಿರುವುದು. ಜನರಿಗೆ ತಮ್ಮ ನಾಯಕನನ್ನಾಗಿ ಯಾರನ್ನು ಆಯ್ಕೆ ಮಾಡಿಕೊಳ್ಳಬೇಕೆಂಬುದೇ ತಿಳಿದಿಲ್ಲ. ಆದ್ದರಿಂದ ಅವರಿಗೆ ದೈವ ಪ್ರಜ್ಞೆಯಿಂದ ಕೂಡಿದ, ನಾಯಕನಾಗಲು ಅರ್ಹತೆಯುಳ್ಳಂತ ವ್ಯಕ್ತಿಯನ್ನು ಹೇಗೆ ಆರಿಸಬೇಕೆಂಬುದಕ್ಕೆ ಬೇಕಾದ ಜ್ಞಾನವನ್ನು ನೀಡಬೇಕು. ಆಗ ಅವರೆಲ್ಲರೂ ಸಂತೋಷದಿಂದಿರುತ್ತಾರೆ. ಇಲ್ಲದಿದ್ದರೆ ಅವರು ಒಬ್ಬ ಮೂರ್ಖನ ನಂತರ ಇನ್ನೊಬ್ಬ ಮೂರ್ಖ , ಮತ್ತೊಬ್ಬ ಮೂರ್ಖ, ಮಗದೊಬ್ಬ ಮೂರ್ಖ ಹೀಗೇ ಆಯ್ಕೆ ಮಾಡುತ್ತಿರುತ್ತಾರೆ. ಅಮೇರಿಕದಲ್ಲಿ ಒಂದು ಘೋಷಣೆ ಹೊರಡಿಸುತ್ತಾರೆ. ಅದೇನೆಂದರೆ 'ದೇವರಲ್ಲಿ ನಾವು ನಂಬಿಕೆಯಿಟ್ಟಿದ್ದೇವೆ' ಎಂಬುದಾಗಿ. ಆದ್ದರಿಂದ ನಾವು "ನನ್ನನ್ನು ರಾಷ್ಟ್ರಾಧ್ಯಾಕ್ಷನನ್ನಾಗಿ ಆಯ್ದುಕೊಳ್ಳಿ" ಎಂದು ಹೇಳುವುದಿಲ್ಲ. ಒಬ್ಬ ನಾಯಕನಿಗೆ ದೇವರು ಯಾರೆಂಬುದು ತಿಳಿದಿರುವುದೇ ಮತ್ತು ಅವನಲ್ಲಿ ಸಂಪೂರ್ಣವಾದ ನಂಬಿಕೆಯನ್ನಿಟ್ಟಿರುವುದೇ ಅರ್ಹತೆ ಎಂಬುದಾಗಿ ನಾವು ಹೇಳುತ್ತೇವೆ. ಮತ್ತು ಜನರಿಗೆ ದೇವರು ಯಾರೆಂಬುದು ನಿಜವಾಗಿಯೂ ತಿಳಿದುಕೊಳ್ಳಬೇಕಿದ್ದರೆ, ಅವರು 'ಭಗವದ್ಗೀತೆ' ಯನ್ನು ಓದಬಹುದು. ಅವರು ಅದನ್ನು ಓದಿ ಬುದ್ಧಿಮತ್ತೆಯನ್ನು ಉಪಯೋಗಿಸಿ ಅರ್ಥಮಾಡಿಕೊಳ್ಳಬೇಕು, ಮತ್ತು ಇನ್ನೂ ಹೆಚ್ಚಿನ ಆಧ್ಯಾತ್ಮಿಕ ಬೆಳವಣಿಗೆಗಾಗಿ ಅವರು ಶ್ರೀಮದ್ಭಾಗವತವನ್ನು ಓದಬಹುದು. ನಾವು ಇದನ್ನು ಸಿದ್ಧಾಂತಗೊಳಿಸುತ್ತಿಲ್ಲ. ನಾವು ದೇವರ ಬಗೆಗಿನ ವಿಷಯಗಳನ್ನು ಅಧಿಕೃತ ಪುಸ್ತಕಗಳಿಂದ ತೆಗೆದುಕೊಂಡಿದ್ದೇವೆ.

**ಶಿಷ್ಯ :** ರಾಜಕಾರಣದ ನಮ್ಮ ಕರಪತ್ರದಲ್ಲಿ , ನಾವು ನಾಯಕನಿಗಿರಬೇಕಾದ ಅರ್ಹತೆಗಳನ್ನು ಪಟ್ಟಿ ಮಾಡುತ್ತೇವೆ. ಮೊದಲಿಗೆ ನಾವು, ಅವನು ನಾಲ್ಕು ನಿಯಂತ್ರಿತ ತತ್ತ್ವಗಳನ್ನು ಪಾಲಿಸಬೇಕೆಂದು ಹೇಳುತ್ತೇವೆ, ಅನೈತಿಕ ಸಂಬಂಧವನ್ನು ವರ್ಜಿಸಿರಬೇಕು, ಜೂಜಾಟವನ್ನು ವರ್ಜಿಸಿರಬೇಕು, ಮಾಂಸವನ್ನು ವರ್ಜಿಸಿರಬೇಕು, ಅಮಲಿನ ಪದಾರ್ಥಗಳನ್ನು ವರ್ಜಿಸಿರಬೇಕು. ಮತ್ತು ಒಂದು ಧನಾತ್ಮಕವಾದ ಆಜ್ಞೆಯನ್ನು ಕೊಡುತ್ತೇವೆ, ಅದು ಭಗವಂತನ ಪವಿತ್ರನಾಮಗಳನ್ನು ಆ ನಾಯಕನಾಗುವವನು ಜಪಿಸಬೇಕು ಎಂದು. ಆದರೆ ಕೆಲವರು ಈ ಅವಶ್ಯಕತೆಗಳು ಸಾಂವಿಧಾನಿಕ ತತ್ತ್ವಗಳಾದ 'ಚರ್ಚ್ ಮತ್ತು ರಾಜ್ಯಗಳ ಪ್ರತ್ಯೇಕತೆ' ಯನ್ನು ಉಲ್ಲಂಘಿಸಿದಂತಾಗಬಹುದೆಂದು ವಾದಿಸುತ್ತಾರೆ.

**ಶ್ರೀಲ ಪ್ರಭುಪಾದರು :** ನಿನಗೆ ದೇವರಲ್ಲಿ ನಂಬಿಕೆಯಿದ್ದರೆ, ಭಗವಂತನ ಪವಿತ್ರನಾಮಗಳನ್ನು ಜಪಿಸಲು ಆಕ್ಷೇಪಣೆ ಏಕೆ ? ನೀವು 'ನಾವು ಭಗವಂತನನ್ನು ನಂಬಿದ್ದೇವೆ' ಎಂದು! ಹೇಳುವುದೇ ಆದರೆ, ನಿಮಗೆ ಭಗವಂತನ ಹೆಸರು ಮತ್ತು ವಿಳಾಸಗಳು ತಿಳಿದಿರಬೇಕು. ಆಗ ನೀವು ಅವನನ್ನು ನಿಜವಾಗಿಯೂ ನಂಬಬಹುದು ಮತ್ತು ನಿಮಗೆ ಇವೆಲ್ಲ ಗೊತ್ತಿಲ್ಲವೆಂದಾದಲ್ಲಿ, ನಮ್ಮಿಂದ ಕಲಿಯಿರಿ. ನಾವು ನಿಮಗೆ ಭಗವಂತನ ಹೆಸರು, ವಿಳಾಸ, ಗುಣಗಳು ಎಲ್ಲವನ್ನು ಕೊಡುತ್ತೇವೆ ಮತ್ತು ನೀವು ದೇವರೇ ಇಲ್ಲ ಎನ್ನುವವರಾದರೆ, 'ನಾವು ದೇವರನ್ನು ನಂಬಿದ್ದೇವೆ' ಎನ್ನುವುದರ ಅರ್ಥವೇನು?

**ಶಿಷ್ಯ :** ಚರ್ಚ್ ಹಾಗೂ ರಾಜ್ಯಗಳನ್ನು ಪ್ರತ್ಯೇಕಿಸುವ ಪ್ರಚಾರ ಮಾಡಿದ್ದಾರೆ, ಆದರೆ ಅವರು ದೇವರು ಮತ್ತು ದೇಶವನ್ನೂ ಸಹ ಪ್ರತ್ಯೇಕಿಸಿದ್ದಾರೆ.

**ಶ್ರೀಲ ಪ್ರಭುಪಾದರು :** ಇಂತಹ

ಪ್ರಚಾರಗಳನ್ನು ಮಾಡುತ್ತಿರುವವರಿಗೆ ದೇವರೆಂದರೆ ಯಾರೆಂಬುದು ಅರ್ಥವಾಗುವುದಿಲ್ಲ. ಭಗವಂತನನ್ನು ಯಾವುದರಿಂದಲೂ ಬೇರ್ಪಡಿಸಲು ಆಗುವುದಿಲ್ಲ, ಏಕೆಂದರೆ ಎಲ್ಲವೂ ಭಗವಂತನೇ ಆಗಿದ್ದಾನೆ ***(ಮಯಾ ತತಂ ಇದಂ ಸರ್ವಂ)*** . ಅವರು ಭಗವದ್ಗೀತೆಯನ್ನು ಓದಿದರೆ, ಅವರಿಗೆ ಭಗವಂತನು ಎಲ್ಲೆಡೆ ಇದ್ದಾನೆ ಎಂದು ತಿಳಿಯುತ್ತದೆ. ಅವನಿಂದ ಏನನ್ನೂ ಬೇರ್ಪಡಿಸಲಾಗದು. ಹೇಗೆ ನಿಮ್ಮ ಪ್ರಜ್ಞೆಯು ನಿಮ್ಮ ದೇಹದ ಎಲ್ಲೆಡೆಯಲ್ಲಿದೆಯೋ ಹಾಗೆಯೇ ಪರಮೋಚ್ಚ ಪ್ರಜ್ಞೆಯಾದ ಭಗವಂತನು ಈ ವಿಶ್ವದ ಎಲ್ಲೆಡೆಯೂ ಇದ್ದಾನೆ. ಕೃಷ್ಣನು, ***"ವೇದಾಹಂ ಸಮತೀತಾನಿ"***. "ಹಿಂದೆ ನಡೆದುದೆಲ್ಲವನ್ನು ನಾನು ಬಲ್ಲೆನು" ಎಂದು ಹೇಳುತ್ತಾನೆ. ಅವನು ಎಲ್ಲೆಡೆ ಇಲ್ಲದಿದ್ದರೆ, ಅವನಿಗೆ ಹೇಗೆ ತಾನೇ ಎಲ್ಲವೂ ತಿಳಿದಿರುತ್ತದೆ? ನೀವೇನು ಹೇಳುವಿರಿ?

**ಶಿಷ್ಯ :** ಇದು ತಾರ್ಕಿಕವಾದ ಮಾತಾಗಿದೆ, ಶ್ರೀಲ ಪ್ರಭುಪಾದರೆ.

**ಶ್ರೀಲ ಪ್ರಭುಪಾದರು :** ಹೇಗೆ ತಾನೆ ನೀವು ಭಗವಂತನನ್ನು ಸರ್ಕಾರದಿಂದ ಬೇರ್ಪಡಿಸುವಿರಿ. ನೀವು "ಹೌದು, ದೇವರು ಮತ್ತು ರಾಜ್ಯಗಳನ್ನು ಬೇರ್ಪಡಿಸಬೇಕು", ಎಂಬುದನ್ನು ಒಪ್ಪಿಕೊಳ್ಳುವಂತಹ (ಚರ್ಚ್ ಎಂದು ಕರೆಸಿಕೊಳ್ಳುವ) ನೆಪ ಮಾತ್ರಕ್ಕೆ ಚರ್ಚ್ ಮತ್ತು ನೆಪ ಮಾತ್ರದ ಧರ್ಮಗಳನ್ನು ಧಿಕ್ಕರಿಸಬಹುದು. ಮತ್ತು ಅದೇ ದೇವರ ಅನುಜ್ಞೆಯೂ ಆಗಿದೆ. ***'ಸರ್ವ ಧರ್ಮಾನ್ ಪರಿತ್ಯಜ್ಯ ಮಾ ಮೇಕಂ ಶರಣಂ ವ್ರಜ;'*** " ಧರ್ಮವೆಂದು ಕರೆಯಿಸಿಕೊಳ್ಳುವಂತಹ ನೆಪ ಮಾತ್ರ ಧರ್ಮಗಳನ್ನು ತೊರಿಯಿರಿ ಮತ್ತು ನನಗೆ ಶರಣಾಗತರಾಗಿ " ಎಂದು ಭಗವದ್ಗೀತೆಯಲ್ಲಿ ಕೃಷ್ಣನೂ ಹೇಳುತ್ತಾನೆ. ಜನರು ತಾವು ದೇವರನ್ನು ನಂಬುವುದಾಗಿ ಹೇಳಬಹುದು, ಆದರೆ ಅವರಿಗೆ ದೇವರೆಂದರೆ ಯಾರೆಂಬುದೇ ತಿಳಿದಿಲ್ಲವಾದ್ದರಿಂದ ದೇವರನ್ನು ಸರ್ಕಾರದಿಂದ ಬೇರ್ಪಡಿಸುತ್ತಾರೆ.

ಮಹಾಮಂತ್ರ ಜಪಿಸಿ....

ಹರೇ ಕೃಷ್ಣ
ಹರೇ ಕೃಷ್ಣ
ಕೃಷ್ಣಕೃಷ್ಣ
ಹರೇ ಹರೇ
ಹರೇ ರಾಮ
ಹರೇ ರಾಮ
ರಾಮ ರಾಮ
ಹರೇ ಹರೇ


.....ಆನಂದಿಸಿ


ಭಾನುವಾರದ ಊಟ...!



ನಿಮಗೆಲ್ಲರಿಗೂ ಸ್ವಾಗತ...!


**ಇಸ್ಕಾನ್ ಕಲ್ಚರಲ್ ಸೆಂಟರ್‌ನಲ್ಲಿ ನಡೆಯುವ ಕಾರ್ಯಕ್ರಮಗಳು....**



**ಸಂಜೆ 5.00ಕ್ಕೆ – ಕೀರ್ತನೆ ಮತ್ತು ಭಜನೆ**

**ಸಂಜೆ 5.30ಕ್ಕೆ – ಭಗವದ್ಗೀತಾ ಪ್ರವಚನ**

**ಸಂಜೆ 7.00ಕ್ಕೆ – ಊಟ ಪ್ರಸಾದ**



ಇಸ್ಕಾನ್ ಕಲ್ಚರಲ್ ಸೆಂಟರ್

**ಸಂವೃದ್ಧಿ ಎನ್‌ಕ್ಲೇವ್, 3ನೇ ಮುಖ್ಯ ರಸ್ತೆ, ಕುಮಾರಸ್ವಾಮಿ ಲೇಔಟ್ 2ನೇ ಹಂತ, ಬೆಂಗಳೂರು.**

98440 11834, 98440 55108, www.iskconbengaluru.co.in

# ಶ್ರೀಮದ್ಭಾಗವತಮ್

– ಅನುವಾದ ಮತ್ತು ಭಾಷ್ಯ: ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಸ್ಥೆಯ ಸಂಸ್ಥಾಪಕಾಚಾರ್ಯರಾದ ಕೃಷ್ಣಕೃಪಾ ಶ್ರೀಮೂರ್ತಿ ಎ.ಸಿ.ಭಕ್ತಿವೇದಾಂತಸ್ವಾಮಿ ಪ್ರಭುಪಾದರು

## ಶ್ಲೋಕ – 1.4.2

**ಶೌನಕ ಉವಾಚ**

**ಸೂತ ಸೂತ ಮಹಾಭಾಗ ವದ ನೋ ವದತಾಂ ವರ ।**


**ಕಥಾಂ ಭಾಗವತೀಂ ಪುಣ್ಯಾಂ ಯದಾಹ ಭಗವಾಂಶುಕಃ ॥2॥**

**ಅನುವಾದ**

ಶೌನಕರು ಹೇಳಿದರು – ಎಲೈ ಸೂತಮುನಿಗಳೇ, ಪ್ರವಚನಕಾರರಲ್ಲೆಲ್ಲ ನೀವು ಅತ್ಯಂತ ಭಾಗ್ಯಶಾಲಿಗಳು ಮತ್ತು ಗೌರವಾನ್ವಿತರು. ಶ್ರೇಷ್ಠರೂ ಹಾಗೂ ಶಕ್ತಿ ಸಂಪನ್ನರೂ ಆದ ಶುಕಮುನಿಗಳು ಹೇಳಿದ ಶ್ರೀಮದ್ಭಾಗವತದ ಪುಣ್ಯ ಸಂದೇಶವನ್ನು ನೀವು ದಯವಿಟ್ಟು ನಮಗೆ ತಿಳಿಸಿರಿ.

**ಭಾವಾರ್ಥ**

ಶುಕಮುನಿಗಳು ಹೇಳಿದ್ದ ಭಾಗವತವನ್ನು ಕೇಳಲು ಶೌನಕಮುನಿಗಳು ಹಾಗೂ ಸಭಾಸದರು ಉತ್ಸುಕರಾಗಿದ್ದರು. ಹೀಗಾಗಿ ಸೂತಮುನಿಗಳನ್ನು ಶೌನಕರು ಹೆಚ್ಚು ಸಂತೋಷದಿಂದ ಎರಡು ಸಲ ಉದ್ದೇಶಿಸಿ ಹೇಳಿದರು. ತಮ್ಮ ಉದ್ದೇಶಕ್ಕೆ ತಕ್ಕಂತೆ ತಮ್ಮದೇ ಆದ ರೀತಿಯಲ್ಲಿ ಭಾಗವತವನ್ನು ವ್ಯಾಖ್ಯಾನಿಸುವ ಮೋಸದ ವ್ಯಕ್ತಿಗಳಿಂದ ಪ್ರವಚನ ಕೇಳಲು ಅವರು ಯಾರೂ ಸಿದ್ಧರಿರಲಿಲ್ಲ. ಸಾಮಾನ್ಯವಾಗಿ ಭಾಗವತ



ಪ್ರವಚನಕಾರರೆನ್ನಿಸಿಕೊಂಡವರೆಲ್ಲ ವೃತ್ತಿನಿರತ ಪ್ರವಚನಕಾರರು ಅಥವಾ ಭಗವಂತನ ದಿವ್ಯ ಲೀಲೆಯನ್ನು ಅರ್ಥಮಾಡಿಕೊಳ್ಳದ, ಅದರಲ್ಲಿ ಪ್ರವೇಶ ಪಡೆಯದ ಅದ್ವೈತವಾದಿ ಜ್ಞಾನಿಗಳು. ಅಂತಹ ಅದ್ವೈತವಾದಿ ಜ್ಞಾನಿಗಳು ಭಾಗವತವನ್ನು ತಮ್ಮ ಮಾಯಾವಾದಿ ನಿಲುವುಗಳಿಗೆ ತಕ್ಕಂತೆ ತಿರುಚಿ ಹೇಳುತ್ತಾರೆ. ವೃತ್ತಿ ನಿರತ ಪ್ರವಚನಕಾರರು ಭಗವಂತನ ಲೀಲೆಯ ತೀರ ವೈಯಕ್ತಿಕವಾದ ಭಾಗವನ್ನು ತಪ್ಪಾಗಿ ವಿವರಿಸಲು ನೇರವಾಗಿ ಹತ್ತನೇ ಸ್ಕಂಧಕ್ಕೇ ಧಾವಿಸಿಬಿಡುತ್ತಾರೆ. ಇವರಿಬ್ಬರೂ ಭಾಗವತ ಪ್ರವಚನಕ್ಕೆ ಯೋಗ್ಯರಾದವರಲ್ಲ. ಶುಕಮುನಿಗಳ ಪ್ರವಚನದ ಬೆಳಕಿನಲ್ಲಿ ಭಾಗವತವನ್ನು ವ್ಯಾಖ್ಯಾನಿಸಬಲ್ಲಂಥವರು ಮತ್ತು ಶುಕಮುನಿಗಳು ಹಾಗೂ ಅವರ ಪ್ರತಿನಿಧಿಗಳನ್ನು ಆಲಿಸಲು ಸಿದ್ಧವಿರುವಂತಹವರು ಮಾತ್ರ ಶ್ರೀಮದ್ಭಾಗವತದ ದಿವ್ಯ ಸಂವಾದದಲ್ಲಿ ನಿಜವಾಗಿ ಪಾಲ್ಗೊಳ್ಳಬಲ್ಲ ಸಮರ್ಥರು.

# ವೇದ ವಿಚಾರಗಳು

''ಅದೃಷ್ಟಹೀನರಾದ ಮನುಷ್ಯರು ವೈಕುಂಠ ಲೋಕಗಳ ವರ್ಣನೆಯನ್ನು ಚರ್ಚಿಸುವುದಿಲ್ಲ. ಆದರೆ ಅವರು ಕೇಳಲು ತಕ್ಕುದಲ್ಲದ ಮತ್ತು ಬುದ್ಧಿ ಭ್ರಮಣೆಯನ್ನು ಉಂಟುಮಾಡುವ ವಿಷಯಗಳಲ್ಲಿ ಮಗ್ನರಾಗಿರುತ್ತಾರೆ. ವೈಕುಂಠದ ವಿಷಯಗಳನ್ನು ಬಿಟ್ಟು ಭೌತಿಕ ಜಗತ್ತಿನ ವಿಷಯವಾಗಿ ಮಾತನಾಡುವವರು ಅಜ್ಞಾನದ ಗಾಢಾಂಧಕಾರದ ವಲಯಕ್ಕೆ ಬಿಸುಡಲ್ಪಡುವರು.''

**– ಶ್ರೀ ಬ್ರಹ್ಮದೇವರು, ಶ್ರೀಮದ್ಭಾಗವತ** 3.15.23

''ಯಾವುದರ ಪ್ರಕಾಶದಿಂದ ಮಾತ್ರ ಈ ಭೌತಿಕ ಜಗತ್ತಿನೊಳಗಿನ ಪ್ರಕಾಶಮಯವಾದ ಎಲ್ಲ ಗ್ರಹಗಳೂ ತಮ್ಮ ಪ್ರತಿಫಲಿತ ಪ್ರಕಾಶವನ್ನು ಬೀರಬಲ್ಲವೋ, ಆ ಸ್ವಯಂಪ್ರಕಾಶಿತ ವೈಕುಂಠ ಲೋಕಗಳನ್ನು ಪರಜೀವಿ ದಯಾಪರರಲ್ಲದೆ ಇರುವವರು ತಲಪಲು ಸಾಧ್ಯವಿಲ್ಲ.''

**– ಶ್ರೀ ಮೈತ್ರೇಯ ಋಷಿ**

**ಶ್ರೀಮದ್ಭಾಗವತ** 4.12.36

''ನಿನ್ನ ಹೃದಯದಲ್ಲಿ ಶತ್ರುಮಿತ್ರರ ನಡುವೆ ಭೇದವೆಣಿಸಬೇಡ; ಎಲ್ಲರನ್ನೂ ಸಮಾನ ಭಾವದಿಂದ ಕಾಣು. ಈ ಜಗತ್ತಿನಲ್ಲಿ ಲಂಗುಲಗಾಮಿಲ್ಲದ ಮತ್ತು ಮಾರ್ಗ ಭ್ರಷ್ಟವಾದ ಮನಸ್ಸೊಂದೇ ಶತ್ರು. ಅದನ್ನು ಬಿಟ್ಟರೆ ಬೇರಾವ ಶತ್ರುವೂ ಇಲ್ಲ. ಪ್ರತಿಯೊಬ್ಬನನ್ನೂ ಸಮಾನತೆಯ ನೆಲೆಯಲ್ಲಿ ನೋಡಿದರೆ, ವ್ಯಕ್ತಿಯು ಭಗವಂತನನ್ನು ಪರಿಪೂರ್ಣವಾಗಿ ಆರಾಧಿಸುವ ಹಂತಕ್ಕೆ ಬರುತ್ತಾನೆ.''

**– ಪ್ರಹ್ಲಾದ ಮಹಾರಾಜ, ಶ್ರೀಮದ್ಭಾಗವತ** 7.8.9

''ತತ್ತ್ವಜ್ಞಾನವಿಲ್ಲದ ಧರ್ಮವು ಬರಿಯ ಭಾವ ಅಷ್ಟೇ. ಅದು ಒಮ್ಮೊಮ್ಮೆ ಧರ್ಮಾಂಧತೆಯಾಗುತ್ತದೆ. ಧರ್ಮವಿಲ್ಲದ ತತ್ತ್ವಜ್ಞಾನವು ಮಾನಸಿಕ ಊಹೆಯಷ್ಟೇ ಆಗುತ್ತದೆ.''

**– ಪರಮ ಪೂಜ್ಯ ಎ.ಸಿ.ಭಕ್ತಿವೇದಾಂತ ಸ್ವಾಮಿ ಪ್ರಭುಪಾದ**

**ಭಗವದ್ಗೀತಾ ಯಥಾರೂಪ** 3.3, **ಭಾವಾರ್ಥ**

''ಈ ಭೌತಿಕ ಜಗತ್ತಿನಲ್ಲಿ, ಜೀವಾತ್ಮನ ಏಕೈಕ ಕರ್ತವ್ಯವೆಂದರೆ, ಭಕ್ತಿಯೋಗದ ಪಥವನ್ನು ಸ್ವೀಕರಿಸಿ ಭಗವಂತನ ಪವಿತ್ರ ನಾಮವನ್ನು ಜಪಿಸುವುದು.''

**– ಶ್ರೀ ಯಮರಾಜ**

**ಶ್ರೀಮದ್ಭಾಗವತ** 6.3.22